ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಸೆಪ್ಟೆಂಬರ್ 24 ಮಂಗಳವಾರ 2024

₹4

ಸಂಪುಟ: 45 | ಸಂಚಿಕೆ: 159 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಗಣಪತಿ ಮೆರವಣಿಗೆಗಳ ಮೇಲಿನ ದಾಳಿ ಖಂಡಿಸಿ ಮೈಸೂರಲ್ಲಿ ಹಿಂದೂ ಪರ ಸಂಘಟನೆಗಳ ಪ್ರತಿಭಟನೆ



ರಾಜ್ಯದಲ್ಲಿ ಗಣಪತಿ ಮೆರವಣಿಗೆಗಳ ಮೇಲೆ ನಡೆಯುತ್ತಿರುವ ದಾಳಿ ಖಂಡಿಸಿ, ಮೈಸೂರಲ್ಲಿ ಹಿಂದೂ ಪರ ಸಂಘಟನೆಗಳ ಒಕ್ಕೂಟದ ವತಿಯಿಂದ ನಡೆದ ಪ್ರತಿಭಟನಾ ಮೆರವಣಿಗೆಯಲ್ಲಿ ಮಾಜಿ ಸಂಸದ ಪ್ರತಾಪ್ ಸಿಂಹ ಮಾತನಾಡಿದರು.

ಮೈಸೂರು, ಸೆ.23(ಜಿಎ)–ರಾಜ್ಯದಲ್ಲಿ ಗಣಪತಿ ಮೆರವಣಿಗೆಗಳ ಮೇಲೆ ನಡೆಯುತ್ತಿರುವ ದಾಳಿ ಖಂಡಿಸಿ, ಮೈಸೂರಲ್ಲಿ ಹಿಂದೂ ಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಸೋಮವಾರ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.

ನಜರ್‌ಬಾದ್‌ನಲ್ಲಿರುವ ಮಲೆಮಹದೇಶ್ವರ ರಸ್ತೆಯ ಮಹದೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ, ನಂತರ ನಂದಿನಿ ಹಳೆ ಡೈರಿ ಮುಂಭಾಗ ಜಮಾವಣೆಗೊಂಡ ಪ್ರತಿಭಟನಾಕಾರರು ರಾಜ್ಯ ಸರ್ಕಾರ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಪೊಲೀಸ್ ಇಲಾಖೆ ವಿರುದ್ಧ ವಿವಿಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಪ್ರತಿಭಟನೆಗೆ ಮಾಜಿ ಸಂಸದ ಪ್ರತಾಪ್ ಸಿಂಹ ಸಾಥ್ ನೀಡಿದರು.

ಈ ವೇಳೆ ಮಾತನಾಡಿದ ಅವರು, ಮುಂದಿನ ವರ್ಷ ಗಣೇಶೋತ್ಸವ ನಡೆಸಬಾರದು ಎಂದು ಈಗ ಮುಸ್ಲಿಂರು ಸಿಕ್ಕ ಸಿಕ್ಕ ಕಡೆ ಗಲಾಟೆ ಮಾಡುತ್ತಿದ್ದಾರೆ. ಆಂಧ್ರ ಪ್ರದೇಶ ಒಬ್ಬ ಕ್ರಿಶ್ಚಿಯನ್ ಕೈಗೆ ಸಿಕ್ಕ ಕಾರಣ ಪವಿತ್ರವಾದ ತಿರುಪತಿ ಲಡ್ಡುವಿಗೆ ಹಂದಿ, ದನದ ಕೊಬ್ಬು, ಮೀನಿನ ಎಣ್ಣೆ ಹಾಕುತ್ತಾರೆ ಎಂದರೆ ಇವರ ಮನಸ್ಥಿತಿ ಲೆಕ್ಕ ಹಾಕಿ. ಇದು ಕರ್ನಾಟಕದಲ್ಲಿ ಶುರುವಾಗುವ ಕಾಲ ದೂರವಿಲ್ಲ ಎಂದು ಆತಂಕ ವ್ಯಕ್ತಪಡಿಸಿದರು.

ಈದ್ ಮೆರವಣಿಗೆ ಮೇಲೆ ಒಬ್ಬ ಹಿಂದೂವಾದರೂ ಕಲ್ಲು ಹಾಕಿದ್ನಾ? ಮುಸ್ಲಿಮರಿಗೆ ಮೆಕ್ಕಾ ಪವಿತ್ರಭೂಮಿ. ಕ್ರಿಶ್ಚಿಯನ್‌ರಿಗೆ ರೋಮ್ ಪವಿತ್ರ ಭೂಮಿ. ಹೀಗಾಗಿ ಈ ಹಿಂದೂ ಭೂಮಿ ಮೇಲೆ ಅಶಾಂತಿ ನಿರ್ಮಾಣ ಮಾಡುತ್ತಾರೆ. ಹಿಂದೂಗಳು ಶಾಂತಿ ಪ್ರಿಯರು ಎಂಬ ಪಟ್ಟ ಸಾಕು. ಧರ್ಮ ರಕ್ಷಣೆಗೆ ಎಲ್ಲಾ ಹಿಂದೂಗಳು ಮುಂದಾಗಬೇಕು. ಗೌಡ, ಲಿಂಗಾಯತ, ಕುರುಬ ಎಂಬ ಜಾತಿ ಮನಃಸ್ಥಿತಿ ಬಿಟ್ಟು ಹಿಂದೂಗಳಾಗಿ ಎಂದು ಕರೆ ನೀಡಿದರು.

ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮಹಿಷ ದಸರಾ ವಿಚಾರವಾಗಿ ಪ್ರತಿಕ್ರಿಯಿಸಿ, ಹಿಂದೂಗಳೆಲ್ಲಾ ಒಟ್ಟಾಗಿ ಮಹಿಷ ದಸರಾ ವಿರೋಧಿಸಬೇಕು. ತಾಯಿ ಚಾಮುಂಡಿಗೆ ಅವಮಾನ ಮಾಡುವ ಮಹಿಷ ದಸರಾ ನಡೆಯಬಾರದು. ನಾವೆಲ್ಲಾ ಸೇರಿ ಹೋರಾಡಬೇಕು. ಇಲ್ಲದಿದ್ದರೆ ಚಾಮುಂಡಿ ತಾಯಿ ಬಳಿ ಹೋಗಿ ಬೇಡುವ ಅರ್ಹತೆ ಕಳೆದು ಕೊಳ್ತಿವಿ ಎಂದರು.

ದಾವಣಗೆರೆ ಗಣೇಶೋತ್ಸವದ ವೇಳೆ ಗಲಾಟೆ ಬಗ್ಗೆ ಮಾತನಾಡಿ, ಹಿಂದೂಗಳ ಹತ್ಯೆ ಮಾಡುವ ಸಂಚಿತ್ತು ಎಂದು ಪೊಲೀಸರೇ ಹೇಳಿದ್ದಾರೆ. ರಾಜ್ಯ ಸರ್ಕಾರದ ಕುಮ್ಮಕ್ಕಿನಿಂದ ಮುಸ್ಲಿಂರು ನಡೆಸುತ್ತಿರುವ ವ್ಯವಸ್ಥಿತ ದಾಳಿ ಇದು. ಗಲಭೆ ಹೆಸರಿನಲ್ಲಿ ಗಣೇಶೋತ್ಸವ ನಿಲ್ಲಿಸಲು ವ್ಯವಸ್ಥಿತ ಪ್ಲಾನ್ ಸಿದ್ಧವಾಗುತ್ತಿದೆ. ಕರ್ನಾಟಕದಲ್ಲಿ ಗಣೇಶೋತ್ಸವವನ್ನು ವ್ಯವಸ್ಥಿತವಾಗಿ ಮುಗಿಸುವ ಪ್ಲಾನ್ ನಡೆದಿದೆ ಎಂದರು. ಪ್ರತಿಭಟನೆಯಲ್ಲಿ ಬಿಜೆಪಿ ನಗರಾಧ್ಯಕ್ಷ ಎಲ್.ನಾಗೇಂದ್ರ, ಒಕ್ಕೂಟದ ಸಂಚಾಲಕ ಮೈ.ಕಾ.ಪ್ರೇಮ್‌ಕುಮಾರ್, ವಕೀಲ ಸಿ.ವಿ.ಕೇಶವಮೂರ್ತಿ, ಜಿಲ್ಲಾ ಬ್ರಾಹ್ಮಣ ಸಂಘದ ಡಿ.ಟಿ.ಪ್ರಕಾಶ್, ಸಂಜಯ್, ಚಂದ್ರಶೇಖರ್, ಸ್ಮಾರ್ಟ್ ಮಂಜು, ಸಚ್ಚಿನ್, ಸಂತೋಷ್ ಶಂಭು, ಸಂಪತ್ ವೀರನಗೆರೆ, ಪ್ರದೀಶ್ ಸೇರಿದಂತೆ ನೂರಾರು ಮಂದಿ ಪಾಲ್ಗೊಂಡಿದ್ದರು.

ಚಾಮುಂಡಿ ಚಲೋ

"ಮಹಿಷಾ ದಸರಾ ನಡೆಯಲು ಬಿಡಲ್ಲ. ಮಹಿಷನ ಮೇಲೆ ನಂಬಿಕೆ ಇದ್ದರೆ ಮನೆಯಲ್ಲೆ ಪೂಜೆ ಮಾಡಿಕೊಳ್ಳಿ. ಹಿಂದೂ ಸಮಾಜವಾಗಿ ನಾವೆಲ್ಲಾ ಒಟ್ಟಾಗಿ ಇರೋಣಾ. ಮಹಿಷಾ ದಸರಾ ಹೆಸರಿನಲ್ಲಿ ಒಡಕು ಮೂಡಿಸಿಕೊಳ್ಳುವುದು ಬೇಡ. ಮಹಿಷಾ ದಸರಾ ಮಾಡಲು ಚಾಮುಂಡಿಬೆಟ್ಟ ಸರಿಯಾದ ಜಾಗವಲ್ಲ. ಮನೆಗಳಲ್ಲಿ ಬೇಕಾದರೆ ಮಹಿಷಾ ಫೋಟೋ ಇಟ್ಟುಕೊಳ್ಳಿ. ಅವನ ಥರದ ಮಗುವೆ ಹುಟ್ಟಲಿ ಎಂದು ಪೂಜೆ ಮಾಡಿ. ಹಿಂದೂ ಸಮಾಜ ಒಡೆಯುವುದು ಬೇಡ. ದಸರಾ ಬಂದಾಗ ಅಪಸ್ವರ ಬೇಡ. ಚಾಮುಂಡಿಬೆಟ್ಟದಲ್ಲಿ ಮಹಿಷ ದಸರಾ ಮಾಡುತ್ತೇವೆ. ಅಂದರೆ ಚಾಮುಂಡಿ ಭಕ್ತರು ಕೂಡ ಅಂದೇ ಚಾಮುಂಡಿ ಚಲೋ ಮಾಡ್ತಿವಿ. ಮಹಿಷಾಸುರ, ಕಂಸ, ರಾವಣ ಯಾರನ್ನಾದರೂ ಮನೆಯಲ್ಲಿ ಆರಾಧನೆ ಮಾಡಿ. ಆದರೆ ಚಾಮುಂಡಿಬೆಟ್ಟದಲ್ಲಿ ಅಲ್ಲ. ಇದಕ್ಕೆ ಚಾಮುಂಡಿ ಭಕ್ತರು ಅವಕಾಶ ಮಾಡಿಕೊಡಲ್ಲ.

–ಪ್ರತಾಪ್‌ಸಿಂಹ, ಮಾಜಿ ಸಂಸದ

ಸೆ.27ರಿಂದ ಮೈಸೂರು ಮೆಡಿಕಲ್ ಕಾಲೇಜು ಶತಮಾನೋತ್ಸವ ಸಂಭ್ರಮಾಚರಣೆ



ಮೈಸೂರು,ಸೆ.23–ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಮತ್ತು ಮೈಸೂರು ವೈದ್ಯಕೀಯ ಕಾಲೇಜು ಹಳೆಯ ವಿದ್ಯಾರ್ಥಿಗಳ ಸಂಘ (ಮಾ)ದ ಶತಮಾನೋತ್ಸವ ಸಂಭ್ರಮಾಚರಣೆಯನ್ನು ಸೆ. 27ರಿಂದ 29ರವರೆಗೆ ಜೆ.ಕೆ.ಮೈದಾನದಲ್ಲಿರುವ ಪ್ಲಾಟಿನಂ ಜ್ಯೂಬಿಲಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಈ ವೇಳೆ ಪ್ರಪಂಚದಾದ್ಯಂತ ಇರುವ ವಿದ್ಯಾರ್ಥಿಗಳು ಮತ್ತು ಸುಮಾರು 1500 ಪ್ರತಿನಿಧಿಗಳು ಭಾಗವಹಿಸುವ ನಿರೀಕ್ಷೆಯಿದೆ.

ಸೆ.28ರಂದು ಮಧ್ಯಾಹ್ನ 1958ರ ಬ್ಯಾಚಿನ ಹಳೆಯ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಗುವುದು. ಈ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಮೂರು ದಿನಗಳ ಕಾಲ ನಡೆಯುವ ಕಾರ್ಯಕ್ರಮದಲ್ಲಿ 6 ಶತಮಾನೋತ್ಸವ ಭಾಷಣಗಳನ್ನು ಎಂಎಂಸಿಯ ಖ್ಯಾತ ಹಳೆಯ ವಿದ್ಯಾರ್ಥಿಗಳಾದ ಡಾ.ಸಿ.ಎನ್. ಮಂಜುನಾಥ್, ಐಐಎಸ್‌ಸಿಯ ಡಾ.ಪರಮೇಶ್, ಅಮೇರಿಕಾದ ಡಾ.ಕೋಲಾರ್ ಎನ್.ಮೂರ್ತಿ, ಆದಿಚುಂಚನಗಿರಿ ವಿಶ್ವವಿದ್ಯಾನಿಲಯದ ಕುಲಪತಿ ಡಾ.ಎಂ.ಎ. ಶೇಖರ್, ಎಸ್‌ವೈವಿಎಂನ ಸಂಸ್ಥಾಪಕರಾದ ಡಾ.ಬಾಲಸುಬ್ರಮಣ್ಯಂ, ವೈದ್ಯಕೀಯ ವಿಜ್ಞಾನಿ ಡಾ.ಪ್ರಶಾಂತ್ ನಡೆಸಿಕೊಡಲಿದ್ದಾರೆ.

ಮೈಸೂರು ಅರಮನೆ ಉತ್ತರ ದ್ವಾರದಿಂದ ಜೆ.ಕೆ.ಮೈದಾನದವರೆಗೆ ಶತಮಾನೋತ್ಸವ ನಡಿಗೆ ಹಮ್ಮಿಕೊಳ್ಳಲಾಗಿದ್ದು, ಎಂಎಂಸಿ ಸಂಸ್ಥಾಪಕರಾದ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಪುಷ್ಪ ನಮನ ಸಲ್ಲಿಸಲಾಗುವುದು.

ಆರ್‌ಜಿಯುಎಚ್‌ಎಸ್‌ನ ಪ್ರಥಮ ಕುಲಪತಿ ಡಾ.ಕಾಂತಾ ಎಸ್.ಜಾದವ್, ಮಾಜಿ ಕುಲಪತಿಗಳಾದ ಡಾ.ಚಂದ್ರಶೇಖರ ಕಟ್ಟಿ, ಡಾ.ಆರ್.ಚಂದ್ರಶೇಖರ್, ಎಂಎಂಸಿ ಡೀನ್ ಮತ್ತು ನಿರ್ದೇಶಕಿ ಡಾ.ಕೆ.ಆರ್. ದಾಕ್ಷಾಯಿಣಿ, ಎಂಎಎ ಟ್ರಸ್ಟ್ ಕಾರ್ಯದರ್ಶಿ ಡಾ.ಎಂ.ಎ.ಶೇಖರ್, ಕಾರ್ಯಾಧ್ಯಕ್ಷ ಡಾ.ಎಚ್.ಎನ್.ದಿನೇಶ್, ಕಾರ್ಯದರ್ಶಿ ಡಾ.ಹೆಚ್.ಬಿ.ಶಶಿಧರ್, ಖಜಾಂಚಿ ಡಾ.ಸರ್ವೇಶರಾಜೇ ಅರಸ್ ಸೇರಿದಂತೆ ಇನ್ನಿತರರು ಉಪಸ್ಥಿತರಿರುವರು.

ವಿದ್ಯಾರ್ಥಿಗಳಿಗೆ ಸ್ವಚ್ಛತಾ ಜಾಗೃತಿ...



ಮೈಸೂರಿನ ಸಿ.ಎಸ್.ಐ. ಹಾರ್ಡ್ವಿಕ್ ಬಾಯ್ಸ್ ಬೋರ್ಡಿಂಗ್ ಹೋಮ್ ವಿದ್ಯಾರ್ಥಿಗಳಿಗೆ ಸ್ವಚ್ಛತೆ ಜಾಗೃತಿ ಮೂಡಿಸಿ, ಜೆಡಿಎಸ್ ಕಾರ್ಯಾಧ್ಯಕ್ಷ ಪ್ರಕಾಶ್ ಪ್ರಿಯದರ್ಶನ್ ಹಣ್ಣು, ಲೇಖನಿ ಸಾಮಗ್ರಿ ವಿತರಿಸಿದರು. ವಾರ್ಡನ್ ದೇವರತ್ನ, ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಹೋಮದೇವ, ಶ್ರೀಧರ್, ಮಹೇಶ್, ಮಹದೇವ್, ಎಸ್.ಪಿ.ಅಕ್ಷಯ್ ಪ್ರಿಯಾದರ್ಶನ್ ಇನ್ನಿತರರಿದ್ದರು.

ವಾಲಿಬಾಲ್ ಪಂದ್ಯಾವಳಿ: ಜಿಲ್ಲಾ ಮಟ್ಟಕ್ಕೆ ಆಯ್ಕೆ...



2024–25ನೇ ಸಾಲಿನ ಪ್ರೌಢಶಾಲಾ ಅಂತರ ವಲಯ ಮಟ್ಟದ ಬಾಲಕಿಯರ ವಾಲಿಬಾಲ್ ಪಂದ್ಯಾವಳಿಯಲ್ಲಿ ಮೈಸೂರಿನ ಸರಸ್ವತಿಪುರಂನ ರೋಟರಿ ವೆಸ್ಟ್ ಶಾಲೆಯ ಕ್ರೀಡಾಪಟುಗಳು ಪ್ರಥಮ ಸ್ಥಾನ ಪಡೆದು, ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ಇವರನ್ನು ಶಾಲೆಯ ಅಧ್ಯಕ್ಷ ಚಂದ್ರ, ಮುಖ್ಯ ಶಿಕ್ಷಕಿ ಪೂರ್ಣಿಮಾ, ಉಪ ಮುಖ್ಯ ಶಿಕ್ಷಕಿ ಸುಷ್ಮಾ, ದೈಹಿಕ ಶಿಕ್ಷಣ ಶಿಕ್ಷಕ ನಾಗರಾಜ್ ಅಭಿನಂದಿಸಿದರು.

ಅತ್ಯಾಚಾರ ತಪ್ಪಿಸಿದ ಕೋತಿಗಳು!

ನವದೆಹಲಿ: ಉತ್ತರ ಪ್ರದೇಶದ ಬಾಗ್‌ಪತ್‌ನಲ್ಲಿ 6 ವರ್ಷದ ಮಗುವಿನ ಮೇಲೆ ಅತ್ಯಾಚಾರವೆಸಗುತ್ತಿದ್ದ ವ್ಯಕ್ತಿಯನ್ನು ಕೋತಿಗಳ ಗುಂಪು ತಡೆದಿದೆ ಎಂದು ವರದಿಯಾಗಿದೆ. ಯುಕೆಜಿ ವಿದ್ಯಾರ್ಥಿನಿಯಾಗಿರುವ ಬಾಲಕಿ ತನ್ನ ಕುಟುಂಬಕ್ಕೆ ಈ ಘಟನೆಯನ್ನು ವಿವರಿಸಿದ್ದಲ್ಲದೆ, ಕೋತಿಗಳು ತನ್ನನ್ನು ಹೇಗೆ ರಕ್ಷಣೆ ಮಾಡಿದವು ಎನ್ನುವ ಮಾಹಿತಿಯನ್ನೂ ನೀಡಿದ್ದಾಳೆ. ಪೋಷಕರು ಹತ್ತಿರದ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಮಹಿಳಾ ಸಹಕಾರ ಬ್ಯಾಂಕ್ ವಾರ್ಷಿಕ ಸಭೆ



ಮೈಸೂರು ಜಿಲ್ಲಾ ಮಹಿಳಾ ಸಹಕಾರ ಬ್ಯಾಂಕ್ 30ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆ ನಡೆಯಿತು. ಬ್ಯಾಂಕ್‌ನ ಅಧ್ಯಕ್ಷೆ ಮಂಜುಳಾ ಮಾನಸ ಸಭೆ ಉದ್ಘಾಟಿಸಿ ಮಾತನಾಡಿದರು. ಬ್ಯಾಂಕ್‌ನ ಸದಸ್ಯರ ಎಸ್‌ಎಸ್‌ಎಲ್‌ಸಿ, ಪಿಯುಸಿ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ಉಪಾಧ್ಯಕ್ಷೆ ಡಾ.ಎಂ.ಶಾರದಾ, ನಿರ್ದೇಶಕರಾದ ಡಾ.ಎಂ.ವಿ.ಬೃಹದಾಂಬ, ಡಿ.ಗೌರಮ್ಮ, ಡಾ.ಡಿ.ಶೀಲಾಕುಮಾರಿ, ಸುಶೀಲಾ ನಂಜಪ್ಪ, ಪ್ರೇಮ ಶಂಕರೇಗೌಡ, ಪ್ರಭಾಮಣಿ, ಭಾಗಿರಥಿ, ಪ್ರಭಾ ಸುರೇಂದ್ರ, ಮೋದಾಮಣಿ, ಲತಾ, ಭಾರತಿ, ಕಲ್ಪನಾ, ಗೀತಾ, ಡಾ.ಭಾಗಿರಥಿ, ಎಂ.ಮಹಾಲಕ್ಷ್ಮಿ, ಮೀನಾಕ್ಷಿ, ರೂಪ, ವ್ಯವಸ್ಥಾಪಕಿ ಸುಮಾ ಹಾಜರಿದ್ದರು.

ನಿಧನ

ಕೆ.ವಿ.ಬಸವರಾಜು



ಮೈಸೂರು,ಸೆ.23–ಹೆಚ್.ಡಿ.ಕೋಟೆ ತಾಲೂಕು, ಗಂಗಡ ಹೊಸಹಳ್ಳಿ ಗ್ರಾಮದ ಜಿಲ್ಲಾ ಪಂಚಾಯತಿ ಮಾಜಿ ಸದಸ್ಯರು ಹಾಗೂ ಹಿರಿಯ ಕಾಂಗ್ರೆಸ್ ಮುಖಂಡ ಕೆ.ವಿ.ಬಸವರಾಜು(88) ಶನಿವಾರ ಮಧ್ಯಾಹ್ನ ನಿಧನರಾದರು. ಮೃತರು ಪತ್ನಿ ಶ್ರೀಮತಿ ರತ್ನಮ್ಮ, ಮಕ್ಕಳಾದ ಪುರುಷೋತ್ತಮ, ಅನುರಾಧ, ವಿನೋದ, ಉಮಾ, ಸುಮಾ ಹಾಗೂ ಸೊಸೆಯಂದಿರು, ಅಳಿಯಂದಿರು, ಮೊಮ್ಮಕ್ಕಳು ಮತ್ತು ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ ಮೃತರ ಜಮೀನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.


ಡಾ. ಎಂ ಸಿ ಸುಬ್ಬರಾಮು



ಮೈಸೂರು: ಮುಂಬೈನ ಬಾಬಾ ಅಣುಶಕ್ತಿ ಕೇಂದ್ರದ ಡಿಎಇ ವಿಭಾಗದ ನಿವೃತ್ತ ಅಧಿಕಾರಿ, ಸಿದ್ದಾರ್ಥನಗರದ ನಿವಾಸಿ ಡಾ. ಎಂ.ಸಿ. ಸುಬ್ಬರಾಮು(90) ಸೋಮವಾರ ನಿಧನರಾದರು. ಮೃತರು ಇಬ್ಬರು ಪುತ್ರರು, ಪುತ್ರಿ ಹಾಗೂ ಅಪಾರ ಬಂದು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಮಧ್ಯಾಹ್ನ 1 ಗಂಟೆಗೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನಡೆಯಲಿದೆ ಕುಟುಂಬ ಮೂಲಗಳು ತಿಳಿಸಿವೆ.

ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಯನ್ನು ಹಬ್ಬದಂತೆ ಪರಿಭಾವಿಸಿ

ಎಸಿಪಿ ಹೆಚ್.ಎಂ.ಚಂದ್ರಶೇಖರ್ ಸಲಹೆ



ಆಧುನಿಕ ವಚನ ಕವಿಗೋಷ್ಠಿಯಲ್ಲಿ ಭಾಗವಹಿಸಿದ್ದ ಲೇಖಕಿಯರೊಂದಿಗಿನ ದೃಶ್ಯ.

ಮೈಸೂರು, ಸೆ.23(ಎಸ್‌ಪಿಎನ್)–ವಿದ್ಯಾರ್ಥಿಗಳು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಹಬ್ಬದಂತೆ ಪರಿಭಾವಿಸಬೇಕು ಎಂದು ಮೈಸೂರು ಅರಮನೆ ಭದ್ರತಾ ಪಡೆಯ ಎಸಿಪಿ ಎಚ್.ಎಂ.ಚಂದ್ರಶೇಖರ್ ಸಲಹೆ ನೀಡಿದರು.


ಮೈಸೂರು ಎಂಐಟಿ ಪ್ರಥಮ ಕಾಲೇಜು ಆವರಣದಲ್ಲಿ ಶರಣ ಸಾಹಿತ್ಯ ಪರಿಷತ್ ಮೈಸೂರು ಘಟಕದ ವತಿಯಿಂದ ಏರ್ಪಡಿಸಿದ್ದ ಆಧುನಿಕ ವಚನ ಕವಿಗೋಷ್ಠಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳು ಸ್ಪರ್ಧಾ ಪರೀಕ್ಷೆಗಳಲ್ಲಿ ಭಾಗವಹಿಸಲು ಹಾಗೂ ಉನ್ನತ ಸ್ಥಾನ ಆಕಾಂಕ್ಷಿಗಳಲ್ಲಿ ಕಾನೂನಿನ ಜ್ಞಾನ ಅಗತ್ಯ ಹಾಗೂ ಕೆಎಎಸ್, ಐಎಎಸ್, ಐಪಿಎಸ್ ಸ್ಪರ್ಧಾ ಪರೀಕ್ಷೆಗಳನ್ನು ಕನ್ನಡದಲ್ಲಿಯೂ ತೆಗೆದುಕೊಳ್ಳಬಹುದು ಎಂದ ಅವರು, 12ನೇ ಶತಮಾನದ ವಚನ ಸಾಹಿತ್ಯದಿಂದ ಕನ್ನಡಕ್ಕೆ ಸಾಂಸ್ಕೃತಿಕ, ಆಧ್ಯಾತ್ಮಿಕ ಸ್ಥಾನಮಾನ ತಂದುಕೊಂಡಿದೆ ಎಂದರು.

ಈ ವೇಳೆ ಆಧುನಿಕ ವಚನಗೋಷ್ಠಿಯಲ್ಲಿ 20 ಮಂದಿ ಸ್ವರಚಿತ ವಚನಗಳನ್ನು ವಾಚನ ಮಾಡಿದರು. ಈ ವೇಳೆ ಮಲ್ಲಿಕಾರ್ಜುನ ಸಮಂತ್ರಿ, ಕಾಂತಾಮಣಿ, ಮರಿಸ್ವಾಮಿ, ಡಾ.ಸುನಿತಾ, ಶರಣ ಸಾಹಿತ್ಯ ಪರಿಷತ್ ಮೈಸೂರು ಘಟಕದ ಕಾರ್ಯದರ್ಶಿ ಟಿ.ಎಸ್.ಕುಮಾರಸ್ವಾಮಿ, ಮಂಗಳಾ ಮದ್ದುಮಾದಪ್ಪ, ಗಂಗಮ್ಮ, ಶರಣಪ್ಪ ಸಮಂತ್ರಿ ಉಪಸ್ಥಿತರಿದ್ದರು. ನಂತರ ಎಸ್.ಗುರು, ಮಂಗಳ, ಮಾದಪ್ಪ, ನಾಗರತ್ನ, ಮಧುಕರ್, ವರಲಕ್ಷ್ಮಿ, ಲತೇಶ್ವರಿ, ನಂದ ಶಿವಕುಮಾರ್, ವಿದ್ಯಾ ಪುಟ್ಟಪ್ಪ, ವೀಣಾ ರಂಗನಾಥ್ ಮೈಸೂರು, ಲತೇಶ್ವರಿ ರಘುವೀರ್, ರಂಜಿತ್, ನರೇಂದ್ರ, ಅಶೋಕ್‌ಕುಮಾರ್ ಸ್ವರಚಿತ ಕವನಗಳನ್ನು ವಾಚನ ಮಾಡಿದರು.

ಹರ್ನಿಯ ಉಚಿತ ತಪಾಸಣಾ ಶಿಬಿರ


ಮೈಸೂರು,ಸೆ.23–ಮೈಸೂರಿನ ಸುಯೋಗ್ ಆಸ್ಪತ್ರೆಯಲ್ಲಿ ಸೆ.28ರ ಶನಿವಾರದವರೆಗೆ ಬೆಳಗ್ಗೆ 10ರಿಂದ ಸಂಜೆ 6ಗಂಟೆವರೆಗೆ ಹರ್ನಿಯ ಉಚಿತ ತಪಾಸಣಾ ಶಿಬಿರವನ್ನು ಏರ್ಪಡಿಸಲಾಗಿದೆ. ಶಿಬಿರದಲ್ಲಿ ಹೊಟ್ಟೆನೋವು, ಅಜೀರ್ಣ, ಹೊಟ್ಟೆಯ ಮೇಲ್ಭಾಗದಲ್ಲಿ ಗಂಟು ಮುಂತಾದ ಸಮಸ್ಯೆಗಳಿಗೆ ತಪಾಸಣೆ ಹಾಗೂ ಉಚಿತ ಸಮಾಲೋಚನೆ ಇದೆ. ಈ ಸಮಸ್ಯೆಗಳಿರುವವರು ಕೂಡಲೇ ಶಿಬಿರದಲ್ಲಿ ಪಾಲ್ಗೊಂಡು ಅನುಕೂಲ ಪಡೆಯಬಹುದು. ಆಸಕ್ತರು 0821-2566966, 9986399862 ಸಂಪರ್ಕಿಸಿ.

ಮಾದವಗೆರೆ ಮೇಗಳಾಪುರ ಹಾಲು ಉತ್ಪಾದಕರ ಸಹಕಾರ ಸಂಘದ ಮಹಾಸಭೆ



ಮೈಸೂರು ತಾಲೂಕು ಮಾದವಗೆರೆ ಮೇಗಳಾಪುರ ಹಾಲು ಉತ್ಪಾದಕರ ಸಹಕಾರ ಸಂಘದ, ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಸಂಘದ ಅಧ್ಯಕ್ಷೆ ನೀಲಮ್ಮ ಉದ್ಘಾಟಿಸಿದರು. ಚಿತ್ರದಲ್ಲಿ ಸಂಘದ ಉಪಾಧ್ಯಕ್ಷ ಬಸವರಾಜು, ಸದಸ್ಯರಾದ ಜಗದೀಶ್, ಮಹಾದೇವಸ್ವಾಮಿ, ರಾಜಶೇಖರ, ನಂಜುಂಡಸ್ವಾಮಿ, ಮಾದಪ್ಪ, ರಾಮಯ್ಯ, ಸಿದ್ದಪ್ಪ, ಕಾರ್ಯದರ್ಶಿ ಶಿವಣ್ಣ ಇನ್ನಿತರರಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

24.09.2024 ಮಂಗಳವಾರ, ಮಳೆ ನಕ್ಷತ್ರ: ಉತ್ತರಾ, 13.09.2024ರಿಂದ 26.09.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ,
ತಿಥಿ: ಸಪ್ತಮಿ, ನಕ್ಷತ್ರ: ಮೃಗಶಿರ, ರಾಹುಕಾಲ : ಮಧ್ಯಾಹ್ನ 3 ರಿಂದ 4.30 ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಸಂಧಿವಾತ, ಮಂಡಿ ನೋವು, ಕೀಲು ನೋವು ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ಗಂಟೆಯಿಂದ.

■ **ಕಾವೇರಿ ಆಯುರ್ವೇದ ಆಸ್ಪತ್ರೆ:** ಮಕ್ಕಳಲ್ಲಿ ಕಂಡು ಬರುವ ನೆಗಡಿ, ಕೆಮ್ಮು ಮತ್ತು ಅಸ್ತಮ ಕಾಯಿಲೆಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 9 ಗಂಟೆಯಿಂದ.

■ **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್, ಬೆಳಗ್ಗೆ 10ರಿಂದ ಸಂಜೆ 7 ರವರೆಗೆ.

■ **ಹೊನ್ನುಸಿರಿ ವಿವಿಧೋದ್ದೇಶ ಸಹಕಾರ ಸಂಘ :** ವಾರ್ಷಿಕ ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಡಾ. ಎನ್. ಜಯಕುಮಾರಿ, ಸ್ಥಳ: ಶ್ರೀ ಚಾಮುಂಡೇಶ್ವರಿ ಕನ್ವೆನ್ಷನ್ ಹಾಲ್, ದೇವೇಗೌಡ ಸರ್ಕಲ್ ಹತ್ತಿರ, ಬೆಳಗ್ಗೆ 10ಕ್ಕೆ.

■ **ಕನ್ನಡ ಜಾನಪದ ಪರಿಷತ್, ಸಂತ ಜೋಸೆಫರ ಮಹಿಳಾ ಕಾಲೇಜು :** ವಿಶ್ವ ಜಾನಪದ ದಿನಾಚರಣೆ, ಸಾನ್ನಿಧ್ಯ : ಫಾ. ವಿಲಿಯಂ ಎಡ್ವರ್ಡ್ ಸಾಲ್ಡಾನ, ಉದ್ಘಾಟನೆ : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮುಖ್ಯ ಅತಿಥಿಗಳು : ರೆ. ಫಾ. ನವೀನ್ ಕುಮಾರ್, ಪ್ರಾಸ್ತಾವಿಕ ನುಡಿ : ಕನ್ನಡ ಜಾನಪದ ಪರಿಷತ್ ಅಧ್ಯಕ್ಷ ಕ್ಯಾತನಹಳ್ಳಿ ಎಚ್. ಪ್ರಕಾಶ್, ವಿಶೇಷ ಆಹ್ವಾನಿತರು : ರವಿಗೌಡ, ಸೆಬಿ ಮಾವೇಲಿ, ಎಸ್. ಬಾಲಕೃಷ್ಣ, ಸ್ಥಳ: ಸಂತ ಜೋಸೆಫರ ಮಹಿಳಾ ಕಾಲೇಜು ಆವರಣ, ರಮ್ಮನಹಳ್ಳಿ, ಬೆಳಗ್ಗೆ 10ಕ್ಕೆ.

■ **ಭಾರತ ಸರಕಾರದ ಜವಳಿ ಮಂತ್ರಾಲಯ, ಗುಜರಾತ್ ರಾಜ್ಯ ಕೈಮಗ್ಗ ಮತ್ತು ಕರಕುಶಲ ಅಭಿವೃದ್ಧಿ ನಿಗಮ :** ಗಾಂಧಿ ಶಿಲ್ಪ ಬಜಾರ್ ಹಾಗೂ ಗರ್ವಿ ಗುರ್ಜರಿ ಕರಕುಶಲ ವಸ್ತುಪ್ರದರ್ಶನ ಮತ್ತು ಮಾರಾಟ, ಸ್ಥಳ: ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ವಲಯ, ಬೆಳಗ್ಗೆ 10 ರಿಂದ.

■ **ಜೆಎಸ್‌ಎಸ್ ಮಹಿಳಾ ಕಾಲೇಜು, ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜು :** ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 109ನೇ ಜಯಂತಿ ಮಹೋತ್ಸವ, ಉದ್ಘಾಟನೆ : ಶಾಸಕ ಕೆ. ಹರೀಶ್‌ಗೌಡ, ಅಧ್ಯಕ್ಷತೆ : ಮೈಸೂರು ವಿವಿ ಕುಲಸಚಿವ ಶ್ರೀಮತಿ ವಿ.ಆರ್. ಶೈಲಜಾ, ನುಡಿನಮನ: ಪ್ರಾಧ್ಯಾಪಕ ಡಾ. ಡಿ.ಎಸ್. ಗುರು, ಉಪಸ್ಥಿತರು : ಕಾಲೇಜು ಪ್ರಾಂಶುಪಾಲರಾದ ಡಾ. ಎಂ. ಪೂರ್ಣಿಮ, ಡಾ. ರೇಚಣ್ಣ, ಶ್ರೀಮತಿ ಎಂ.ಪಿ. ರಾಜೇಶ್ವರಿ, ಸ್ಥಳ: ನವಜ್ಯೋತಿ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ :** ಪೂನಾ ಒಪ್ಪಂದ–ಒಂದು ನೋಟ ವಿಶೇಷ ಉಪನ್ಯಾಸ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಸಂದರ್ಶಕ ಪ್ರಾಧ್ಯಾಪಕ ಪ್ರೊ. ರಹಮತ್ ತರೀಕೆರೆ ಅವರಿಂದ ಉಪನ್ಯಾಸ, ಅಧ್ಯಕ್ಷತೆ : ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದ ನಿರ್ದೇಶಕ ಪ್ರೊ. ಜೆ. ಸೋಮಶೇಖರ್, ಸ್ಥಳ: ಪ್ರೊ. ಬೆಟ್ರಿಕ್ಸ್ ಡಿಸೌಜ ಸಭಾಂಗಣ, ಬೆಳಗ್ಗೆ 10.30ಕ್ಕೆ.

■ **ಶ್ರೀ ಗಾಯತ್ರಿ ಗೃಹ ನಿರ್ಮಾಣ ಸಹಕಾರ ಸಂಘ :** ವಾರ್ಷಿಕ ಸರ್ವ ಸದಸ್ಯರ ಸಭೆ, ಸ್ಥಳ: ಸಂಘದ ಕಚೇರಿ ಆವರಣ, ಬೆಳಗ್ಗೆ 10.30ಕ್ಕೆ.

■ **ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖಾ ನೌಕರರ ಗೃಹ ನಿರ್ಮಾಣ ಸಹಕಾರ ಸಂಘ :** ವಾರ್ಷಿಕ ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ : ವಿಶೇಷಾಧಿಕಾರಿ ಆರ್. ಮಂಜುನಾಥ್ (ಸಹಕಾರ ಸಂಘಗಳ ಉಪ ನಿಬಂಧಕರು), ಸ್ಥಳ: ಪಂಡಿತ್ ಶ್ರೀ ನಾರಾಯಣಾಚಾರ್ಯ ಕಲ್ಯಾಣ ಮಂದಿರ, ದಿವಾನ್ಸ್ ರಸ್ತೆ, ಬೆಳಗ್ಗೆ 10.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 'ಶ್ರದ್ಧೆಯ ಶಿಲ್ಪ' ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ.ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ರೋಹಿಣಿ ಸುಧಾಮ್, ಎಸ್. ಸಂಗೀತಾ, ವ್ಯಾಖ್ಯಾನ–ಡಾ. ಪ್ರದೀಪ್ ಕುಮಾರ್ ಹೆಬ್ರಿ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ: ಅ.ನ.ಕೃ ಅವರ 'ಉದಯರಾಗ' ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ : ಉಮೇಶ್ ಎಸ್. ಎಸ್., 8.30 ಬಾನುಲಿ ಇಂಗ್ಲೀಷ್ ಪಾಠ–ರೇಡಿಯೋ ಸರಣಿ, ಪ್ರಸ್ತುತಿ: ಸದಾನಂದ. ಆರ್, 8.40 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರ ಫೋನ್ ಇನ್ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಡಾ. ಆರ್.ಎನ್. ಶ್ರೀಲತಾ – ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ –ಕಥೆಯಲ್ಲಿದೆ ಉತ್ತರ, ಪ್ರಸ್ತುತಿ : ಪ್ರಭುಸ್ವಾಮಿ ಮಳಿಮಠ್ ಹಾಗೂ ಚೈತ್ರಿಕಾ

ಮಧ್ಯಾಹ್ನ: 12.05 ವನಿತಾ ವಿಹಾರ–'ಹೀಗಿದೆ ನೋಡಿ ನಮ್ ಜೋಡಿ', ಭಾಗವಹಿಸುವವರು: ವಯೋಲಿನ್ ವಾದಕಿ ಮತ್ತು ಶಿಕ್ಷಕಿ ವೀಣಾ ಹಾಗೂ ನಿವೃತ್ತ ಬ್ಯಾಂಕ್ ಮ್ಯಾನೇಜರ್ ಮತ್ತು ಸಮಾಜ ಸೇವಕ ಸುರೇಶ್ ದಂಪತಿ, ಪ್ರಸ್ತುತಿ : ಅಬ್ದುಲ್ ರಶೀದ್, 12.30 ದೇವರನಾಮ–ಲಕ್ಷ್ಮೀ. ಹೆಚ್. ಎಂ, 12.45 ಕನ್ನಡದಲ್ಲಿ ಭಾಷಣ : ಯಾರೂ ಕಾಣದ ಪ್ರವಾಸಿ ತಾಣ ಮಾಲಿಕೆಯಲ್ಲಿ ನಂಜನಗೂಡು ತಾಲೂಕು ಹತ್ವಾಳಕಟ್ಟೆಯನ್ನು ಪರಿಚಯಿಸುತ್ತಾರೆ ಸಿರಿ ಮೈಸೂರು, 1.00 ಬಾನುಲಿ ಇಂಗ್ಲೀಷ್ ಪಾಠ–ರೇಡಿಯೋ ಸರಣಿ, ಪ್ರಸ್ತುತಿ : ಸದಾನಂದ. ಆರ್, 1.20 ಭಾವಗೀತೆಗಳು–ಇಂದು ವಿಶ್ವನಾಥ್, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ : ನಾರಾಯಣ ಶರ್ಮ – ಹಾಡುಗಾರಿಕೆ, 4.00 ಕಥಾ ಕಾಲಕ್ಷೇಪ–ಹನುಮದ್ ವ್ರತ, ಪ್ರಸ್ತುತಿ–ವಿದ್ವಾನ್ ಭದ್ರಗಿರಿ ಅಚ್ಯುತದಾಸರು, 6.50 ಕೃಷಿರಂಗ: ಕಿಸಾನ್‌ವಾಣಿ –ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ರೇಷ್ಮೆ ಐಸಿರಿ–ರೇಷ್ಮೆ ಕೃಷಿ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ಹಿಪ್ಪುನೇರಳೆ ಬೆಳೆಯ ಸಮಗ್ರ ಪೀಡೆ ನಿರ್ವಹಣೆ ಕುರಿತ ನೇರ ಫೋನ್ ಇನ್ ಕಾರ್ಯಕ್ರಮ. ಭಾಗವಹಿಸುತ್ತಾರೆ : ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ವಿಜ್ಞಾನಿಗಳಾದ ಡಾ. ಎಸ್. ಮಹಿಬಾ ಹೆಲನ್ ಮತ್ತು ಡಾ. ಜಿ.ಎಸ್. ಅರುಣ್ ಕುಮಾರ್, ಪ್ರಸ್ತುತಿ : ಎನ್.ಕೇಶವಮೂರ್ತಿ, 7.45 'ಮೈಸೂರು ಜಂಕ್ಷನ್' ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ : ಜಾಂಪಣ್ಣ ಆಶೀಹಾಳ್, 8.00 ಕ್ರೀಡಾ ಲೋಕ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ : ಬಳ್ಳಾರಿ. ಎಂ. ರಾಘವೇಂದ್ರ – ಹಾಡುಗಾರಿಕೆ, 10.00 ಚೈತ್ರವನ–ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ. ವಾಚನ : ಹೆಚ್.ಎಲ್. ಶ್ರೀಕಂಠ, ವ್ಯಾಖ್ಯಾನ : ಹೆಚ್. ಎಸ್. ಗೋಪಾಲ್, ಪ್ರಸ್ತುತಿ: ಡಾ.ಎ.ಎಸ್. ಶಂಕರನಾರಾಯಣ

■ **ಮೈಸೂರು, ಚಾಮರಾಜನಗರ ಮತ್ತು ಕೊಡಗು ಜಿಲ್ಲಾ ಸಹಕಾರ ಸಂಘ :** ವಾರ್ಷಿಕ ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ವಿಜಯಶಂಕರ, ಸ್ಥಳ: ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ, ಜೆಎಸ್‌ಎಸ್ ಡೆಂಟಲ್ ಕಾಲೇಜು ಮತ್ತು ಆಸ್ಪತ್ರೆ :** ಪದವೀಧರರ ದಿನಾಚರಣೆ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಮುಖ್ಯ ಅತಿಥಿಗಳು : ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಅಧ್ಯಕ್ಷತೆ : ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರ ಮಠ, ಗೌರವ ಅತಿಥಿಗಳು : ಸಮ ಕುಲಾಧಿಪತಿ ಡಾ. ಬಿ. ಸುರೇಶ್, ಕುಲಪತಿ ಡಾ. ಸುರೀಂದರ್ ಸಿಂಗ್, ಸ್ಥಳ: ಶ್ರೀ ರಾಜೇಂದ್ರ ಸಭಾಂಗಣ, ಶ್ರೀ ಶಿವರಾತ್ರೀಶ್ವರನಗರ, ಬೆಳಗ್ಗೆ 11ಕ್ಕೆ.

■ **ಮೈಸೂರು ಜಿಲ್ಲಾ ತೋಟದ ಬೆಳೆಗಾರರ ಮಾರಾಟ ಮತ್ತು ಸಂಸ್ಕರಣಾ ಸಹಕಾರ ಸಂಘ :** ವಾರ್ಷಿಕ ಸರ್ವ ಸದಸ್ಯರ ಸಭೆ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎಂ.ಟಿ. ಅಣ್ಣೇಗೌಡ, ಸ್ಥಳ: ಗೋವಿಂದರಾವ್ ಮೆಮೋರಿಯಲ್ ಹಾಲ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 11ಕ್ಕೆ

■ **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು :** ಸ್ವಚ್ಛತಾ ಐ ಸೇವಾ ಕಾರ್ಯಕ್ರಮ, ಸಾನ್ನಿಧ್ಯ : ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ : ವಲಯ ಆಯುಕ್ತ ಮಂಜುನಾಥ ರೆಡ್ಡಿ, ಮುಖ್ಯ ಅತಿಥಿಗಳು : ಹಿರಿಯ ಆರೋಗ್ಯ ನಿರೀಕ್ಷಕ ಹೆಚ್.ಎಂ. ಶಿವಪ್ರಸಾದ್, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಉಪಸ್ಥಿತರು : ಪ್ರಾಂಶುಪಾಲರಾದ ಡಾ. ಎಂ. ಶಾರದಾ, ಶ್ರೀಮತಿ ತ್ರಿವೇಣಿ, ಸ್ಥಳ: ಕಾಡಾ ಕಚೇರಿ, ಬೆಳಗ್ಗೆ 11ಕ್ಕೆ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಸೆಪ್ಟೆಂಬರ್ 24 ಮಂಗಳವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

45

ಸಂಪುಟ: 45 | ಸಂಚಿಕೆ: 159 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಮೈಸೂರು ಹೊರವಲಯದ ಉತ್ತನಹಳ್ಳಿ ಬಳಿ ಬಯಲು ಪ್ರದೇಶದಲ್ಲಿ

ಯುವ ದಸರಾ


5,000 ರೂ. ಮುಖಬೆಲೆಯ 10,000 ಟಿಕೆಟ್ ಮಾರಾಟ

ಮೈಸೂರು, ಸೆ.23(ಆರ್‌ಕೆ)–ಈ ಬಾರಿ ಯುವ ದಸರಾ ಕಾರ್ಯಕ್ರಮ ವೀಕ್ಷಿಸಲು 5,000ರೂ. ಮುಖಬೆಲೆಯ 10,000 ಟಿಕೆಟ್ ಮಾರಾಟ ಮಾಡಲಾಗುವುದು. ಒಂದು ಟಿಕೆಟ್‌ನಲ್ಲಿ ಒಬ್ಬರಿಗೆ ಒಂದು ದಿನದ ಕಾರ್ಯಕ್ರಮಕ್ಕೆ ಮಾತ್ರ ಪ್ರವೇಶಾವಕಾಶವಿರುತ್ತದೆ. ಟಿಕೆಟ್ ಖರೀದಿಸಿದವರಿಗೆ ಗ್ಯಾಲರಿಯಲ್ಲಿ ವಿಶೇಷ ಆಸನದ ವ್ಯವಸ್ಥೆ ಮಾಡಲಾಗುವುದು. ಅಕ್ಟೋಬರ್ 6ರಿಂದ 10ರವರೆಗೆ 5 ದಿನಗಳು ನಡೆಯುವ ಯುವ ದಸರಾದಲ್ಲಿ ಖ್ಯಾತ ಸಂಗೀತ ಸಂಯೋಜಕ ಎ.ಆರ್. ರೆಹಮಾನ್ ಸೇರಿದಂತೆ ಪ್ರಸಿದ್ಧ ಸಂಗೀತ ಗಾಯಕರು ಹಾಡು ವುದರಿಂದ 1 ಲಕ್ಷ ಮಂದಿಗೆ ಆಸನ ವ್ಯವಸ್ಥೆ ಮಾಡಲಿದ್ದು, 10,000 ಟಿಕೆಟ್ ಮಾರಾಟ ಮಾಡಲಾಗುವುದು. ಉಳಿದ 90,000 ಸಾವಿರ ಮಂದಿಗೆ ಉಚಿತ ಪ್ರವೇಶ ಕಲ್ಪಿಸಲಾಗುವುದು ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ತಿಳಿಸಿದ್ದಾರೆ. ಯುವ ದಸರಾ ಕಾರ್ಯಕ್ರಮಗಳಿಗೆ ಸುಮಾರು 14 ಕೋಟಿ ರೂ. ಖರ್ಚಾಗಬಹುದೆಂದು ಅಂದಾಜಿಸಲಾಗಿದ್ದು, ಟಿಕೆಟ್ ಮಾರಾಟದಿಂದಲೇ ಸಂಪನ್ಮೂಲ ಕ್ರೋಢೀಕರಿಸಲು ಉದ್ದೇಶಿಸಲಾಗಿದೆ ಎಂದು ಅವರು ತಿಳಿಸಿದರು.



- ಲಕ್ಷಾಂತರ ಜನ ಪಾಲ್ಗೊಳ್ಳುವ ಅದ್ದೂರಿ ಸಂಗೀತ ಕಾರ್ಯಕ್ರಮ; ಸಂಚಾರ ಸಮಸ್ಯೆ ದೃಷ್ಟಿಯಿಂದ ಸ್ಥಳಾಂತರ
- ಅ.6ರಿಂದ 10ರವರೆಗೆ 5 ದಿನಗಳ ಕಾಲ ಯುವ ಸಮೂಹದ ಅಚ್ಚುಮೆಚ್ಚಿನ ಮೆಗಾ ಇವೆಂಟ್
- ಇಳಯರಾಜರಿಂದ ಮ್ಯೂಸಿಕಲ್ ನೈಟ್, ಖ್ಯಾತ ಸಂಗೀತ ನಿರ್ದೇಶಕ ಎ.ಆರ್.ರೆಹಮಾನ್, ಗಾಯಕಿ ಶ್ರೇಯಾ ಘೋಷಾಲ್, ಬಾದ್‌ಶಾ ಹಾಗೂ ಕೆಜಿಎಫ್ ಖ್ಯಾತಿಯ ಸಂಗೀತ ಸಂಯೋಜಕ ರವಿ ಬಸ್ರೂರ್ ತಂಡದಿಂದ ಸಂಗೀತ ರಸದೌತಣ

ಮೈಸೂರು,ಸೆ.23(ಆರ್‌ಕೆ)– ದಸರಾ ಮಹೋತ್ಸವದ ಮೆಗಾ ಇವೆಂಟ್ ಯುವ ದಸರಾ ಕಾರ್ಯಕ್ರಮವನ್ನು ಮೈಸೂರಿನ ಹೃದಯ ಭಾಗದ ಮಹಾರಾಜ ಕಾಲೇಜು ಮೈದಾನದಿಂದ ಹೊರವಲಯದ ಉತ್ತನಹಳ್ಳಿ ಬಳಿಯ ಬಯಲು ಪ್ರದೇಶಕ್ಕೆ ಸ್ಥಳಾಂತರಿಸಲಾಗಿದೆ. ಕಾಲೇಜು ವಿದ್ಯಾರ್ಥಿಗಳು ಸೇರಿದಂತೆ ಮೈಸೂರು ನಗರ ಸುತ್ತಮುತ್ತಲಿನ ಜಿಲ್ಲೆಗಳ ಸಾವಿರಾರು ಮಂದಿ ಯುವ ಸಮೂಹವನ್ನು ಸೆಳೆಯುವ ಸಂಗೀತ ಕಾರ್ಯಕ್ರಮವನ್ನು ಈವರೆಗೆ ಮೊದಲು ಮಾನಸ ಗಂಗೋತ್ರಿ ಬಯಲು ರಂಗಮಂದಿರ, ನಂತರ ಮೈಸೂರಿನ ಮಹಾರಾಜ ಕಾಲೇಜು ಮೈದಾನದಲ್ಲಿ ಆಯೋಜಿಸಲಾಗುತ್ತಿತ್ತು. ■ 6ನೇ ಪುಟಕ್ಕೆ



ಯುವ ದಸರಾಗೆ ಗುರುತಿಸಿರುವ ಉತ್ತನಹಳ್ಳಿ ಸಮೀಪದ ಬಯಲು ಪ್ರದೇಶ.

ಇಳಯರಾಜಾ, ಎ.ಆರ್.ರೆಹಮಾನ್‌ರಿಂದ ಸಂಗೀತ–ಗಾಯನ



ಇಳಯರಾಜ | ಎ.ಆರ್.ರೆಹಮಾನ್ | ಶ್ರೇಯಾ ಘೋಷಾಲ್ | ಬಾದ್‌ಶಾ | ರವಿ ಬಸ್ರೂರ್

ಮೈಸೂರು, ಸೆ. 23(ಆರ್‌ಕೆ)–ಸುಪ್ರಸಿದ್ಧ ಸಂಗೀತ ಸಂಯೋಜಕರಾದ ಎ.ಆರ್.ರೆಹಮಾನ್ ಹಾಗೂ ಇಳಯರಾಜಾ ಇದೇ ಮೊದಲ ಬಾರಿ ಮೈಸೂರು ದಸರಾ ಮಹೋತ್ಸವದಲ್ಲಿ ಪಾಲ್ಗೊಂಡು ಪ್ರದರ್ಶನ ನೀಡಲಿದ್ದಾರೆ. ಈ ಹಿಂದೆ ರೆಹಮಾನ್ ಅವರು ಇಳಯರಾಜಾ ಬಳಿ ಕೀಬೋರ್ಡ್ ನುಡಿಸುತ್ತಿದ್ದು, ತದನಂತರದಲ್ಲಿ ಅವರೇ ಸ್ವತಂತ್ರ ಸಂಗೀತ ಸಂಯೋಜಕರಾದರು. ಇದೀಗ ಯುವ ದಸರಾ ವೇದಿಕೆಯಲ್ಲಿ ಬೇರೆ ಬೇರೆ ದಿನಗಳಂದು ಇಬ್ಬರೂ ಸಂಗೀತ ನಿರ್ದೇಶಕರು ಕಾರ್ಯಕ್ರಮ ನೀಡಲಿದ್ದಾರೆ. ಅವರಲ್ಲದೆ ಖ್ಯಾತ ಹಿನ್ನೆಲೆ ಗಾಯಕಿ ಶ್ರೇಯಾ ಘೋಷಾಲ್, ಬಾದ್‌ಶಾ ಮತ್ತು ಕನ್ನಡ ಸಂಗೀತ ಸಂಯೋಜಕ ಕೆಜಿಎಫ್ ಖ್ಯಾತಿಯ ರವಿ ಬಸ್ರೂರ್ ಅವರೂ ಯುವ ದಸರಾ ವೇದಿಕೆಯಲ್ಲಿ ರಂಜಿಸಲಿದ್ದಾರೆ.

ಬೃಹತ್ ವೇದಿಕೆ

ಈ ಬಾರಿಯ ಯುವ ದಸರಾ ಕಾರ್ಯಕ್ರಮಕ್ಕೆ ಬೃಹತ್ ವೇದಿಕೆಯನ್ನು ಸಿದ್ಧಪಡಿಸಲಾಗುವುದು. 150 ಅಡಿ ಉದ್ದ, 75 ಅಡಿ ಅಗಲದ ವೇದಿಕೆ ಎರಡೂ ಬದಿಯಲ್ಲಿ ಡಾರ್ಕ್ ರೂಂ ಅನ್ನು ನಿರ್ಮಿತಿ ಕೇಂದ್ರದವರು ವಿಶೇಷವಾಗಿ ಸಿದ್ಧಪಡಿಸುವರು.

ಸ್ಥಳಕ್ಕೆ ಹೋಗುವ ಮಾರ್ಗ

ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣದಿಂದ ನಂಜನಗೂಡು ರಸ್ತೆ, ರಿಂಗ್ ರಸ್ತೆ ಜಂಕ್ಷನ್‌ನಲ್ಲಿ ಎಡಕ್ಕೆ ತಿರುಗಿ ಉತ್ತನಹಳ್ಳಿ ಜ್ವಾಲಾಮುಖಿ ತ್ರಿಪುರ ಸುಂದರಿ ಅಮ್ಮನವರ ದೇವಸ್ಥಾನ ಸಮೀಪ ಹೋದರೆ ಆಯರಹಳ್ಳಿಗೆ ಹೋಗುವ ರಸ್ತೆಯಲ್ಲಿ ಯುವ ದಸರಾ ಕಾರ್ಯಕ್ರಮದ ಸ್ಥಳಕ್ಕೆ ಹೋಗಬಹುದು. ಅದೇ ರೀತಿ ತಿ.ನರಸೀಪುರ ರಿಂಗ್ ರೋಡ್ ಜಂಕ್ಷನ್‌ನಿಂದ ರಿಂಗ್ ರೋಡ್‌ನಲ್ಲಿ ಉತ್ತನಹಳ್ಳಿ ಟೆಂಪಲ್ ಕಡೆಗೆ ಬಂದರೂ, ಕಾರ್ಯಕ್ರಮದ ಸ್ಥಳ ಲಭ್ಯವಿದೆ.

ಪಾರ್ಕಿಂಗ್, ಇತರ ಸೌಲಭ್ಯ

ಮೈಸೂರಿನ ಹೊರವಲಯಕ್ಕೆ ಯುವ ದಸರಾ ಕಾರ್ಯಕ್ರಮ ಸ್ಥಳಾಂತರಿಸಿರುವುದರಿಂದ ಜಿಲ್ಲಾಡಳಿತ ಹಾಗೂ ಜಿಲ್ಲಾ ಪೊಲೀಸ್ ಘಟಕವು ಸ್ಥಳದಲ್ಲಿ ಮತ್ತು ಮಾರ್ಗದುದ್ದಕ್ಕೂ ಅಗತ್ಯ ಸುರಕ್ಷತಾ ಕ್ರಮ ವಹಿಸಲು ಸಿದ್ಧತೆ ಮಾಡುತ್ತಿವೆ. ಹೆಚ್ಚುವರಿ ಪೊಲೀಸ್ ಸಿಬ್ಬಂದಿ ನಿಯೋಜಿಸಿ ವಿದ್ಯುತ್ ದೀಪಗಳನ್ನು ಅಳವಡಿಸುವ ಮೂಲಕ ಪ್ರೇಕ್ಷಕರು ಸುರಕ್ಷಿತವಾಗಿ ಬಂದು–ಹೋಗಲು ವ್ಯವಸ್ಥೆ ಕಲ್ಪಿಸಲಾಗುವುದು.

ವಾಹನಗಳಿಗೆ ಪ್ರತ್ಯೇಕ ನಿಲುಗಡೆ ವ್ಯವಸ್ಥೆ, ಪ್ರೇಕ್ಷಕರಿಗೆ ಕುಳಿತುಕೊಳ್ಳಲು ಆಸನ, ಕುಡಿಯುವ ನೀರು, ತಾತ್ಕಾಲಿಕ ಶೌಚಾಲಯ, ಸ್ವಚ್ಛತೆ, ಮಳೆಯಿಂದ ರಕ್ಷಣೆಗೆ ಜರ್ಮನ್ ಟೆಂಟ್ ಸೇರಿದಂತೆ ಯುವ ದಸರಾದಲ್ಲಿ ಅಗತ್ಯ ಮೂಲ ಸೌಲಭ್ಯವನ್ನು ಜಿಲ್ಲಾಡಳಿತವು ಕಲ್ಪಿಸಲಿದೆ.

ಸೆ.26ರಿಂದ 30ರವರೆಗೆ ದಸರಾ ಗೋಲ್ಡ್ ಕಾರ್ಡ್, ಟಿಕೆಟ್ ಮಾರಾಟ

- ಗೋಲ್ಡ್ ಕಾರ್ಡ್ 6500 ರೂ.
- ಅರಮನೆ ಆವರಣದ ಟಿಕೆಟ್ 3500 ರೂ.
- ಪಂಜಿನ ಕವಾಯತು ಟಿಕೆಟ್ 1000 ರೂ.
- ಗೋಲ್ಡ್ ಕಾರ್ಡ್‌ನಿಂದ ಒಬ್ಬರು ಜಂಬೂ ಸವಾರಿ, ಪಂಜಿನ ಕವಾಯತು, ಚಾಮುಂಡಿ ಬೆಟ್ಟ, ಮೃಗಾಲಯ, ಅರಮನೆ ಭೇಟಿಗೆ ಅವಕಾಶ

ಮೈಸೂರು, ಸೆ.23(ಎಸ್‌ಬಿಡಿ)– ಮೈಸೂರು ದಸರಾ ಗೋಲ್ಡ್ ಕಾರ್ಡ್ ಹಾಗೂ ಟಿಕೆಟ್ ಮಾರಾಟ ಸೆ.26ರಿಂದ 30ರವರೆಗೆ 5 ದಿನಗಳ ಕಾಲ ನಡೆಯಲಿದೆ.

ವಿಜಯದಶಮಿ(ಅ.12)ಯಂದು ನೆರವೇರಲಿರುವ ಅತ್ಯಾಕರ್ಷಕ ಜಂಬೂ ಸವಾರಿ ಹಾಗೂ ಪಂಜಿನ ಕವಾಯತು ವೀಕ್ಷಣೆಗೆ ಆನ್‌ಲೈನ್ ಮೂಲಕ ಗೋಲ್ಡ್ ಕಾರ್ಡ್ ಹಾಗೂ ಟಿಕೆಟ್ ಖರೀದಿಸಬಹುದಾಗಿದೆ. ಗೋಲ್ಡ್ ಕಾರ್ಡ್‌ಗೆ 6,500 ರೂ., ಅರಮನೆ ಆವರಣದಲ್ಲಿ ಜಂಬೂ ಸವಾರಿ ವೀಕ್ಷಣೆ ಟಿಕೆಟ್‌ಗೆ 3,500 ರೂ. ಹಾಗೂ ಬನ್ನಿಮಂಟಪದಲ್ಲಿ ನಡೆಯಲಿರುವ ಪಂಜಿನ ಕವಾಯತು ವೀಕ್ಷಣೆ ಟಿಕೆಟ್‌ಗೆ 1,000 ರೂ. ನಿಗದಿಪಡಿಸಲಾಗಿದೆ. ಒಂದು ಗೋಲ್ಡ್ ಕಾರ್ಡ್ ಹಾಗೂ ಟಿಕೆಟ್‌ನಲ್ಲಿ ಒಬ್ಬರಿಗೆ ಮಾತ್ರ ಪ್ರವೇಶಾವಕಾಶವಿರುತ್ತದೆ. ಗೋಲ್ಡ್ ಕಾರ್ಡ್ ಹೊಂದಿರುವರಿಗೆ ಜಂಬೂಸವಾರಿ, ಪಂಜಿನ ಕವಾಯತು, ಚಾಮುಂಡಿಬೆಟ್ಟ, ಮೃಗಾಲಯ ಹಾಗೂ ಅರಮನೆ ವೀಕ್ಷಣೆಗೆ ಮಾತ್ರ ಅವಕಾಶವಿರಲಿದೆ. ■ 6ನೇ ಪುಟಕ್ಕೆ



ಮುಡಾ ನಿವೇಶನ ಹಗರಣ

ಸಿಎಂ ಸಿದ್ದರಾಮಯ್ಯ ಭವಿಷ್ಯ ಇಂದು ನಿರ್ಧಾರ

ಮಧ್ಯಾಹ್ನ 12 ಗಂಟೆಗೆ ಹೈಕೋರ್ಟ್ ತೀರ್ಪು





ಬೆಂಗಳೂರು, ಸೆ.23– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ(ಮುಡಾ) ನಿವೇಶನ ಹಂಚಿಕೆ ಹಗರಣ ಸಂಬಂಧ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವುದನ್ನು ಪ್ರಶ್ನಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಲ್ಲಿಸಿದ್ದ ಅರ್ಜಿ ವಿಚಾರಣೆ ಈಗಾಗಲೇ ಅಂತ್ಯವಾಗಿದ್ದು, ನಾಳೆ (ಮಂಗಳವಾರ) ಹೈಕೋರ್ಟ್ ತೀರ್ಪು ಪ್ರಕಟಿಸಲಿದೆ.

ಆರು ದಿನಗಳ ಕಾಲ ಸುದೀರ್ಘ ವಾದ–ಪ್ರತಿವಾದ ಆಲಿಸಿದ ಹೈಕೋರ್ಟ್ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ನೇತೃತ್ವದ ಏಕ ಸದಸ್ಯ ಪೀಠ ನಾಳೆ 12 ಗಂಟೆಗೆ ತೀರ್ಪು ಪ್ರಕಟಿಸಲಿದ್ದು ಮುಖ್ಯಮಂತ್ರಿ ಸಿದ್ದರಾಮಯ್ಯನವರ ಭವಿಷ್ಯ ತೀವ್ರ ಕುತೂಹಲ ಮೂಡಿಸಿದೆ.

ಎಲ್ಲರ ಚಿತ್ತವೂ ಹೈಕೋರ್ಟ್ ತೀರ್ಪಿನತ್ತ ನೆಟ್ಟಿದ್ದು, ಒಂದೊಮ್ಮೆ ಸಿದ್ದರಾಮಯ್ಯ ಪರ ತೀರ್ಪು ಬಂದರೆ ಅವರ ಕುರ್ಚಿ ಸೇಫ್. ಇಲ್ಲದಿದ್ದರೆ ಸಿದ್ದರಾಮಯ್ಯ ಅವರು ರಾಜಕೀಯವಾಗಿ ಸಂಕಷ್ಟಕ್ಕೀಡಾಗುವ ಸಾಧ್ಯತೆ ಇದೆ. ಈ ಬೆಳವಣಿಗೆಗಳ ಬಗ್ಗೆ ತೀವ್ರ ನಿಗಾ ವಹಿಸಿರುವ ಕಾಂಗ್ರೆಸ್ ಹೈಕಮಾಂಡ್, ತೀರ್ಪು ಏನೇ ಬಂದರೂ ಕೂಡಲೇ ಶಾಸಕಾಂಗ ಪಕ್ಷ ಸಭೆ ಕರೆಯುವಂತೆ ಸೂಚನೆ ನೀಡಿದೆ ಎಂದು ಮೂಲಗಳು ತಿಳಿಸಿವೆ.

ಅದೇ ವೇಳೆ ಹೈಕೋರ್ಟ್ ತೀರ್ಪಿನ ಬಳಿಕ ರಾಜ್ಯದಲ್ಲಿ ಕ್ಷಿಪ್ರ ರಾಜಕೀಯ ಬೆಳವಣಿಗೆ ನಿರೀಕ್ಷೆಯಲ್ಲಿರುವ ಬಿಜೆಪಿ ಮತ್ತು ಜೆಡಿಎಸ್ ಮುಂದಿನ ಲೆಕ್ಕಾಚಾರದಲ್ಲಿ ತೊಡಗಿವೆ. ಕೋರ್ಟ್ ತೀರ್ಪು ಸಿದ್ದರಾಮಯ್ಯ ಅವರಿಗೆ ವ್ಯತಿರಿಕ್ತವಾಗಿ ಬಂದರೆ ಮತ್ತೊಂದು ಹಂತದ ಹೋರಾಟಕ್ಕೆ ವಿಪಕ್ಷಗಳು ಪ್ಲಾನ್ ಮಾಡಿಕೊಂಡಿವೆ. ನಿರಂತರ ಹೋರಾಟದ ಮೂಲಕ ಸಿದ್ದರಾಮಯ್ಯ ರಾಜೀನಾಮೆಗೆ ಒತ್ತಡ ಹೇರಲು ವಿಪಕ್ಷಗಳು ನಿರ್ಧರಿಸಿವೆ ಎನ್ನಲಾಗಿದ್ದು, ತೀರ್ಪಿನ ಸ್ವರೂಪ ಹಾಗೂ ಗಂಭೀರತೆ ನೋಡಿಕೊಂಡು ಮುಂದಿನ ಹೆಜ್ಜೆ ಇಡಲು ವಿಪಕ್ಷ ನಾಯಕರು ತೀರ್ಮಾನಿಸಿದ್ದಾರೆ. ಮುಡಾ ಪ್ರಕರಣದಲ್ಲಿ ■ 6ನೇ ಪುಟಕ್ಕೆ

ರೇಣುಕಾಸ್ವಾಮಿ ಕೊಲೆ ಪ್ರಕರಣ:

ಮೂವರು ಆರೋಪಿಗಳಿಗೆ ಜಾಮೀನು ಮಂಜೂರು



ಕಾರ್ತಿಕ್



ನಿಖಿಲ್

ಬೆಂಗಳೂರು, ಸೆ.23– ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಮೊದಲ ಬಾರಿಗೆ ಮೂವರು ಆರೋಪಿಗೆ ಜಾಮೀನು ಮಂಜೂರಾಗಿದೆ. ಎ15 ಕಾರ್ತಿಕ್, ಎ16 ಕೇಶವಮೂರ್ತಿ, ಎ17 ನಿಖಿಲ್ ನಾಯ್ಕ್–ಈ ಮೂವರಿಗೆ ಷರತ್ತುಬದ್ಧ ಜಾಮೀನು ಮಂಜೂರಾಗಿದೆ. ನಾಲ್ಕು ತಿಂಗಳ ಬಳಿಕ ಈ ಕೊಲೆ ಪ್ರಕರಣದಲ್ಲಿ ಜಾಮೀನು ಸಿಕ್ಕಿದೆ. ಈ ಮೂವರು, ಪೊಲೀಸ್ ಠಾಣೆಗೆ ಶರಣಾಗಲು ಹೋದವರು.

ಈ ಪ್ರಕರಣದ 16ನೇ ಆರೋಪಿಯಾಗಿರುವ ಬೆಂಗಳೂರು ಮೂಲದ ಹೀರಣ್ಣನ ಗುಡ್ಡದ ಕೇಶವಮೂರ್ತಿಗೆ ಹೈಕೋರ್ಟ್‌ನ ನ್ಯಾ. ವಿಶ್ವಜಿತ್ ಶೆಟ್ಟಿ ಅವರಿಂದ ಜಾಮೀನು ಮಂಜೂರು ಆಗಿದ್ದು, ಸಾಕ್ಷಿಗಳ ಮೇಲೆ ಪ್ರಭಾವ ಬೀರದಂತೆ, ಒಬ್ಬರ ವೈಯಕ್ತಿಕ ಶ್ಯೂರಿಟಿ ನೀಡುವಂತೆ ಸೂಚಿಸಲಾಗಿದೆ. ಆರೋಪಿ ಪರ ವಕೀಲ ರಂಗನಾಥ್ ರೆಡ್ಡಿ ವಾದಿಸಿದ್ದರು. ರೇಣುಕಾಸ್ವಾಮಿ ಕೊಲೆ ಪ್ರಕರಣದ ಬಳಿಕ ಶರಣಾಗತಿಗೆ ತೆರಳಿದ್ದವರಲ್ಲಿ ಕೇಶವಮೂರ್ತಿ ಕೂಡ ಓರ್ವನಾಗಿದ್ದಾನೆ.

ಈ ಪ್ರಕರಣದಲ್ಲಿ ಎ15 ಕಾರ್ತಿಕ್ ಮತ್ತು ಎ17 ನಿಖಿಲ್ ನಾಯ್ಕ್‌ಗೆ 57ನೇ ಸೆಷನ್ಸ್ ಕೋರ್ಟ್‌ನಿಂದ ಷರತ್ತುಬದ್ಧ ಜಾಮೀನು ಸಿಕ್ಕಿದೆ. ನ್ಯಾ. ಜೈಶಂಕರ್ ಅವರಿಂದ ಜಾಮೀನು ನೀಡಿ ಆದೇಶ ಹೊರಡಿಲಾಗಿದೆ ದರ್ಶನ್ ಆಪ್ತರ ಸೂಚನೆ ಮೇರೆಗೆ ತಾವೇ ಹಣಕಾಸು ವಿಚಾರವಾಗಿ ರೇಣುಕಾಸ್ವಾಮಿಯನ್ನು ಕೊಂದಿದ್ದಾಗಿ ಹೇಳಿ ಚಿತ್ರದುರ್ಗದ ರಾಘವೇಂದ್ರ, ಗಿರಿನಗರದ ಕೇಶವಮೂರ್ತಿ, ನಿಖಿಲ್ ನಾಯ್ಕ್ ಹಾಗೂ ಕಾರ್ತಿಕ್ ಶರಣಾಗಿದ್ದರು. ನಾಲ್ವರ ಪೈಕಿ ಕೇಶವಮೂರ್ತಿ, ನಿಖಿಲ್ ನಾಯಕ್ ಹಾಗೂ ಕಾರ್ತಿಕ್ ಅಲಿಯಾಸ್ ಕಪ್ಪೆ ಮೇಲೆ ಸಾಕ್ಷ್ಯ ನಾಶ ಆರೋಪ ಹೊರಿಸಲಾಗಿದೆ. ಪಟ್ಟಣಗೆರೆ ಶೆಡ್‌ನಿಂದ ಮೃತದೇಹವನ್ನು ಸಾಗಿಸಲು ಕೂಡ ಈ ಮೂವರು ನೆರವಾಗಿದ್ದರು. ಆದರೆ ಈ ನಾಲ್ವರ ವಿಚಾರಣೆ ವೇಳೆ ಹತ್ಯೆ ■ 6ನೇ ಪುಟಕ್ಕೆ

ಈ ಬಾರಿಯ ದಸರಾ ಮಹೋತ್ಸವದ ವಿಶೇಷ: ಬಾನಲ್ಲಿ ದಸರಾ ಪರಂಪರೆಯ

ಚಿತ್ತಾರ ಮೂಡಿಸಲಿವೆ ಬರೋಬ್ಬರಿ 1500 ಡ್ರೋನ್‌ಗಳು

● ನಾಲ್ಕು ದಿನಗಳ ಕಾಲ ಆಗಸದಲ್ಲಿ ಪ್ರತಿಕೃತಿಗಳ ಬಿಂಬ ಉತ್ಸವ ● 21 ದಿನಗಳ ಕಾಲ ಬೆಳಕಿನಲ್ಲಿ ಮಿಂದೇಳಲಿದೆ ಮೈಸೂರು






ವಿಜಯನಗರ 2ನೇ ಹಂತದಲ್ಲಿರುವ ಸೆಸ್ಕ್ ಪ್ರಧಾನ ಕಚೇರಿಯಲ್ಲಿ ದಸರಾ ದೀಪಾಲಂಕಾರದ ಪೋಸ್ಟರ್ ಅನ್ನು ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸೋಮವಾರ ಬಿಡುಗಡೆ ಮಾಡಿದರು. ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಅಧ್ಯಕ್ಷ ರಮೇಶ್ ಬಂಡಿಸಿದ್ದೇಗೌಡ, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕಿ ಜಿ.ಶೀಲಾ, ತಾಂತ್ರಿಕ ನಿರ್ದೇಶಕ ಮುನಿಗೋಪಾಲರಾಜು, ಅಧೀಕ್ಷಕ ಇಂಜಿನಿಯರ್ ಸುನೀಲ್‌ಕುಮಾರ್ ಮತ್ತಿತರರಿದ್ದರು.

ಮೈಸೂರು, ಸೆ.23(ಎಂಕೆ)–ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಇತಿಹಾಸದಲ್ಲಿಯೇ ಮೊಟ್ಟ ಮೊದಲ ಬಾರಿಗೆ ಬಾನಂಗಳದಲ್ಲಿ ಬೆಳಗಿನ ವೈಭವ ಸೃಷ್ಟಿಸುವ 'ಡ್ರೋನ್ ಶೋ' ಹೊಸ ಮೆರಗು ನೀಡಲಿದ್ದು, ಏಕಾಲದಲ್ಲಿ 1500 ಡ್ರೋನ್‌ಗಳು ಆಗಸದಲ್ಲಿ ಮೈಸೂರು ದಸರಾ ಪರಂಪರೆಯ ಚಿತ್ತಾರ ಮೂಡಿಸಲಿವೆ.

ದಸರಾ ಮಹೋತ್ಸವದ ವಿಶೇಷ ಆಕರ್ಷಣೆಯಾದ ವಿದ್ಯುತ್ ದೀಪಾಲಂಕಾರದೊಂದಿಗೆ ಈ ವರ್ಷ ಡ್ರೋನ್ ಶೋ ವಿಶೇಷ ಆಕರ್ಷಣೆಯಾಗಿದೆ 21 ದಿನಗಳ ಕಾಲ ಬೆಳಕಿನ ವೈಭವದಲ್ಲಿ ಕಂಗೊಳಿಸುವ ಪಾರಂಪರಿಕ ನಗರಿಯ ಆಗಸದಲ್ಲಿ ಪ್ರತಿಕೃತಿಗಳ ಬಿಂಬ ಸೃಷ್ಟಿಸುವ ಡ್ರೋನ್‌ಗಳ ಪ್ರದರ್ಶನ ರೋಮಾಂಚನ ಸೃಷ್ಟಿಸಲಿದೆ. ■ 6ನೇ ಪುಟಕ್ಕೆ



> ಪವರ್ ಮ್ಯಾನ್‌ಗಳ ಕರ್ತವ್ಯಗಳು, ಗೃಹಜ್ಯೋತಿ, ಕೃಷಿ ಬಳಕೆಗೆ ಸೌರ ವಿದ್ಯುತ್ ಪಂಪ್‌ಸೆಟ್‌ಗಳು, ವಿದ್ಯುತ್ ಸುರಕ್ಷತೆ ಹಾಗೂ ನುಡಿದಂತೆ ನಡೆದ ರಾಜ್ಯ ಸರ್ಕಾರದ ಗ್ಯಾರಂಟಿಗಳ ಬಗ್ಗೆ ಮಾಹಿತಿ ನೀಡುವ ಸಲುವಾಗಿ ವಿದ್ಯುತ್ ದೀಪಗಳಿಂದ ಅಲಂಕೃತಗೊಂಡ ವಿದ್ಯುತ್ ರಥವನ್ನು ರೂಪಿಸಲಿದ್ದು, ಈ ರಥವೂ ಅ.3ರಂದು ಉದ್ಘಾಟನೆಗೊಂಡು ದಸರಾ ನವರಾತ್ರಿಯ 10 ದಿನಗಳ ಕಾಲ ಮೈಸೂರಿನ ಪ್ರಮುಖ ರಸ್ತೆ ಹಾಗೂ ವೃತ್ತಗಳಲ್ಲಿ ಸಂಚರಿಸಲಿದೆ.
> – ಡಾ.ಹೆಚ್.ಸಿ.ಮಹದೇವಪ್ಪ, ಜಿಲ್ಲಾ ಉಸ್ತುವಾರಿ ಸಚಿವ

> ಕೆಆರ್‌ಎಸ್‌ನಲ್ಲಿ ನೀರಾವರಿ ಇಲಾಖೆ ವತಿಯಿಂದ 21 ದಿನಗಳ ಕಾಲ ವಿದ್ಯುತ್ ದೀಪಾಲಂಕಾರ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸಲು ಎಲ್ಲಾ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಸಂಜೆ ವೇಳೆ ಹೆಚ್ಚಿನ ಸಂಖ್ಯೆಯಲ್ಲಿ ಬರುವ ಪ್ರವಾಸಿಗರನ್ನು ಗಮನದಲ್ಲಿಟ್ಟುಕೊಂಡು ಈ ವರ್ಷ ಇನ್ನಷ್ಟು ವೈಭವದ ದೀಪಾಲಂಕಾರ ವ್ಯವಸ್ಥೆ ಮಾಡಲಾಗುವುದು.
> –ರಮೇಶ್ ಬಂಡಿಸಿದ್ದೇಗೌಡ, ಅಧ್ಯಕ್ಷ, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ



ನಕ್ಕರೆ ಅದೇ ಸ್ವರ್ಗ

ಮಗ : ಪರೀಕ್ಷೆಯಲ್ಲಿ ನನಗೆ ಸೊನ್ನೆ ಮಾರ್ಕ್ ಬಂದಿದೆ.
ಅಪ್ಪ : 'ಏನು ಬರೆದಿದ್ಯೋ' ಅಪ್ಪ ಕೋಲು ತಗೊಂಡ್ರು
ಮಗ : ಎಲ್ಲಾ ಪ್ರಶ್ನೆಗಳಿಗೆ ಉತ್ತರ ಕೊಡೋದು ಅಗತ್ಯವೂ ಇಲ್ಲ, ಸಾಧ್ಯವೂ ಇಲ್ಲ ಅಂತಾ ಬರೆದು ಬಂದಿದ್ದೆ...!

ಮೈಸೂರು ಮಿತ್ರ

ಮಂಗಳವಾರ, 24 ಸೆಪ್ಟೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಅರ್ಥ ಮಾಡಿಕೊಳ್ಳಿ ಎಂದು ಯಾರನ್ನೂ ಬೇಡಿಕೊಳ್ಳುವ ಅವಶ್ಯಕತೆ ಇಲ್ಲ. ಅವಶ್ಯಕತೆ ಇದ್ದರೆ ಅವರೇ ನಮ್ಮನ್ನು ಅರ್ಥ ಮಾಡಿಕೊಳ್ಳುತ್ತಾರೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಉತ್ತಮವಾದ ನಗು ನೇಸರನ ಮಗು.

ನಿಮ್ಮ ಪತ್ರಗಳು

■ ತಿರುಪತಿ ಲಡ್ಡು ವಿವಾದ: ಧಾರ್ಮಿಕ ನಂಬಿಕೆ ಮೇಲೆ ನಡೆದ ಘೋರ ಅಪಚಾರ ಅಲ್ಲವೇ?

ಮಾನ್ಯರೆ,



ಕಳೆದ ವಾರ, ಇಡೀ ರಾಜ್ಯದ ಹಿಂದೂ ಧರ್ಮೀಯರನ್ನು ಬೆಚ್ಚಿ ಬೀಳಿಸಿದ್ದ ಸಂಗತಿ ಎಂದರೆ, ಹಿಂದೂ ಧರ್ಮದ ಆರಾಧ್ಯ ದೈವ ತಿರುಪತಿ ತಿಮ್ಮಪ್ಪನ ಲಡ್ಡು ಪ್ರಸಾದದಲ್ಲಿ ಕಳೆದ 5 ವರ್ಷಗಳಿಂದಲೂ ಪ್ರಾಣಿಗಳ ಕೊಬ್ಬನ್ನು ಬೆರೆಸಲಾಗುತ್ತಿತ್ತು. ಅದರಲ್ಲೂ ಹಿಂದೂಗಳ ಕಾಮಧೇನು ಎಂದೇ ಕರೆಯಲಾಗುವ ದಿನನಿತ್ಯ ಪೂಜೆ ಮಾಡುವ ಗೋಮಾತೆಯ ಮತ್ತು ಹಂದಿಯ ಕೊಬ್ಬನ್ನು, ಬೆರೆಸಿ ಲಡ್ಡುವನ್ನು ತಯಾರಿಸಲಾಗುತ್ತಿತ್ತು ಎಂದು ತಿರುಪತಿ ದೇವಸ್ಥಾನದ ಆಡಳಿತ ಮಂಡಳಿಯವರು ದೃಢಪಡಿಸಿದ್ದಾರೆ. ಪ್ರಯೋಗಾಲಯದ ವರದಿಯು ಸಹ ಇದನ್ನು ದೃಢಪಡಿಸಿದೆ.

ಈಗ ಆಂಧ್ರ ಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು, ಇದರ ಪಾಪ ಕಳೆಯಲು ಸಂಪ್ರೋಕ್ಷಣಾ ಕಾರ್ಯ ಕೈಗೊಳ್ಳುವುದಾಗಿ, ಇದರಿಂದ ದೇವರ ಆಶೀರ್ವಾದ ಪ್ರಾಪ್ತಿಯಾಗುತ್ತದೆ, ಸಮೃದ್ಧಿ ನೆಲೆಸುತ್ತದೆ ಮತ್ತು ಆಧ್ಯಾತ್ಮಿಕ ಶಾಂತಿ ಸಿಗುತ್ತದೆ ಎಂದು ಹೇಳಿದ್ದಾರೆ. ಆದರೆ ಇದೂವರೆಗೂ ಇಂತಹ ಲಡ್ಡುವನ್ನು ದೇವರ ಮಹಾಪ್ರಸಾದ ಎಂದು ತಿಳಿದು ಲಡ್ಡು ತಿಂದವರು ಏನು ಮಾಡಬೇಕು.

ಕಳೆದ ವರ್ಷ ನಡೆದ ಅಯೋಧ್ಯೆಯ ಶ್ರೀರಾಮ ಮಂದಿರ ಉದ್ಘಾಟನೆ ಸಮಾರಂಭಕ್ಕೆ ಇಲ್ಲಿಂದ ಒಂದು ಲಕ್ಷ ಲಡ್ಡುಗಳನ್ನು ಕಳುಹಿಸಲಾಗಿತ್ತು ಎಂದು ಆಡಳಿತ ಮಂಡಳಿ ಹೇಳಿದೆ. ಅಲ್ಲಿಂದ ದೇಶ – ವಿದೇಶಗಳಿಗೂ ಈ ಲಡ್ಡು ಹಂಚಿಕೆ ಆಗಿದೆ. ಈ ಲಡ್ಡುವನ್ನು ವಿದೇಶದ ಹಿಂದೂಗಳು ತಿಂದಿದ್ದಾರೆ. ಇದು ಧಾರ್ಮಿಕ ನಂಬಿಕೆಗೆ ಮಾಡಿದಂತಹ ಅಪಚಾರ ಅಲ್ಲವೇ, ಇದಕ್ಕೆ ಶಿಕ್ಷೆ ಇಲ್ಲವೇ?

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

■ ಅನರ್ಹ ಬಿಪಿಎಲ್ ಕಾರ್ಡ್ ರದ್ದಾಗಲಿ

ಮಾನ್ಯರೆ,

ಸರ್ಕಾರದ ಸವಲತ್ತುಗಳು ಯಾರು ಅರ್ಹರೊ ಅವರಿಗೆ ಮಾತ್ರ ಸಿಕಿದ್ದಾಗ ಮಾತ್ರ ಅದಕ್ಕೆ ಮೌಲ್ಯವಿರುತ್ತದೆ ಮತ್ತು ಸರ್ಕಾರದ ಬೊಕ್ಕಸಕ್ಕೂ ಹೊರೆ ಕಡಿಮೆಯಾಗುತ್ತದೆ. ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಕರ್ನಾಟಕದಲ್ಲಿ ಅವರ ಆದಾಯಕ್ಕನುಗುಣವಾಗಿ ಪಡಿತರ ಚೀಟಿ ವಿತರಣೆ ಮಾಡುತ್ತದೆ ಮತ್ತು ಇದರಿಂದಾಗಿ ಸಬ್ಸಿಡಿ ದರದಲ್ಲಿ ಆಹಾರ ಪದಾರ್ಥಗಳನ್ನು ಪಡೆಯಬಹುದಾಗಿದೆ.

ಕರ್ನಾಟಕ ಸರ್ಕಾರದ ಮಾಹಿತಿಯಂತೆ ರಾಜ್ಯದಲ್ಲಿ 1.27 ಕೋಟಿ ಕುಟುಂಬಗಳ 4.37 ಕೋಟಿ ಜನ ಬಿಪಿಎಲ್ ಕಾರ್ಡ್‌ನ ಸೌಲಭ್ಯಗಳನ್ನು ಬಳಸಿಕೊಳ್ಳುತ್ತಿದ್ದಾರೆ. ಅಂದರೆ ರಾಜ್ಯದ 80% ಜನ ಬಡತನ ರೇಖೆಗಿಂತ ಕೆಳಗಿದ್ದಾರೆ ಎಂಬುದನ್ನು ತೋರಿಸುತ್ತದೆ. ಆದರೆ ನೀತಿ ಆಯೋಗದ ವರದಿಯ ಪ್ರಕಾರ ರಾಜ್ಯದಲ್ಲಿ 5.6% ಜನ ಮಾತ್ರ ಬಡತನ ರೇಖೆಗಿಂತ ಕೆಳಗಿದ್ದಾರೆ ಎಂದೂ ತಿಳಿಸಿದ್ದು ಬಿಪಿಎಲ್ ಕಾರ್ಡ್‌ಗಳ ರದ್ದತಿಗೆ ಪುಷ್ಠಿ ನೀಡುತ್ತದೆ.

ರಾಜ್ಯದಲ್ಲಿ ಬಡತನ ರೇಖೆಗಿಂತ ಮೇಲಿರುವವರು ಬಿಪಿಎಲ್ ಕಾರ್ಡ್ ಬಳಕೆ ಮಾಡುತ್ತಿರುವುದು ಪತ್ತೆ ಆಗಿದ್ದು ಇದರಲ್ಲಿ ಒಟ್ಟು 40,00,000ಕ್ಕೂ ಹೆಚ್ಚು ಅನರ್ಹ ಬಿಪಿಎಲ್ ಕಾರ್ಡ್‌ದಾರರಿದ್ದಾರೆ ಮತ್ತು ಈ ಅನರ್ಹ ಬಿಪಿಎಲ್ ಕಾರ್ಡ್‌ಗಳ ಪಟ್ಟಿಯಲ್ಲಿ ಶೇಕಡ 20ರಷ್ಟು ಬಿಪಿಎಲ್ ಕಾರ್ಡ್ ಬಳಕೆದಾರರು ಬೆಂಗಳೂರಿನಲ್ಲಿಯೇ ಇರುವುದು ಬೆಳಕಿಗೆ ಬಂದಿದ್ದು ಸರ್ಕಾರ ಶೀಘ್ರ ಕ್ರಮ ಕೈಗೊಳ್ಳಲು ಮುಂದಾಗಿದೆ.

ರಾಜ್ಯದ ಜನತೆ ಕೂಡ ಯಾರು ಬಡತನ ರೇಖೆಗಿಂತ ಮೇಲಿದ್ದವರು ಅವರು ತಾವೇ ಸ್ವಯಂ ಮುಂದೆ ಬಂದು ಬಿಪಿಎಲ್ ಕಾರ್ಡ್ ಗಳ ರದ್ದತಿಗೆ ಸಹಕರಿಸುವ ಮೂಲಕ ಇತರರಿಗೆ ಪ್ರೇರಣೆಯಾಗಿ ಸರ್ಕಾರದ ಸೌಲಭ್ಯಗಳು ನಿಜವಾದ ಬಡ ಜನತೆ ದೊರಕಲು ಸಹಕರಿಸಬೇಕು.

–ರಾಸುಮ ಭಟ್, ಸಂಶೋಧನಾ ವಿದ್ಯಾರ್ಥಿ, ಚಿಕ್ಕಮಗಳೂರು.

■ ಇತರೆ ಕ್ರೀಡೆಗಳಿಗೂ ಇಡಿಗಂಟು ದೊರೆಯಲಿ

ಮಾನ್ಯರೆ,

ಇತ್ತೀಚೆಗೆ ನಡೆದ ಟಿ20–20 ಕ್ರಿಕೆಟ್ ವಿಶ್ವಕಪ್ ವಿಜೇತ ಭಾರತೀಯ ತಂಡಕ್ಕೆ ಅಭಿನಂದನೆ ಜೊತೆಗೆ ಬಾರೀ ನಗದು ಬಹುಮಾನ ಘೋಷಿಸಲಾಗಿದೆ. ಅಭಿನಂದನೆ ಮತ್ತು ಬಹುಮಾನಕ್ಕೆ ಅರ್ಹ ತಂಡವಾಗಿ ನಾವು ಸಹಾ ಅಭಿನಂದಿಸೋಣ. ಹಾಗೆಯೇ ಇತರೆ ಕ್ರೀಡೆಗಳಿಗೂ ಇಡಿಗಂಟು ದೊರಕುವಂತಾಗಲಿ. ನಮ್ಮ ದೇಶದಲ್ಲಿ ಎಷ್ಟೋ ಕ್ರೀಡೆಗಳಿಗೆ ಪ್ರೋತ್ಸಾಹ ದೊರಕುತ್ತಿಲ್ಲ. ಹಣದ ಕೊರತೆಯಿಂದ ಎಷ್ಟೋ ಕ್ರೀಡಾಪಟುಗಳ ಕನಸು ಕನಸಗೆ ಉಳಿಯುತ್ತಿದೆ. ಹಾಗೆಯೇ ನಮ್ಮ ರಾಷ್ಟ್ರೀಯ ಕ್ರೀಡೆ, ಹಾಕಿ, ಕುಸ್ತಿ, ಕಬಡ್ಡಿ ಇನ್ನಿತರ ಕ್ರೀಡೆಗಳನ್ನು ಪ್ರೋತ್ಸಾಹಿಸೋಣ. ಹಾಗೂ ಒಲಂಪಿಕ್ಸ್ ಇನ್ನಿತರ ಪ್ರಮುಖ ಕ್ರೀಡಾಕೂಟಗಳಲ್ಲಿ ಗೆದ್ದು ಬಂದಂತಹ ಕ್ರೀಡಾಪಟುಗಳಿಗೂ ಇಂತಹ ಅಭಿಮಾನ ಮತ್ತು ಬಹುಮಾನಗಳು ದೊರಕುವಂತಾಗಲಿ.

–ಕೆ.ಎಸ್.ಸುರೇಶ್, ಮುಖ್ಯಶಿಕ್ಷಕರು, ಸರಗೂರು

■ ಗಬ್ಬು ನಾರುತ್ತಿರುವ ಅನೈತಿಕ ಚಟುವಟಿಕೆಗಳ ತಾಣವಾಗಿರುವ ಅಂಡರ್‌ಪಾಸ್‌ಗಳ ಸರಿಪಡಿಸಿ

ಮಾನ್ಯರೆ,

ದಸರಾ ಸಮೀಪಿಸುತ್ತಿದ್ದಂತೆಯೇ ಪ್ರವಾಸಿಗರು ಹೆಚ್ಚು ಹೆಚ್ಚು ಮೈಸೂರು ಕಡೆ ಮುಖ ಮಾಡಿದ್ದಾರೆ. ಮೈಸೂರಿನ ಸ್ವಚ್ಛತೆ ಕಾಪಾಡುವುದರಲ್ಲಿ ನಗರಪಾಲಿಕೆ ಸವಾಲಾಗಿ ಸ್ವೀಕರಿಸಬೇಕಿದೆ.

ಮೈಸೂರಿನಲ್ಲಿರುವ ಅರಮನೆ ಹಾಗೂ ವಸ್ತು ಪ್ರದರ್ಶನಕ್ಕೆ ಸಂಪರ್ಕ ಕಲ್ಪಿಸುವ ಅಂಡರ್‌ಪಾಸ್‌ಗಳ ಸೇರಿದಂತೆ ಮೈಸೂರಿನಲ್ಲಿ ಇರುವಂತಹ ಇಂತಹ ಮಾರ್ಗಗಳು ಗಬ್ಬು ನಾರುತ್ತಿವೆ. ಲಕ್ಷಾಂತರ ರೂ. ಖರ್ಚು ಮಾಡಿ ಪಾದಚಾರಿಗಳಿಗೆ ಉಪಯೋಗಕ್ಕಾಗಿ ನಿರ್ಮಾಣ ಮಾಡಿದಂತಹ ಅಂಡರ್ ಗ್ರೌಂಡ್ ಅನೈತಿಕ ಚಟುವಟಿಕೆಗಳ ತಾಣ ವಾಗಿವೆ. ಇನ್ನೂ ಕೆಲವುಗಳಿಗೆ ಬೀಗ ಹಾಕಿದ್ದಾರೆ. ನಗರ ಪಾಲಿಕೆ ಅಧಿಕಾರಿಗಳ ಈಗಲಾದರೂ ಪಾದಚಾರಿಗಳಿಗೆ ಓಡಾಡಲು ಅಂಡರ್ ಗ್ರೌಂಡ್ ಮಾರ್ಗಗಳ ಸ್ವಚ್ಛಗೊಳಿಸಿ ಒಬ್ಬ ಸೆಕ್ಯುರಿಟಿ ಗಾರ್ಡ್ ನೇಮಿಸಿ ಪೂರ್ಣ ಪ್ರಮಾಣದಲ್ಲಿ ಆಗದೇ ಹೋದರೂ ದಸರಾ ಸಂದರ್ಭದಲ್ಲಾದರೂ ಉಪಯೋಗಕ್ಕೆ ಬರುವಂತೆ ಮಾಡಲಿ. ಸ್ವಚ್ಛತೆ ಕಾಪಾಡಿ ಸ್ವಚ್ಛ ನಗರಿ ಹೆಸರು ಉಳಿಸುವ ಕೆಲಸ ಮಾಡಬೇಕು. ಇಲ್ಲವಾದಲ್ಲಿ ವಿವಿಧ ಸಂಘಟನೆಗಳ ಜೊತೆ ಸೇರಿ ನಗರಪಾಲಿಕೆ ಮುಂಭಾಗ ಪ್ರತಿಭಟಿಸಬೇಕಾಗುತ್ತದೆ ಎಂದು ಎಚ್ಚರಿಸುತ್ತಿದ್ದೇವೆ.

–ವಿಕ್ರಂ ಅಯ್ಯಂಗಾರ್, ಸಾಮಾಜಿಕ ಹೋರಾಟಗಾರ, ಮೈಸೂರು.



ಗುಬ್ಬಿಗೂಡು ರಮೇಶ್
ಮೊ: 97429–34512

ದೀಪ ಸಾಲು

ಮಕ್ಕಳ ಪದ್ಯದ ಗುಂಗಿನಲ್ಲಿ ಮೈಮರೆತು

ಈ ಅಂಕಣದಲ್ಲಿ ನಿರಂತರ ಕಲಿಕಾ ಮಾಧ್ಯಮ ಕುರಿತ ಕೌಶಲಾಧಾರಿತ ಹೊಸ ಶಿಕ್ಷಣ ನೀತಿಯ ಬಗ್ಗೆ ನನ್ನ ಚರ್ಚೆ ಇಲ್ಲ; ಅದರ ಬದಲಿಗೆ ನಮ್ಮ ಎದೆಯಾಳದಲ್ಲಿ ಬೇರೂರಿ ಪಿಳಿಪಿಳಿ ಕಣ್ಣುಬಿಟ್ಟು ಸಹಪಾಠಿಗಳೊಂದಿಗೆ ಸಂಭ್ರಮಿಸುತ್ತಾ ನಾವು ಕಲಿತ ಆ ಸ್ಲೇಟು–ಬಳಪದ ದಿನಗಳೇ ನನ್ನ ಈ ಹೊತ್ತಿನ ನೆನಪಿನೋತ್ಸವ. ಸ್ವಪ್ರೇಮದಿಂದ ನಾವೇ ಈ ಹಿಂದೆ ಕಲಿತ ಮಕ್ಕಳ ಪದ್ಯದ ಸೌಂದರ್ಯದ ಕಡೆಗೆ ನನ್ನನ್ನು ಇಂದು ಲಯಬದ್ಧವಾಗಿ ಕರೆದುಕೊಂಡು ಹೋಗಿದೆ. ಹಾಗಾಗಿ ನಿಮ್ಮೊಂದಿಗೆ ಅದನ್ನು ಹಂಚಿಕೊಳ್ಳುವ ತವಕ. ಯಾಕೋ ಈ ವಾರ ಹಾಗಾಯಿತು. Twinkle twinkle little star How I wonder what you are ಹೇಗೆ ಇಂಗ್ಲಿಷಿನ ಈ ಪದ್ಯ ಇಂದಿಗೂ ನಮ್ಮ ನಾಲಗೆಯ ತುದಿಯಲ್ಲಿ ಉಳಿದಿದೆಯೋ ಹಾಗೆಯೇ ನಮ್ಮ ತಲೆಯ ತಪ್ಪಲೆಯೊಳಗೆ ಕೆಲವು ಅಪರೂಪದ ಕನ್ನಡ ಪದ್ಯಗಳೂ ಕೂಡ ಉಳಿದಿವೆ. ಅವು ನಮ್ಮ ಭಾವಕೋಶದ ಶಾಶ್ವತ ನೆನಪುಗಳಂತೆ ಇಂದಿಗೂ ನಮ್ಮನ್ನು ಆಳುತ್ತವೆ ನೋಡಿ! ಹಾಗೆ ನೆನಪಾದವು ಸ್ಲೇಟು ಬಳಪದ ಕಲಿಕೆಯ ದಿನಗಳಲ್ಲಿ ಹಾಡಿಕೊಂಡು, ಕುಣಿದು ಕುಪ್ಪಳಿಸಿ ಕಲಿತ ಕನ್ನಡದ ಪದ್ಯಗಳು ಬಹುಶಃ ಈ ಪದ್ಯಗಳು ಇಂದಿಗೂ ನಿಮ್ಮ ಸ್ಮೃತಿಪಟಲದಲ್ಲಿ ಉಳಿದಿರಬೇಕು! ಕವಿ ಜಿ.ಪಿ.ರಾಜರತ್ನಂರವರು ಬರೆದ

ನಾಯಿಮರಿ! ನಾಯಿಮರಿ! ತಿಂಡಿ ಬೇಕೇ?'
'ತಿಂಡಿ ಬೇಕು ತೀರ್ಥಬೇಕು ಎಲ್ಲಬೇಕು!'
ನಾಯಿಮರಿ! ನಿನಗೆ ತಿಂಡಿ ಏಕೆ ಬೇಕು
'ತಿಂದು ಗಟ್ಟಿಯಾಗಿ ಮನೆಯ ಕಾಯಬೇಕು!'
ನಾಯಿ ಮರಿ ಕಳ್ಳ ಬಂದರೇನು ಮಾಡುವೆ?'
'ಲೊಳ್! ಲೊಳ್! ಭೌ! ಎಂದು ಕೂಗಿಯಾಡುವೆ!
ಜಾಣಮರಿ! ತಾಳು! ಹೋಗಿ ತಿಂಡಿ ತರುವೆನು'
'ತಾ, ನಿನ್ನ ಮನೆಯ ನಾನು ಕಾಯುತಿರುವೆನು.

ಇಂಥ ಶಿಶುಪದ್ಯಗಳು ಮಕ್ಕಳ ಎದೆಯಲ್ಲಿ ರಾಗದ ಕಸುವನ್ನು ಪ್ರಾಣಿಪ್ರೀತಿಯ ಸುಖವನ್ನು ನಾಯಿಯ ನಿಯತ್ತಿನ ಪಾಠವನ್ನು ಹೇಳಿಕೊಟ್ಟು ಸ್ಲೇಟು ಬಳಪದ ಕೈಗಳನ್ನು ಬೆಳೆಸಿದ ಆ ದಿನಗಳನ್ನು ಮರೆವುದುಂಟೆ?

ರಾಷ್ಟ್ರಕವಿ ಕುವೆಂಪು ಅವರು ಬರೆದ 'ಅರ್ಧಚಂದ್ರ' ಎಂಬ ಕನ್ನಡ ಪದ್ಯ ನಿಮಗೆ ನೆನಪಿರಬೇಕು.

'ದೇವರ ಪೆಪ್ಪರಮೆಂಟೇನಮ್ಮ
ಗಗನದೊಳಲೆಯುವ ಚಂದಿರನು?
ಎಷ್ಟೇ ತಿಂದರು ಖರ್ಚೇ ಆಗದ
ಬೆಳೆಯುವ ಪೆಪ್ಪರಮೆಂಟೇನಮ್ಮ!'
ದಿನದಿನ ನೋಡುವೆ, ದಿನವೂ ಕರಗುತ
ಎರಡೇ ವಾರದೊಳಳಿಯುವುದು
ಮತ್ತದು ದಿನ ದಿನ ಹೆಚ್ಚುತ ಬಂದು
ಎರಡೇ ವಾರದಿ ಬೆಳೆಯುವುದು!
ಅಕ್ಷಯವಾಗಿಹ ಪೆಪ್ಪರಮೆಂಟದು
ನನಗೂ ದೊರಕುವುದೇನಮ್ಮ
ನೀನೂ ದೇವರ ಬಾಲಕನಾಗಲು
ನಿನಗೂ ಕೊಡುವನು ಕಂದಯ್ಯ!
'ದೇವರ ಬಾಲಕನಾಗಲು ಒಲ್ಲೆ
ಆತನ ಮೀರಿಹೆ ನೀನಮ್ಮ!
ತಾಯಿಯನಗಲಿಸಿ ದೇವರ ಹಿಡಿಸುವ
ಪೆಪ್ಪರಮೆಂಟೂ ಬೇಡಮ್ಮ

ಹೇಗಿದೆ ನೋಡಿ ತಾಯಿ ದೇವರ ಜೊತೆ ಮಗುವನ್ನು ಬೆಸೆಯುವ ಪದ್ಯದ ಮೋಡಿ! ದೇವರಿಗಿಂತ ತಾಯ ಮಮತೆಯೇ ಹೆಚ್ಚು! 'ತಾಯಿಗಿಂತ ದೇವರಿಲ್ಲ' ಎನ್ನುವ ಎದೆಯಾಳದ ಹುಚ್ಚು! ಇವತ್ತಿಗೂ ಎಷ್ಟೋ ಕವಿಗಳಿಗೆ, ಕಿವಿಗಳಿಗೆ ಪ್ರೇರೇಪಣೆ. ಹೀಗೆ ಗ್ಯಾಜೆಟ್ಟುಗಳಿಲ್ಲದ ಕಾಲದಲ್ಲಿ ಸ್ಲೇಟು ಬಳಪದ ಕೈಗಳಿಗೆ ಎಷ್ಟು ಸರಳ, ಎಂಥ ಸುಂದರ ಪದ್ಯಗಳ ಕೈಗಡಗ ತೊಡಿಸಿದ ಆ ದಿನಗಳು ಈ ವಾರ ನೆನಪಾದವು. ಈಗಿನ ಗ್ಯಾಜೆಟ್ ಲೋಕದ ಚಿಣ್ಣರಿಗೆ ಇವು ದಕ್ಕದಿರುವುದು ವಿಷಾದವೋ! ವಿನೋದವೋ ಗೊತ್ತಿಲ್ಲ!

ವರಕವಿ ದ.ರಾ.ಬೇಂದ್ರೆಯವರು ಬರೆದ 'ಕರಡಿ ಕುಣಿತ' ಪದ್ಯವ ಮರೆತವರುಂಟೆ?

ಕಬ್ಬಿಣ ಕೈಕಡಗ, ಕುಣಿಗೋಲು, ಕೂದಲು
ಕಂಬಳಿ ಹೊದ್ದಾಂವ ಬಂದಾನ!
ಗುಣುಗುಣು ಗುಟ್ಟುತ ಕಡಗವ ಕುಟ್ಟುತ
ಕರಡಿಗಂಯನಾಡಿಸುತ ನಿಂದಾನ!
ಕರಡೀ ಕುಣಿತಕ್ಕಿಂತ ನರರಬುದ್ಧಿಯ ಕುಣಿತ
ಮಿಗಿಲಹುದು ಕವಿಕಂಡು ನುಡಿದಾನ

ಸಾಮಾಜಿಕ ಅಸಮಾನತೆ ಹಸಿವು, ಮನುಷ್ಯನ ಬುದ್ಧಿಯ ಕುಣಿತ ಇತ್ಯಾದಿಗಳು ಪುಟಾಣಿಗಳ ಮನದಲ್ಲಿ ಮನೆ ಮಾಡಿ ಸ್ಲೇಟು–ಬಳಪ ಹಿಡಿವ ಕೈಯ್ಯಲ್ಲಿ ಚೈತನ್ಯ ತುಂಬಿದ್ದು ಸುಳ್ಳೇ? ಸಿದ್ದಯ್ಯ ಪುರಾಣಿಕರು ಬರೆದ 'ನನ್ನ ಕುದುರೆ' ಕವಿತೆಯ ಮೊದಲ ಸಾಲನ್ನು ಸಾಕು ಇಂದಿಗೂ ಅದರ ಕೊನೆಯ ಸಾಲು ಅದರಷ್ಟಕ್ಕೆ ಅದೇ ನಾಲಗೆಯ ತುದಿಗೆ ಬಂದು ನಿಲ್ಲುತ್ತದೆ.

ಅಜ್ಜನ ಕೋಲಿದು ನನ್ನಯ ಕುದುರೆ



> ❝ ತಂತ್ರಜ್ಞಾನ ಮುಂದುವರಿದರೂ ಆ ತಂತ್ರಜ್ಞಾನವನ್ನೇ ಸಂಭ್ರಮಿಸುವ, ಬಾಯಿ ಪಾಠವಾಗುವಂತಹ ಮಕ್ಕಳ ಪದ್ಯಗಳನ್ನು ಬರೆವ ಮಹನೀಯ ಕವಿಗಳ ದಂಡು ಈ ಕಾಲದಲ್ಲೂ ಬರಬೇಕು. ನಮ್ಮ ಮಕ್ಕಳು ಮೊಮ್ಮಕ್ಕಳನ್ನೂ ಕನ್ನಡ ಪದ್ಯಗಳ ಜೊತೆ ಕುಣಿಸಬೇಕು. ಈಗಲೂ ಮಕ್ಕಳ ಪದ್ಯಗಳನ್ನು ಬರೆವ ಬರಹಗಾರರ ದಂಡು ಬರಲಿ ಎಂಬುದೇ ನಮ್ಮೆಲ್ಲರ ಬಯಕೆ.

ಹೆಜ್ಜೆ ಹೆಜ್ಜೆಗೆ ಕುಣಿಯುವ ಕುದುರೆ
ಕಾಲಿಲ್ಲದೆಯೇ ಬದುಕುವ ಕುದುರೆ
ನಾಲನು ಬಡಿಸದ ಜೂಲವ ಹೊದಿಸದ
ಲಾಲನೆ ಪಾಲನೆ ಬಯಸದ ಕುದುರೆ
ಅಜ್ಜನ ಕೋಲಿದು ನನ್ನಯ ಕುದುರೆ

ಪುರಾಣಿಕರು ಅಜ್ಜನ ಕೋಲಿನ ಕುದುರೆಗೆ ಕಾಡೇವಾಡದಲ್ಲಿ ಕಾಣದ, ಅರಬ್ ದೇಶದಲ್ಲಿ ದೊರೆಯದ, ಅರಸು ಮಕ್ಕಳಿಗೂ ಸಿಗದ, ಕುದುರೆಯಂತೆ ಕಾಣುವ ಅಜ್ಜನ ಕೋಲು ಮೊಮ್ಮಗನಿಗೆ ಬಲು ಮೋಜಿನ ಕುದುರೆಯಂತೆ ಕಂಡಿದ್ದು ಎಷ್ಟೋ ಜನರ ಸ್ಲೇಟು–ಬಳಪದ ಮನಸ್ಸುಗಳಲ್ಲಿ ಇಂದಿಗೂ ಅಚ್ಚಳಿಯದೆ ಉಳಿದಿದೆ. ದಿನಕರ ದೇಸಾಯಿಯವರು ಬರೆದ 'ಗಡಿಯಾರ' ಎಂಬ ಮಕ್ಕಳ ಪದ್ಯ ಇವತ್ತು ನಮ್ಮ ಕೈಯ್ಯಲ್ಲೇ ಇರುವ 'ನಿಲ್ಲದ ಕಾಲ'ದಂತೆ ಓಡುವ ಸಮಯ ತೋರುವ ಗಡಿಯಾರ

ಗಂಟೆಯ ನೆಂಟನೆ ಓ ಗಡಿಯಾರ
ಬೆಳ್ಳಿಯ ಬಣ್ಣದ ಗೋಳಾಕಾರ
ವೇಳೆಯ ತಿಳಿಯಲು ನೀನಾಧಾರ
ಟಿಕ್ ಟಿಕ್ ಗೆಳೆಯಾ ಟಿಕ್ ಟಿಕ್ ಟಿಕ್

ಮಕ್ಕಳ ಮನಸ್ಸಿಗೆ ನಾಟಲಾರದ ಸಾಮಾಜಿಕ ವಿಷಯಗಳನ್ನು ಅತ್ಯಂತ ಸರಳವಾದ ರೀತಿಯಲ್ಲಿ ಪುಟ್ಟಮಕ್ಕಳ ಕಿವಿಗೆ ಕನ್ನಡದ ಪದ್ಯಗಳು ಸ್ಲೇಟು ಬಳಪದ ಸದ್ದು ಮಾಡಿ ಹೋಗಿವೆ. ದೊಡ್ಡವರಾದ ಮೇಲೂ ಇಂದಿಗೂ ಆ ಪದ್ಯಗಳು ನಮ್ಮ ತಲೆಮಾರಿನ ಜನರಲ್ಲಿ ಅಳಿಯದೇ ಉಳಿದಿವೆ. ಕುವೆಂಪು ಅವರು ಬರೆದ 'ಅನ್ನದಾತ' ಕವಿತೆ ರೈತರನ್ನು ಅಂದಿನ ಮಕ್ಕಳಿಗೆ ಪರಿಚಯಿಸಿದ್ದು ಹೇಗಿದೆ ನೋಡಿ.

ರೈತ ನಮ್ಮ ಅನ್ನದಾತ
ಹೊಲದಿ ದುಡಿದೆ ದುಡಿವನು
ನಾಡ ಜನರು ಬದುಕಲೆಂದು
ದವಸಧಾನ್ಯ ಬೆಳವನು
ಗಟ್ಟಿ ದೇಹ ದೊಡ್ಡ ಮನಸು
ತಾಯಿಯಿಂದ ಪಡೆದನು
ಯೋಗಿಯಾಗಿ ತ್ಯಾಗಿಯಾಗಿ
ಅನ್ನ ನೀಡುತಿರುವೆನು

ರೈತನ ಈಡು–ಜೋಡುಗಳು ಅವನ ಜೊತೆ ದುಡಿವ ಅವನ ಎತ್ತುಗಳು, ಹಿಗ್ಗುಕುಗ್ಗು ಏನೇ ಇರಲಿ ಹೊಂದಿಕೊಂಡು ನಡೆವರು –ಹೀಗೆ ರೈತನ ಪರಿಚಯಿಸಿದ ಕವಿ, ರೈತನ ದುಡಿಮೆಯ ಹಿರಿಮೆಗೆ ಗರಿ ಜೋಡಿಸಿದ ಹಾಗೆ ಬರೆದರು. ಮುಪ್ಪಿನ ಷಡಕ್ಷರಿಯವರು ಬರೆದ

ತಿರುಕನೋರ್ವನೂರ ಮುಂದೆ
ಮುರುಕು ಧರ್ಮ ಶಾಲೆಯಲ್ಲಿ
ಒರಗಿರುತ್ತಲೊಂದು ಕನಸ ಕಂಡನಂತೆನೆ ।

ತಿರುಕನೊಬ್ಬ ತಾನು ರಾಜನಾಗುವ ಕನಸು ಕಾಣುವ ಮಕ್ಕಳ ಕವಿತೆ 'ತಿರುಕನ ಕನಸು' ಕವಿತೆ ಸ್ಲೇಟು–ಬಳಪ ಹಿಡಿದ ಯಾರ ಕಿವಿಗಳಿಗೂ ಈ ಕವಿತೆ ಮರೆತು ಹೋಗಿಲ್ಲ. ಕನಸಿನಲ್ಲಿಯೇ ಮದುವೆ, ಧನದ ಮದ, ರಾಜ್ಯ ಮದ, ಯುವತಿಯ ಮದವನ್ನು ಅನುಭವಿಸುತ್ತಿರುವಾಗಲೇ ಕನಸೊಡೆದೆದ್ದು ರಾಜನ ದಂಡು ಮನೆಯ ಮುತ್ತಿದಂತಾಗಿ ಕಣ್ಣು ತೆರೆದು, ಕಂಡಿದ್ದೆಲ್ಲವೂ ತಿರುಕನ ಕನಸು ಎಂದು ಭಾಸ ವಾಗುವ 'ತಿರುಕನ ಕನಸು' ಮಕ್ಕಳ ಪದ್ಯ ಆ ಕಾಲದ ಕವಿತೆ ಎಂಬ ಕನಕಾಂಬರ. ಮಕ್ಕಳ ಕನ್ನಡ ಪದ್ಯ ಸ್ಲೇಟು–ಬಳಪ ಹಿಡಿದ ಕಾಲದಲ್ಲಿ ಎಂಥೆಂಥ ಸೊಗಸುಗಳನ್ನು ಕಂಡವರು ಅವರು. ಇವತ್ತಿಗೂ ಇಂಗ್ಲಿಷಿನ ರೈಮಿಂಗ್ ವರ್ಡ್ಸ್ ಅನ್ನು ಬಾಯಿ ಪಾಠ ಮಾಡಿ ಮೇಷ್ಟ್ರಿಗೆ ಒಪ್ಪಿಸಿದಂತೆ, ಅಂದಿನ ಕನ್ನಡದ ಈ ಮಕ್ಕಳ ಪದ್ಯಗಳು, ನಮಗೆ ಎಷ್ಟೇ ವಯಸ್ಸಾದರೂ ನಾಲಗೆಯ ತುದಿಯಲ್ಲೇ ನಿಂತು ನಲಿಯುತ್ತವೆ.

ಅಂಚೆಯ ಅಣ್ಣ ಬಂದಿಹೆ ಚಿಣ್ಣ
ಅಂಚೆಯ ಹಂಚಲು ಮನೆ ಮನೆಗೆ
ಸಾವಿರ ಸುದ್ದಿಯ ಬೀರುತ ಬರುವೆನು
ತುಂಬಿದ ಚೀಲವು ಹೆಗಲೊಳಗೆ

ನೀ.ರೇ. ಹಿರೇಮಠ ಅವರು ಬರೆದ ಕವಿತೆಯಿದು.

ಬಾಗಿಲ ತಟ್ಟಿ ಚಿಲಕವ ಕುಟ್ಟಿ
ಸದ್ದನು ಮಾಡುತ ಕರೆಯುವೆನು
ಕಾಗದ ಬಂದಿದೆ ಬೇಗದಿ ಬನ್ನಿರಿ
ಕಾಗದ ಕೊಳ್ಳಿರಿ ಎನ್ನುವೆನು

ಅಂಚೆಯಣ್ಣನನ್ನು ಕುರಿತ ಮಕ್ಕಳ ಪದ್ಯದ್ದು. ಈಗ ಕಾಗದವೂ ಇಲ್ಲ ಇಂಥ ಪದ್ಯಗಳು ಇಲ್ಲ. ಇದು ಈ ಮೇಲು–ಮಿಸ್ಸೈಲುಗಳ ಕಾಲ! ಟ್ವಿಟ್ಟರು ವಾಟ್ಸಪ್‌ಗಳ ಮೇಳ! ತಂತ್ರಜ್ಞಾನ ಮುಂದುವರಿದರೂ ಆ ತಂತ್ರಜ್ಞಾನವನ್ನೇ ಸಂಭ್ರಮಿಸುವ, ಬಾಯಿ ಪಾಠವಾಗುವಂತಹ ಮಕ್ಕಳ ಪದ್ಯಗಳನ್ನು ಬರೆವ ಮಹನೀಯ ಕವಿಗಳ ದಂಡು ಈ ಕಾಲದಲ್ಲೂ ಬರಬೇಕು. ನಮ್ಮ ಮಕ್ಕಳು ಮೊಮ್ಮಕ್ಕಳನ್ನೂ ಕನ್ನಡ ಪದ್ಯಗಳ ಜೊತೆ ಕುಣಿಸಬೇಕು. ಈಗಲೂ ಮಕ್ಕಳ ಪದ್ಯಗಳನ್ನು ಬರೆವ ಬರಹಗಾರರ ದಂಡು ಬರಲಿ ಎಂಬುದೇ ನಮ್ಮೆಲ್ಲರ ಬಯಕೆ. ಅದೇ ಮರ, ಅದೇ ಕೆಂಪು ಮೂಗಿನ ಮುದ್ದಿನ ಗಿಣಿ ಎಲ್ಲವೂ ಇದೆ. ಆದರೆ ಶಾಲೆಯಲ್ಲಿ ಚಿಣ್ಣರ ಬಳಗ ದನಿ ಎತ್ತರಿಸಿ ಹಾಡುವ ಹುಮ್ಮಸ್ಸಿಲ್ಲ.

ಬಾಬಾ ಗಿಳಿಯೆ, ಬಣ್ಣದ ಗಿಳಿಯೆ
ಹಣ್ಣನು ಕೊಡುವೆನು ಬಾ ಬಾ
ಹಸಿರು ಪುಕ್ಕದ ಚೆಂದದ ಗಿಳಿಯೆ
ನನ್ನೊಡನಾಡಲು ಬಾ ಬಾ
ಸೊಕ್ಕಿನ ಟಾಮಿ ಹತ್ತಿರವಿಲ್ಲ
ಕುಣಿದಾಡುತ ಬಾಬಾ
ಹಣ್ಣನು ತಿಂದು ಹಾಲನು ಕುಡಿದು
ಮುಗಿಲಿಗೆ ಹಾರುವ ಬಾಬಾ

ಹೀಗೆ ಬಣ್ಣದ ಗಿಳಿಯನ್ನು ಕುರಿತು ಬರೆದವರು ಶಂ.ಗು. ಬಿರಾದಾರ ಎಂಬ ಕವಿ. ದೊಡ್ಡವರಾಗುತ್ತಾ ವೈಚಾರಿಕತೆ, ಪಾಂಡಿತ್ಯ ನಮ್ಮ ನಮ್ಮ ವೃತ್ತಿ ಪ್ರವೃತ್ತಿಗಳು ಹಿಗ್ಗುತ್ತಾ ಹೋಗುತ್ತದೆ. ನಾವು ದೊಡ್ಡವರಾಗುತ್ತೇವೆ. ಎದೆಯಾಳದ ಒಂದು ಮೂಲೆಯಲ್ಲಿ ನಮ್ಮ ಮುಗ್ಧತೆ. ಮಗುವಿನ ಮನಸ್ಸು, ಅಪ್ರಜ್ಞಾಪೂರ್ವಕವಾಗಿಯಾದರೂ ಜಾಗೃತವಾಗಿರುತ್ತದೆ. ಮದುವೆ ಮಾಡಿ ಮಗಳನ್ನು ಗಂಡನ ಮನೆಗೆ ಕಳಿಸುವಾಗ ಮಕ್ಕಳಂತೆ ಅತ್ತು ಬಿಡುತ್ತೇವೆ. ಮಗ ಆಟಪಾಠದಲ್ಲೆಲ್ಲೋ ರ‍್ಯಾಂಕು ಮೆಡಲುಗಳನ್ನು ಗೆದ್ದರೆ ಸಂತೋಷಕ್ಕೂ ಕಣ್ಣೀರಾಗುತ್ತೇವೆ. ತೀರಾ ವಯಸ್ಸೇ ಮುಗಿದು ಹೋದಾಗ ಮನಸ್ಸು ಮಾಗಿದ ವೃದ್ಧಾಪ್ಯದಲ್ಲೂ ಮಗುತನಕ್ಕೆ ಪ್ರಯಾಣ ಮಾಡಿ ತನ್ನ ಕೆಲಸ ಮುಗಿಸುತ್ತದೆ. ತತ್ವಶಾಸ್ತ್ರ ತತ್ವಜ್ಞಾನಿಗಳು ಬದುಕಿನ ಅರ್ಥ ಪ್ರಕಾಶನಗಳ ಕುರಿತು ಸಿದ್ಧಾಂತಗಳ ಮುಖೇನ ವ್ಯಾಖ್ಯಾನಿಸುತ್ತಾರೆ. ಈ ಮಗುತನವೆಂಬುದು ಅಲ್ಲಿಂದ ಇಲ್ಲಿಯವರೆಗೂ ಯಾವಾಗ ಬೇಕೋ ಎಷ್ಟು ಬೇಕೋ ಅಷ್ಟನ್ನು ನಮ್ಮ ಎದೆಯಾಳದಲ್ಲಿ ಭಾವ ಸ್ಫುರಣೆ ಮಾಡಿ ನಮ್ಮ ಮನಸ್ಸನ್ನು ಮತ್ತೆ ಮತ್ತೆ ಮಕ್ಕಳಾಗಿಸುತ್ತದೆ. ಅಲ್ಲಿ ಸಿಗುವ ಸುಖದ ಬಗ್ಗೆ ಹಾಗೆ ಸುಮ್ಮನೆ ಯೋಚಿಸಿದಾಗ ನೆನಪಾದವು ನಮ್ಮ ಕಾಲದ ಈ ಮಕ್ಕಳ ಪದ್ಯಗಳು. ಕಯ್ಯಾರ ಕಿಞ್ಞಣ್ಣ ರೈ ಅವರು ಬರೆದ

ಸಂತೆಗೆ ಹೋದನು ಭೀಮಣ್ಣ
ಹಿಂಡಿಯ ಕೊಂಡನು ಹತ್ತು ಮಣ
ಕತ್ತೆಯ ಬೆನ್ನಿಗೆ ಹೇರಿಸಿದ
ಕುದುರೆಯ ಜೊತೆಯಲಿ ಸಾಗಿಸಿದ

ಎಂಬ ಪದ್ಯವೊಂದನ್ನು ನಿವೃತ್ತಿಗೆ ಕೆಲವೇ ದಿನಗಳಿರುವ ನನ್ನ ಮಿತ್ರರಾದ ಶ್ರೀ ಅಶ್ವತ್ಥರಾಮ್ ಎಂಬುವವರು ಬೆಂಗಳೂರಿನ ಪದವಿಪೂರ್ವ ಶಿಕ್ಷಣ ಇಲಾಖೆಯ ಕಛೇರಿಯಲ್ಲಿ ಪದೇ ಪದೆ ಮಾತಿನ ನಡುವೆ ಹೇಳುತ್ತಿದ್ದರು! ಆಗ ನನಗೆ ಹುಟ್ಟಿದ್ದೇ ಈ ಮಕ್ಕಳ ಪದ್ಯದ ಗುಂಗು. ನೆನಪಿಸಿಕೊಳ್ಳುತ್ತಾ ಹೋದಂತೆಲ್ಲಾ ಬೆಳೆಯುತ್ತಾ ಹೋದವು. ಡಿ.ಎಸ್. ಕರ್ಕಿ ಅವರು ಬರೆದ

ನಾಡ ಬೆಡಗ ಹಾಡು ಹುಡುಗ
ತನನ ತನನ ತೋಂ!
ಕನ್ನಡದಲಿ ನುಡಿಯಾಡಲಿ
ತನನ ತನನ ತೋಂ!
ನೆನಪಾಯಿತು ಹೊಯಿಸಳ ಅವರು ಬರೆದ
ತಟ್ಟು ಚಪ್ಪಾಳೆ ಪುಟ್ಟ ಮಗು
ತಕ್ಕೋ ಕೈ ಇಕ್ಕೋ ಕೈ
ಗಾಂಧಿಗಿಂದು ಜನುಮದಿನ
ತಟ್ಟು ಚಪ್ಪಾಳೆ ಪುಟ್ಟ ಮಗು

ನೆನಪಾಯಿತು ಕಡೆಗೆ ಜೆ.ಪಿ. ರಾಜರತ್ನಂ ಬರೆದಂತೆ ಮನಸ್ಸು 'ಬಣ್ಣದ ತಗಡಿನ ತುತ್ತೂರಿ'ಯನ್ನು ಊದಿಯೇ ಬಿಟ್ಟಿತು

ಬಣ್ಣದ ತಗಡಿನ ತುತ್ತೂರಿ
ಕಾಸಿಗೆ ಕೊಂಡನು ಕಸ್ತೂರಿ
ಸರಿಗಮ ಪದನಿಸ ಊದಿದನು
ಸರಿಗಮ ಪದನಿಸ ಹಾಡಿದನು

ಹೀಗೆ ಈ ವಾರ ಮಕ್ಕಳ ಪದ್ಯದ ಗುಂಗಿನಲ್ಲಿ ಮೈಮರೆತೆ. ಮುಂದಿನ ವಾರ ದೊಡ್ಡವರ ವಿಚಾರ ಮಾತಾಡೋಣ. ಬಾಲ್ಯದ ದಿನಗಳ ರೋಚಕತೆ ಮುಗ್ಧತೆಗಳೇ ಅಂಥಾದ್ದು. ಏನಂತೀರಿ?

ಕುಕ್ಕರಹಳ್ಳಿ ಕೆರೆ ಆವರಣದಲ್ಲಿ ವಾಯು ವಿಹಾರಿಗಳಿಗೆ ಬೀದಿ ನಾಯಿಗಳ ಉಪಟಳ

ಮೈಸೂರು, ಸೆ.23(ಎಂಕೆ)– ಮೈಸೂರಿನ ವಾಯು ವಿಹಾರಗಳ ನೆಚ್ಚಿನ ತಾಣವಾದ ಸುವಿಶಾಲ ಕುಕ್ಕರಹಳ್ಳಿ ಕೆರೆ ಏರಿ ಹಾಗೂ ಆವರಣದಲ್ಲಿ ಬೀದಿ ನಾಯಿಗಳ ಹಾವಳಿ ವಿಪರೀತವಾಗಿದ್ದು, ನಿತ್ಯ ಆತಂಕದಲ್ಲಿಯೇ ವಿಹರಿಸಬೇಕಾದ ದುಸ್ಥಿತಿ ನಿರ್ಮಾಣವಾಗಿದೆ.

ಅರಮನೆ ನಗರದ ಗಲ್ಲಿ ಗಲ್ಲಿಗಳಲ್ಲಿ ಮಾತ್ರವಲ್ಲದೆ ಕುಕ್ಕರಹಳ್ಳಿ ಕೆರೆ ಏರಿಯಲ್ಲಿ ಹಿಂಡಿಂಡೂ ಬೀದಿ ನಾಯಿಗಳ ಹಾವಳಿ ದಿನೇ ದಿನೆ ಹೆಚ್ಚಾಗುತ್ತಿದ್ದು, ವಾಯು ವಿಹಾರಿಗಳಲ್ಲಿ ಪ್ರಾಣ ಭಯ ತಂದೊಡ್ಡಿವೆ. ವಯೋವೃದ್ಧರು, ಮಹಿಳೆಯರು, ಶಾಲಾ–ಕಾಲೇಜು ವಿದ್ಯಾರ್ಥಿಗಳು, ಮಕ್ಕಳ ನೆಚ್ಚಿನ ತಾಣವಾಗಿರುವ ಕುಕ್ಕರಹಳ್ಳಿ ಕೆರೆ ಸುತ್ತ ಗುಂಪು ಗುಂಪಾಗಿ ಅಡ್ಡಾಡುತ್ತಿರುವ ಬೀದಿ ನಾಯಿಗಳು ವಿಹಾರಿಗಳಲ್ಲಿ ಆತಂಕ ಸೃಷ್ಟಿಸಿವೆ.

ಮೈಸೂರು ನಗರದೆಲ್ಲೆಡೆಯಿಂದ ಬೆಳಗ್ಗೆ ಮತ್ತು ಸಂಜೆ ಸಾವಿರಾರು ಸಂಖ್ಯೆಯಲ್ಲಿ ಕುಕ್ಕರಹಳ್ಳಿ ಕೆರೆ ಏರಿಯ ಸುತ್ತಲೂ ವಿಹರಿಸುವವರನ್ನು ಬೀದಿ ನಾಯಿಗಳು ಅಟ್ಟಾಡಿಸುತ್ತಿದ್ದು, ಕಲ್ಲು ಅಥವಾ ದೊಣ್ಣೆ ಇಲ್ಲದಿದ್ದರೆ ಕಚ್ಚುವುದಂತೂ ಗ್ಯಾರಂಟಿಯಾಗಿದೆ. ಬೀದಿ ನಾಯಿಗಳ ಉಪಟಳದಿಂದ ನೆಮ್ಮದಿಯಿಂದ ಒಂದಷ್ಟು ಸಮಯ ಕಳೆಯುವುದಕ್ಕೂ ತೊಂದರೆಯಾಗುತ್ತಿದೆ ಎಂದು ವಾಯು ವಿಹಾರಿಗಳು ಶಪಿಸಿದ್ದಾರೆ.

ಮೈಸೂರು ನಗರಪಾಲಿಕೆ ಬೀದಿ ನಾಯಿಗಳನ್ನು ನಿಯಂತ್ರಿಸುವಲ್ಲಿ ಸಂಪೂರ್ಣ ವಿಫಲವಾಗಿದೆ. ಎಲ್ಲೆಂದರಲ್ಲಿ ಮಕ್ಕಳು, ಮಹಿಳೆಯರು, ವಯೋವೃದ್ಧರ ಮೇಲೆ ಬೀದಿ ನಾಯಿಗಳು ದಾಳಿ ಮಾಡುತ್ತಿವೆ. ಪ್ರತಿನಿತ್ಯ ಒಂದಲ್ಲಾ ಒಂದು ಕಡೆ ಬೀದಿ ನಾಯಿಗಳಿಂದ ತೊಂದರೆಯಾಗುತ್ತಿದ್ದರೂ ಯಾವುದೇ ಕ್ರಮ ಕೈಗೊಳ್ಳದ ಪಾಲಿಕೆ ಅಧಿಕಾರಿ–ಸಿಬ್ಬಂದಿ ನಿರುಪಯುಕ್ತವಾಗಿದ್ದಾರೆ ಎಂದು ಕಿಡಿಕಾರಿದ್ದಾರೆ.




ಕುಕ್ಕರಹಳ್ಳಿ ಕೆರೆ ಏರಿಯಲ್ಲಿ ಬೀದಿನಾಯಿಗಳ ಹಿಂಡನ್ನು ಕಾಣಬಹುದು.

ಪ್ರಕೃತಿ ಮಡಿಲಿನ ನಡುವೆ ಒಂದಷ್ಟು ಸಮಯ ವಾಕಿಂಗ್ ಮಾಡೋಣವೆಂದು ಕುಕ್ಕರಹಳ್ಳಿ ಕೆರೆ ಬಳಿ ಬಂದರೆ ಇಲ್ಲಿಯೂ ಬೀದಿನಾಯಿಗಳ ಕಾಟ. ಮೈಸೂರಿಗರ ನೆಮ್ಮದಿಯನ್ನೇ ಕಿತ್ತುಕೊಂಡಿರುವ ಬೀದಿ ನಾಯಿಗಳಿಗೆ ಕಡಿವಾಣ ಹಾಕದಿದ್ದರೆ ದೊಡ್ಡ ಮಟ್ಟದ ಅನಾಹುತಗಳು ಸಂಭವಿಸುತ್ತವೆ ಎಂದು ಎಚ್ಚರಿಸಿದ್ದಾರೆ.

ಬೆಂಗಳೂರಲ್ಲಿ ಯುವಕನ ಮೇಲೆ ಆಸಿಡ್ ದಾಳಿ: ದುಷ್ಕರ್ಮಿಗಳು ಪರಾರಿ

ಬೆಂಗಳೂರು: ರಾಜ್ಯ ರಾಜಧಾನಿ ಬೆಂಗಳೂರಿನಲ್ಲಿ ಯುವನಕನೊಬ್ಬನ ಮೇಲೆ ಆಸಿಡ್ ದಾಳಿ ನಡೆದಿದೆ. ಈ ಘಟನೆ ಕಾಮಾಕ್ಷಿಪಾಳ್ಯ ಠಾಣಾ ವ್ಯಾಪ್ತಿಯಲ್ಲಿ ವರದಿಯಾಗಿದೆ. ಸೆ.21ರಂದು ಮಧ್ಯಾಹ್ನ 3 ಗಂಟೆ ಸುಮಾರಿಗೆ ನಾಗೇಶ್ ಕೊಂಡ ಎಂಬ ಯುವಕನ ಮೇಲೆ ದುಷ್ಕರ್ಮಿಗಳು ಆಸಿಡ್ ದಾಳಿ ನಡೆಸಿ ಪರಾರಿಯಾಗಿದ್ದಾರೆ. ಘಟನಾ ಸ್ಥಳಕ್ಕೆ ಕಾಮಾಕ್ಷಿಪಾಳ್ಯ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಸದ್ಯ ಗಾಯಾಳು ಯುವಕನಿಗೆ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗುತ್ತಿದೆ ಎಂದು ತಿಳಿದುಬಂದಿದೆ. ಈ ನಡುವೆ ಪ್ರಕರಣ ದಾಖಲಿಸಿ ಕೊಂಡಿರುವ ಪೊಲೀಸರು, ಗಾಯಾಳು ಹೇಳಿಕೆ ದಾಖಲಿಸಿಕೊಂಡು ತನಿಖೆ ಆರಂಭಿಸಿದ್ದಾರೆ. ಇದು ಕಾಮಾಕ್ಷಿಪಾಳ್ಯ ಠಾಣಾ ವ್ಯಾಪ್ತಿಯಲ್ಲಿ ನಡೆದಿ ರುವ ಎರಡು ದಾಳಿಯಾಗಿದೆ. ಈ ಹಿಂದೆ ನಡೆದಿದ್ದ ಆಸಿಡ್ ದಾಳಿ ಇಡೀ ಬೆಂಗಳೂರನ್ನು ಬೆಚ್ಚಿ ಬೀಳಿಸಿತ್ತು. 2022ರಲ್ಲಿ ಹಾಡಹಗಲೇ ಯುವತಿ ಮೇಲೆ ಆಸಿಡ್ ದಾಳಿ ನಡೆದಿತ್ತು. ಆರೋಪಿ ನಾಗ ಯುವತಿ ಮೇಲೆ ಆಸಿಡ್ ಎರಚಿ ಪರಾರಿ ಯಾಗಿದ್ದ. ಯುವತಿ ಮೇಲಿನ ಈ ಪ್ರಕರಣ ರಾಜ್ಯಾದ್ಯಂತ ಭಾರಿ ಚರ್ಚೆ ಆಗಿತ್ತು. ಆರೋಪಿಯನ್ನು ಬಂಧಿಸುವಲ್ಲಿ ಕಾಮಾಕ್ಷಿಪಾಳ್ಯ ಪೊಲೀಸರು ಯಶಸ್ವಿಯಾಗಿದ್ದರು. ಇದೇ ಇದೇ ಠಾಣಾ ವ್ಯಾಪ್ತಿಯಲ್ಲಿ ಮತ್ತೊಂದು ಆಸಿಡ್ ದಾಳಿ ನಡೆದಿರುವುದು ಜನರು ಮತ್ತಷ್ಟು ಭೀತಿಗೊಳಗಾಗುವಂತೆ ಮಾಡಿದೆ.



ಅ.2, ಸಾಮೂಹಿಕ ಪಿತೃತರ್ಪಣ

ಮೈಸೂರು, ಸೆ. 23– ಮೈಸೂರಿನ ಬ್ರಾಹ್ಮಣ ಧರ್ಮ ಸಹಾಯ ಸಭಾ ವತಿಯಿಂದ ಅ.2ರಂದು ಬೆಳಗ್ಗೆ 10.30 ಗಂಟೆಗೆ ಎಂ.ಜಿ. ರಸ್ತೆಯಲ್ಲಿರುವ ವೈಕುಂಠ ಭವನದಲ್ಲಿ ತ್ರಿಮತಸ್ಥ ಬ್ರಾಹ್ಮಣರಿಗೆ ಮಾತ್ರ ಸಾಮೂಹಿಕ ವೈಕುಂಠ ಪಿತೃತರ್ಪವನ್ನು ಹಮ್ಮಿಕೊಳ್ಳಲಾಗಿದೆ. ಅವಶ್ಯಕತೆ ಇರುವ ತ್ರಿಮತಸ್ಥ ಬ್ರಾಹ್ಮಣರು ಸೆ.25ರೊಳಗೆ ತ್ಯಾಗ ರಾಜ ರಸ್ತೆಯಲ್ಲಿರುವ ಕಲ್ಯಾಣ ಭವನದಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳತಕ್ಕದ್ದು. ಹೆಚ್ಚಿನ ಮಾಹಿತಿಗೆ ಮೊ. 8496070311 ಸಂಪರ್ಕಿಸಬಹುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಮಿತ್ರ ಮಂಗಳವಾರ 24 ಸೆಪ್ಟೆಂಬರ್ 2024



ಇತಿಹಾಸವನ್ನು ಕರಾರುವಕ್ಕಾಗಿ ತಿಳಿಸುವ ವಿಶೇಷ ಮಾಧ್ಯಮವೇ ಕಲೆ

• ರಾಜ್ಯಮಟ್ಟದ ಶಿಲ್ಪಕಲಾ ಶಿಬಿರಕ್ಕೆ ಚಾಲನೆ • ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅಭಿಮತ

ಮೈಸೂರು, ಸೆ.23(ಜಿಎ)–ಇತಿಹಾಸವನ್ನು ಕರಾರುವಕ್ಕಾಗಿ ಜನತೆಗೆ ತಿಳಿಸುವ ವಿಶೇಷ ಮಾಧ್ಯಮವೇ ಕಲೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ತಿಳಿಸಿದರು.

ಮೈಸೂರು ದಸರಾ ಮಹೋತ್ಸವದ ಅಂಗವಾಗಿ ನಗರದ ಶ್ರೀ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜಿನ ಆವರಣದಲ್ಲಿ ಲಲಿತ ಕಲೆ ಮತ್ತು ಕರಕುಶಲ ಕಲೆ ಉಪ ಸಮಿತಿ ಹಾಗೂ ಶಿಲ್ಪಕಲಾ ಶಿಬಿರ ಅಕಾಡೆಮಿಯ ಸಹಯೋಗದಲ್ಲಿ ಆಯೋಜಿಸಿರುವ ರಾಜ್ಯ ಮಟ್ಟದ ಶಿಲ್ಪಕಲಾ ಶಿಬಿರವನ್ನು ಉದ್ಘಾಟಿಸಿ, ಅವರು ಮಾತನಾಡಿದರು.

ನಾಡಿನ ಇತಿಹಾಸವನ್ನು ಕಲೆಗಳ ಮೂಲಕ ಚಿತ್ರಿಸಿ ಜನತೆಗೆ ತಿಳಿಸುವ ಕಾರ್ಯಗಳು ನಡೆದು ಬಂದಿವೆ. ಬೇಲೂರು, ಹಳೇಬೀಡು, ಸೋಮನಾಥಪುರ ದೇವಾಲಯಗಳಲ್ಲಿ ಶಿಲ್ಪಕಲೆಗಳು ಚರಿತ್ರೆಯ ಮಹತ್ವವನ್ನು ಸಾರಲಿವೆ. ಒಂದೊಂದು ಶಿಲ್ಪ ಕಲೆಯು ಒಂದೊಂದು ಕಥೆಯನ್ನು ಹೇಳಲಿವೆ. ಆದ್ದರಿಂದ ಕಲೆಯ ಮೂಲಕ ದೇಶದ ಇತಿಹಾಸ, ಪರಂಪರೆ, ಸಂಸ್ಕೃತಿ ಹಾಗೂ ಚರಿತ್ರೆಯನ್ನು ಮನಮುಟ್ಟಿಸುವ ಕೆಲಸವಾಗಬೇಕು ಎಂದರು.

ಇತಿಹಾಸವನ್ನು ನೆನಪಿಸುವ ಅಮೋಘವಾದ ಅಧ್ಯಯನ ದೃಶ್ಯಕಲೆಯಲ್ಲಿದೆ. ಹೀಗಾಗಿ ಕಲಾವಿದರು ಚರಿತ್ರೆಯನ್ನು ಸರಿಯಾಗಿ ತಿಳಿದಿರಬೇಕು. ಶಿಲಾಯುಗದಿಂದ ಸಿಂಧು, ಹರಪ್ಪ–ಮೊಹೆಂಜೋದಾರೋ ನಾಗರಿಕತೆಯ ಜೀವನ ಕ್ರಮ, ಮೌಲ್ಯಗಳು, ಬದುಕಿನ ವಿಧಾನಗಳನ್ನು ಕಲಾವಿದರು ಗ್ರಹಿಸಿರಬೇಕು. ಈ ನಾಗರಿ ಕತೆಯಲ್ಲಿ ಧರ್ಮದ ಪರಿಕಲ್ಪನೆ ಇರಲಿಲ್ಲ. ಪ್ರಕೃತಿಯನ್ನು ಪೂಜಿಸುತ್ತಿದ್ದರು ಎಂದು ಡಾ.ಮಹದೇವಪ್ಪ ತಿಳಿಸಿದರು.



ಮೈಸೂರಿನ ಶ್ರೀ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜಿನ ಆವರಣದಲ್ಲಿ ಆಯೋಜಿಸಿರುವ ರಾಜ್ಯ ಮಟ್ಟದ ಶಿಲ್ಪಕಲಾ ಶಿಬಿರವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಉದ್ಘಾಟಿಸಿದರು.

> ❝ ದಸರಾ ಕಾರ್ಯಕ್ರಮದ ಅತಿಥಿಗಳಿಗೆ ಆನೆಗಳ, ಜಂಬೂಸವಾರಿಯ ಕುರಿತದ ಉಡುಗೊರೆಗಳನ್ನು ನೀಡಲಾಗುತ್ತಿದೆ. ಇದರ ಬದಲು ಕಾವಾ ಕಾಲೇಜಿನ ಕಲಾವಿದರು ಬಿಡಿಸಿರುವ ಚಿತ್ರಗಳನ್ನು ಉಡುಗೊರೆಯಾಗಿ ನೀಡಬೇಕು. ಇದರಿಂದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡಿದಂತಾಗುತ್ತದೆ. **–ತನ್ವೀರ್ ಸೇಠ್, ಶಾಸಕ**

ಸುಳ್ಳಿನ ಚರಿತ್ರೆಯನ್ನು ಜನತೆಗೆ ತಿಳಿಸಿದರೇ ಸಮಾಜ ಹಾದಿ ತಪ್ಪಲಿದೆ. ಆದ್ದರಿಂದ ಕಲಾವಿದರು ಚರಿತ್ರೆಯನ್ನು ಸರಿಯಾಗಿ ಅರ್ಥ ಮಾಡಿಕೊಂಡು ಆಸಕ್ತಿ ವಹಿಸಿ ಅಧ್ಯಯನ ನಡೆಸಬೇಕು. ನೈಜ ಇತಿಹಾಸವನ್ನು ಅರಿತು ದೇಶದ ನಾಗರಿಕತೆ, ಜನ ಜೀವನ, ಸಂಸ್ಕೃತಿ, ಪರಂಪರೆ ಶ್ರೀಮಂತಿಕೆಯನ್ನು ಮುಂದಿನ ಪೀಳಿಗೆಗೆ ಜೊತೆಗೆ ಪ್ರಪಂಚಕ್ಕೆ ತಲುಪಿಸುವ ಕೆಲಸ ಮಾಡಬೇಕು. ಈ ಅಧ್ಯಯನಕ್ಕೆ ವಿಶೇಷ ಆಲೋಚನೆ ಇರಬೇಕು ಎಂದರು.

ಸಂಸ್ಕೃತಿ ಎಂದರೆ ಜನ–ಜೀವನ ಕ್ರಮ, ಮೌಲ್ಯಗಳು, ಜೀವನೋಪಾಯ ಮಾರ್ಗಗಳು. ಆದರೆ, ಇಂದು ಧರ್ಮವನ್ನು ಸಂಸ್ಕೃತಿ ಎಂದು ಬಿಂಬಿಸಲಾಗುತ್ತಿದೆ. ಇದು ತಪ್ಪು, ಸಂಸ್ಕೃತಿಯ ತಳಹದಿಯ ಮೇಲೆ ಧರ್ಮವಿದೆ. ಶಿಲ್ಪಕಲೆ, ಕರಕುಶಲ ಕಲೆ, ಲಲಿತ ಕಲೆಗಳಲ್ಲಿ ಸಂಸ್ಕೃತಿಯನ್ನು ಬಿಂಬಿಸುವ ಕರಾರುವಾಕ್ ಮಾಧ್ಯಮವಾಗಿವೆ ಎಂದು ತಿಳಿಸಿದರು.

ಶಾಸಕ ತನ್ವೀರ್ ಸೇಠ್ ಮಾತನಾಡಿ, ಲಲಿತ ಕಲೆ ಮತ್ತು ಕರಕುಶಲಕ್ಕೆ ಮೈಸೂರಿನಲ್ಲಿ ವಿಶೇಷ ಹಿನ್ನೆಲೆಯಿದೆ. ಕರಕುಶಲ, ಲಲಿತ ಕಲೆಯ ಅನೇಕ ಬಗೆ ಕಲಾ ಪ್ರಕಾರಗಳು ಸಾಂಸ್ಕೃತಿಕ ನಗರಿಯ ಸಂಸ್ಕೃತಿಯಲ್ಲಿ ಸೇರಿಕೊಂಡಿದೆ. ರಾಜ್ಯದಲ್ಲಿಯೂ ಕಲಾ ಪ್ರಕಾರಗಳ ಪರಂಪರೆ ಇದೆ. ಈ ಎಲ್ಲ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ನಾಡಿನಲ್ಲಿ ಕರಕುಶಲ ವಿಶ್ವವಿದ್ಯಾನಿಲಯ ನಿರ್ಮಿಸಬೇಕು. ಶ್ರೀ ಚಾಮರಾಜೇಂದ್ರ ಸರ್ಕಾರಿ ದೃಶ್ಯಕಲಾ ಕಾಲೇಜನ್ನು ಕರಕುಶಲ ವಿಶ್ವವಿದ್ಯಾನಿಲಯದ ದರ್ಜೆಗೇರಿಸಬೇಕು. ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಸರ್ಕಾರದ ಗಮನಕ್ಕೆ ತರಬೇಕು ಎಂದು ಮನವಿ ಮಾಡಿದರು.

ಇತಿಹಾಸವನ್ನು ಅರಿತವರು ಮಾತ್ರ ಇತಿಹಾಸವನ್ನು ಸೃಷ್ಟಿಸುವರು ಎಂಬ ಡಾ.ಬಿ.ಆರ್.ಅಂಬೇಡ್ಕರ್ ಅವರ ಪರಿಕಲ್ಪನೆಯಂತೆ ಕಲಾವಿದರು ಕುಂಚದಲ್ಲಿ ಅರಳಿದ ಕಲೆಗಳು ತಾವಾಗಿಯೇ ಮಾತನಾಡಬೇಕು ಎಂದರು.

ಕಾರ್ಯಕ್ರಮದಲ್ಲಿ ಕಾವಾ ಕಾಲೇಜಿನ ಡೀನ್ ಎ.ದೇವರಾಜು, ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ, ಜಿಲ್ಲಾ ಪಂಚಾಯಿತಿ ಸಿಇಓ ಕೆ.ಎಂ.ಗಾಯತ್ರಿ, ಕರ್ನಾಟಕ ಶಿಲ್ಪಕಲಾ ಅಕಾಡೆಮಿಯ ಅಧ್ಯಕ್ಷ ಎಂ.ಸಿ.ರಮೇಶ್, ಶಿಬಿರದ ಕಾರ್ಯಾಧ್ಯಕ್ಷ ಬಿಂದುರಾಯ್ ಬಿರಾದಾರ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಅರ್ಕಾವತಿ ರೀ–ಡೂ ಸಂಬಂಧ ಪರಿಶೀಲಿಸಿ ಮುಂದಿನ ಕ್ರಮ

• ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟನೆ • ರಾಜ್ಯಪಾಲರ 'ಸಹಿ' ತಕರಾರಿಗೆ ಆಕ್ಷೇಪ

ಬೆಂಗಳೂರು, ಸೆ23.(ಕೆಎಂಶಿ)–ಕ್ಷುಲ್ಲಕ ವಿಚಾರಗಳ ಬಗ್ಗೆ ರಾಜ್ಯಪಾಲರು ಉತ್ತರ ಕೇಳುವುದು ಸರಿಯಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ್ದಾರೆ.



ಸರ್ಕಾರದಿಂದ ರಾಜಭವನಕ್ಕೆ ಕಳುಹಿಸುವ ಪತ್ರಗಳಿಗೆ ಇಂಗ್ಲೀಷ್‌ನಲ್ಲೇ ಸಹಿ ಇರಬೇಕೆಂದು ಆಕ್ಷೇಪ ವ್ಯಕ್ತಪಡಿಸುವುದು ಮತ್ತು ಉತ್ತರ ಕೇಳುವುದು ಎಷ್ಟರ ಮಟ್ಟಿಗೆ ಸರಿ ಎಂದರು.

ಕನ್ನಡದಲ್ಲಿರುವ ಪತ್ರಗಳಿಗೆ ಕನ್ನಡದಲ್ಲೂ, ಇಂಗ್ಲೀಷ್‌ನಲ್ಲಿರುವ ಪತ್ರಗಳಿಗೆ ಇಂಗ್ಲೀಷ್‌ನಲ್ಲಿ ಸಹಿ ಮಾಡುವುದು ತಪ್ಪಲ್ಲ ಎಂದು ಸಮರ್ಥಿಸಿಕೊಂಡಿದ್ದಾರೆ.

ಸಮಾರಂಭವೊಂದರ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯಪಾಲರು ಅರ್ಕಾವತಿ ರೀ–ಡೂ ಪ್ರಕರಣಕ್ಕೆ ಸಂಬಂಧಿಸಿದಂತೆ ಬರೆದಿರುವ ಪತ್ರದ ಬಗ್ಗೆ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದರು. ಬಿಜೆಪಿಯವರು ಹಿಂದೆ ನಾಲ್ಕು ವರ್ಷ ಅಧಿಕಾರದಲ್ಲಿದ್ದಾಗ ಈ ವಿಷಯವನ್ನು ವಿಧಾನಸಭೆಯಲ್ಲಿ ಏಕೆ ಪ್ರಸ್ತಾಪಿಸಲಿಲ್ಲ. ರೀ–ಡೂ ವಿಷಯಕ್ಕೆ ಸಂಬಂಧಿಸಿದಂತೆ ಬಿಜೆಪಿ ಆಡಳಿತದಲ್ಲಿ ಸಚಿವರಾಗಿದ್ದ ಸಿ.ಟಿ.ರವಿ ಅಂದು ಏನೂ ಕ್ರಮಕೈಗೊಳ್ಳದೆ, ಈಗ ರಾಜ್ಯಪಾಲರಿಗೆ ದೂರು ಕೊಡುವ ಉದ್ದೇಶವೇನು ಎಂದು ಪ್ರಶ್ನಿಸಿದರು.

ಜಿಲ್ಲಾ ಉಸ್ತುವಾರಿ ಸಚಿವರಿಂದ ರೈತ ದಸರಾ ಪೋಸ್ಟರ್ ಬಿಡುಗಡೆ



ರೈತ ದಸರಾ ಪೋಸ್ಟರ್ ಅನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಬಿಡುಗಡೆ ಮಾಡಿದರು.

ಮೈಸೂರು,ಸೆ.23(ಎಂಟಿವೈ)– ಮೈಸೂರಿನ ಜೆ.ಕೆ.ಮೈದಾನದಲ್ಲಿ ಅ.5ರಿಂದ 7ರವರೆಗೆ ರೈತ ದಸರಾ ಜರುಗಲಿದ್ದು, ಈ ಸಂಬಂಧ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಜಿ.ಪಂ ಸಭಾಂಗಣದಲ್ಲಿ ರೈತ ದಸರಾ ಮಹೋತ್ಸವದ ಪೋಸ್ಟರ್ ಬಿಡುಗಡೆ ಮಾಡಿದರು. ಅ.5ರಂದು ಬೆಳಗ್ಗೆ 9.30ಕ್ಕೆ ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯದ ಬಳಿ ರೈತ ದಸರಾದ ಮೆರವಣಿಗೆಗೆ ಚಾಲನೆ ದೊರೆಯಲಿದೆ. 11 ಗಂಟೆಗೆ ಜೆ.ಕೆ.ಮೈದಾನದಲ್ಲಿ ಮತ್ಸ್ಯಮೇಳ, 11.15ಕ್ಕೆ ಮೈಸೂರು ಮೆಡಿಕಲ್ ಕಾಲೇಜಿನ ಅಮೃತೋತ್ಸವ ಭವನದಲ್ಲಿ ರೈತ ದಸರಾ ಕಾರ್ಯಕ್ರಮ ಉದ್ಘಾಟನೆಗೊಳ್ಳಲಿದೆ. 12.30ಕ್ಕೆ ರೈತರೊಂದಿಗೆ ಸಂವಾದ, ಮಧ್ಯಾಹ್ನ 3 ಗಂಟೆಗೆ ಹಾಸ್ಯ ಕಲಾವಿದ ಗಂಗಾವತಿ ಪ್ರಾಣೇಶ್ ಅವರಿಂದ ಹಾಸ್ಯ ಕಾರ್ಯಕ್ರಮ ಜರುಗಲಿದೆ. ಅ.6ರಂದು ಬೆಳಗ್ಗೆ 10ಕ್ಕೆ ಸಾಕುಪ್ರಾಣಿಗಳ ಪ್ರದರ್ಶನ, ಸ್ಪರ್ಧೆ ಜರುಗಲಿದೆ. ಅ.7ರಂದು ಬೆಳಗ್ಗೆ 6.30ಕ್ಕೆ ರಾಜ್ಯಮಟ್ಟದ ಹಾಲು ಕರೆಯುವ ಸ್ಪರ್ಧೆ ಜರುಗಲಿದೆ. ಅಂದು ಸಂಜೆ 5.30ಕ್ಕೆ ಹಾಲು ಕರೆಯುವ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಣಾ ಕಾರ್ಯಕ್ರಮ ಜರುಗಲಿದೆ. ಈ ವೇಳೆ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮುಡಾ ಅಧ್ಯಕ್ಷ ಕೆ.ಮರಿಗೌಡ, ಡಿಸಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಜಿಪಂ ಸಿಇಓ ಕೆ.ಎಂ.ಗಾಯತ್ರಿ, ಎಸ್ಪಿ ವಿಷ್ಣುವರ್ಧನ್, ಡಿಸಿಎಫ್ ಡಾ.ಕೆ.ಎನ್. ಬಸವರಾಜು, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಂಗೇಗೌಡ, ವಾರ್ತಾ–ಸಾರ್ವಜನಿಕ ಸಂಪರ್ಕ ಇಲಾಖೆ ಸಹಾಯಕ ನಿರ್ದೇಶಕ ಟಿ.ಕೆ.ಹರೀಶ್, ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಕೆಆರ್‌ಎಸ್ ಬೃಂದಾವನದಲ್ಲಿ ಸಾವಿರಾರು ಪ್ರವಾಸಿಗರ ತಪಾಸಣೆಗೆ ಕೇವಲ ಓರ್ವ ಮಹಿಳಾ ಸಿಬ್ಬಂದಿ!

6 ಸಿಬ್ಬಂದಿ ವರ್ಗಾವಣೆ ಮಾಡಿ ಆ ಸ್ಥಳಕ್ಕೆ ಬೇರೆಯವರನ್ನು ನಿಯೋಜಿಸದೆ ಹಿರಿಯ ಅಧಿಕಾರಿಗಳು ಮಾಡಿರುವ ಎಡವಟ್ಟು

- ಕೆಲಸದ ಒತ್ತಡದಿಂದ ಬಳಲಿ ಬೆಂಡಾಗುತ್ತಿರುವ ಮಹಿಳಾ ಸಿಬ್ಬಂದಿ
- ಕೆಆರ್‌ಎಸ್ ಅಣೆಕಟ್ಟೆ ಭದ್ರತೆ ಬಗ್ಗೆಯೂ ಆತಂಕ

ಶ್ರೀರಂಗಪಟ್ಟಣ, ಸೆ.23(ವಿನಯ್ ಕಾರೇಕುರ)-ಪ್ರತಿದಿನ ಸಾವಿರಾರು ಪ್ರವಾಸಿಗರು ಭೇಟಿ ನೀಡುವ ಪ್ರಸಿದ್ಧ ಪ್ರವಾಸಿತಾಣ ಕೆಆರ್‌ಎಸ್ ಬೃಂದಾವನದಲ್ಲಿ ಮಹಿಳೆಯರ ತಪಾಸಣೆಗೆ ಕೇವಲ ಓರ್ವ ಸಿಬ್ಬಂದಿಯನ್ನು ಮಾತ್ರ ನಿಯೋಜಿಸಲಾಗಿದ್ದು, ಅಣೆಕಟ್ಟೆ ಭದ್ರತೆ ಬಗ್ಗೆ ಆತಂಕಪಡುವಂತಾಗಿದೆ.

ಕೆಆರ್‌ಎಸ್ ಅಣೆಕಟ್ಟೆಗೆ ದುಷ್ಕರ್ಮಿಗಳಿಂದ ಅಪಾಯವಿದೆ ಎಂಬ ಕಾರಣದಿಂದಾಗಿ ಇದರ ಭದ್ರತೆ ಜವಾಬ್ದಾರಿಯನ್ನು ಕೆಎಸ್‌ಐಎಸ್‌ಎಫ್(ಕರ್ನಾಟಕ ರಾಜ್ಯ ಕೈಗಾರಿಕಾ ಭದ್ರತಾ ಪಡೆ) ಘಟಕಕ್ಕೆ 2016ರಿಂದ ವಹಿಸಲಾಗಿದೆ. ಪ್ರವಾಸಿಗರು ಟಿಕೆಟ್ ಪಡೆದು ಗಾರ್ಡನ್ ಪ್ರವೇಶಿಸಲು ಎರಡು ಮುಖ್ಯ ದ್ವಾರಗಳಿದ್ದು, ಈ ಮುಖ್ಯದ್ವಾರಗಳಲ್ಲಿ ಹಗಲು ಪಾಳಿಯಲ್ಲಿ ಕರ್ತವ್ಯ ನಿರ್ವಯಿಸಲು ಕನಿಷ್ಠ 10 ಮಹಿಳಾ ಸಿಬ್ಬಂದಿಗಳ ಅವಶ್ಯಕತೆ ಇರುವುದು ಅತೀ ಮುಖ್ಯವಾಗಿದೆ.

ಕಳೆದ ಸೆ.20ರಂದು ಕೆಎಸ್‌ಐಎಸ್‌ಎಫ್ ಎರಡನೇ ಬೆಟಾಲಿಯನ್ ಕಮಾಂಡೆಂಟ್‌ರವರು ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ 7 ಮಹಿಳಾ ಸಿಬ್ಬಂದಿ ಪೈಕಿ 6 ಮಂದಿಯನ್ನು ಮೈಸೂರು ಕೇಂದ್ರ ಕಾರಾಗೃಹ ಹಾಗೂ ಮೈಸೂರು ವಿಮಾನ ನಿಲ್ದಾಣಕ್ಕೆ ವರ್ಗಾವಣೆ ಮಾಡಿದ್ದಾರೆ.

ಆದರೆ ಕೆಆರ್‌ಎಸ್ ಭದ್ರತಾ ಘಟಕಕ್ಕೆ ಯಾವುದೇ ಮಹಿಳಾ ಸಿಬ್ಬಂದಿಗಳನ್ನು ನಿಯೋಜಿಸದ ಕಾರಣ ಕೆಆರ್‌ಎಸ್ ಭದ್ರತೆ ಕರ್ತವ್ಯವನ್ನು ಕೇವಲ ಓರ್ವ ಮಹಿಳಾ ಸಿಬ್ಬಂದಿ ಮಾತ್ರ ನಿರ್ವಹಿಸಬೇಕಾದ ದುಸ್ಥಿತಿ ನಿರ್ಮಾಣವಾಗಿದೆ. ಬೆಳಗ್ಗೆ 8 ರಿಂದ ರಾತ್ರಿ 9ರವರೆಗೆ ಈ ಮಹಿಳಾ ಸಿಬ್ಬಂದಿ ಮಾತ್ರ ಸಾವಿರಾರು ಮಹಿಳೆಯರನ್ನು ಪ್ರವೇಶದ್ವಾರದಲ್ಲಿ ತಪಾಸಣೆ ಮಾಡುತ್ತಿದ್ದಾರೆ. ಅವರಿಗೆ ಬದಲಿ ಸಿಬ್ಬಂದಿಯನ್ನು ಸಹ ನಿಯೋಜನೆ ಮಾಡಿಲ್ಲ. ಈ ಮಹಿಳಾ ಸಿಬ್ಬಂದಿ ಶೌಚಾಲಯ, ಊಟ ಇತರೆ ಕೆಲಸಕ್ಕೂ ಹೋಗಲು ಸಾಧ್ಯವಾಗದೆ ಒತ್ತಡದಲ್ಲಿ ಬಳಲಿ ಬೆಂಡಾಗುತ್ತಿದ್ದರೆ, ಕೇವಲ ಓರ್ವ ಸಿಬ್ಬಂದಿ ಮಾತ್ರ ಸಾವಿರಾರು ಮಂದಿಯನ್ನು ತಪಾಸಣೆ ನಡೆಸಲು ಹೇಗೆ ಸಾಧ್ಯ ಎಂಬ ಪ್ರಶ್ನೆ ಉದ್ಭವಿಸಿದೆ. ಒಬ್ಬರು ಮಾತ್ರ ತಪಾಸಣೆ ನಡೆಸುವುದರಿಂದ ಪ್ರವೇಶದ್ವಾರದಲ್ಲಿ ಅನವಶ್ಯಕವಾಗಿ ಮಹಿಳೆಯರು ಸಾಲುಗಟ್ಟಿ ನಿಲ್ಲಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಅಲ್ಲದೆ ಒತ್ತಡದಿಂದಾಗಿ ಈ ಸಿಬ್ಬಂದಿ ಸಮರ್ಪಕವಾಗಿ ತಪಾಸಣಾ ಕಾರ್ಯವನ್ನು ನಡೆಸುವುದು ದುಸ್ತರವಾಗಿದೆ. ಇಂತಹ ಪರಿಸ್ಥಿತಿಯಲ್ಲೂ ದುರುಪಯೋಗಪಡಿಸಿಕೊಂಡು ದುಷ್ಕರ್ಮಿಗಳು ಮಹಿಳೆಯರನ್ನು ಬಳಸಿಕೊಂಡು ಕೆಆರ್‌ಎಸ್ ಪ್ರವೇಶಿಸಿದರೆ ಗತಿ ಏನು ಎಂಬ ಆತಂಕವೂ ಎಲ್ಲರನ್ನು ಕಾಡುತ್ತಿದೆ.

ವಿವೇಚನಾರಹಿತವಾಗಿ ಓರ್ವರನ್ನು ಬಿಟ್ಟು ಉಳಿದ ಎಲ್ಲಾ ಮಹಿಳಾ ಸಿಬ್ಬಂದಿಗಳನ್ನು ವರ್ಗಾವಣೆಗೊಳಿಸಿದ್ದರಿಂದ ತೀವ್ರ ಭದ್ರತಾ ಲೋಪ ಉಂಟಾಗಿದೆ ಎಂಬ ಮಾತುಗಳು ಕೇಳಿ ಬಂದಿವೆ. ಎರಡನೇ ಬೆಟಾಲಿಯನ್ ಕಮಾಂಡಂಟ್‌ರವರ ಬೇಜವಾಬ್ದಾರಿತನದಿಂದ ಭದ್ರತಾ ಕರ್ತವ್ಯಕ್ಕೆ ತೀವ್ರ ತೊಂದರೆ ಉಂಟಾಗುತ್ತಿದ್ದು, ಕೆಲವೇ ದಿನಗಳಲ್ಲಿ ಮೈಸೂರು ಹಾಗೂ ಶ್ರೀರಂಗಪಟ್ಟಣ ದಸರಾ ಸಂದರ್ಭದಲ್ಲಿ ಪ್ರತಿದಿನ ಭೇಟಿ ನೀಡುವ ಪ್ರವಾಸಿಗರ ಸಂಖ್ಯೆ ಹೆಚ್ಚಾದಾಗ ಕೇವಲ ಓರ್ವ ಮಹಿಳಾ ಸಿಬ್ಬಂದಿಯಿಂದ ಹೇಗೆ ನಿಭಾಯಿಸಲು ಸಾಧ್ಯ? ಒಂದು ವೇಳೆ ಕರ್ತವ್ಯದಲ್ಲಿರುವ ಏಕೈಕ ಮಹಿಳಾ ಸಿಬ್ಬಂದಿ ರಜೆ ಅಥವಾ ಅನಾರೋಗ್ಯದಿಂದ ಗೈರಾದಾಗ ಮಹಿಳಾ ಪ್ರವಾಸಿಗರನ್ನು ತಪಾಸಣೆ ಮಾಡುವವರು ಯಾರು ಎಂಬುದರ ಬಗ್ಗೆಯೂ ಕೂಡಾ ಹಿರಿಯ ಅಧಿಕಾರಿಗಳು ಚಿಂತಿಸಿದಂತೆ ಕಾಣುತ್ತಿಲ್ಲ. ಪರಿಸ್ಥಿತಿಯ ತೀವ್ರತೆಯನ್ನು ಅರಿತು ಹಿರಿಯ ಅಧಿಕಾರಿಗಳು ಈಗಾಗಲೇ ವರ್ಗಾವಣೆಗೊಂಡಿರುವ ಮಹಿಳಾ ಸಿಬ್ಬಂದಿ ಸ್ಥಳಕ್ಕೆ ಬೇರೆಯವನ್ನು ನಿಯೋಜಿಸುವ ಮೂಲಕ ಅಣೆಕಟ್ಟೆಯ ಭದ್ರತೆ ಬಗ್ಗೆ ಉಂಟಾಗಿರುವ ಆತಂಕವನ್ನು ಹೋಗಲಾಡಿಸಬೇಕಾಗಿದೆ.



ಕೆಆರ್‌ಎಸ್ ಬೃಂದಾವನದ ದ್ವಾರದಲ್ಲಿ ಪ್ರವಾಸಿಗರನ್ನು ತಪಾಸಣೆ ಮಾಡುತ್ತಿರುವ ಮಹಿಳಾ ಪೊಲೀಸ್ ಸಿಬ್ಬಂದಿ

ಮೊಪೆಡ್‌ಗೆ ಸಾರಿಗೆ ಬಸ್ ಡಿಕ್ಕಿ: ಸವಾರನಿಗೆ ಗಾಯ

ಭಾರತೀನಗರ,ಸೆ.23– ಕೆಎಸ್‌ಆರ್‌ಟಿಸಿ ಬಸ್ ಟಿವಿಎಸ್ ಎಕ್ಸೆಲ್ ಮೊಪೆಡ್‌ಗೆ ಡಿಕ್ಕಿ ಹೊಡೆದ ಪರಿಣಾಮ ಸವಾರ ಗಂಭೀರವಾಗಿ ಗಾಯಗೊಂಡಿರುವ ಘಟನೆ ಭಾರತೀನಗರ ಮುಖ್ಯ ರಸ್ತೆಯಲ್ಲಿ ಸೋಮವಾರ ಬೆಳಗ್ಗೆ ಜರುಗಿದೆ.

ಬಿದರಹಳ್ಳಿ ಗ್ರಾಮದ ಪುಟ್ಟಸ್ವಾಮಿ(75) ಭಾರತೀನಗರದ ಹಲಗೂರು ವೃತ್ತದಲ್ಲಿ ಯೂಟರ್ನ್ ಮಾಡುವಾಗ ಮಳವಳ್ಳಿಯಿಂದ ಬೆಂಗಳೂರಿಗೆ ತೆರಳುತ್ತಿದ್ದ ಕೆಎಸ್‌ಆರ್‌ಟಿಸಿ ಬಸ್ ಮೊಪೆಡ್‌ಗೆ ಡಿಕ್ಕಿ ಹೊಡೆದಿದೆ. ಅಪಘಾತದಲ್ಲಿ ಗಾಯಗೊಂಡ ಪುಟ್ಟಸ್ವಾಮಿ ಅವರನ್ನು ಸಾರ್ವಜನಿಕರು ಕೆ.ಎಂ.ದೊಡ್ಡಿ ಸಮುದಾಯ ಆರೋಗ್ಯ ಕೇಂದ್ರಕ್ಕೆ ಚಿಕಿತ್ಸೆಗೆ ದಾಖಲಿಸಿದ್ದಾರೆ. ಹೆಚ್ಚಿನ ಚಿಕಿತ್ಸೆಗಾಗಿ ಜಿಲ್ಲಾಸ್ಪತ್ರೆಗೆ ವೈದ್ಯರು ರವಾನಿಸಿದ್ದಾರೆ. ಕೆ.ಎಂ.ದೊಡ್ಡಿ ಪೊಲೀಸರು ಸ್ಥಳಕ್ಕೆ ಧಾವಿಸಿ ಕೆಎಸ್‌ಆರ್‌ಟಿಸಿ ಬಸ್ಸನ್ನು ವಶಕ್ಕೆ ಪಡೆದಿದ್ದಾರೆ.



ಸಾಲಬಾಧೆ: ರೈತ ನೇಣಿಗೆ ಶರಣು

ಚಿನಕುರಳಿ: ಸಾಲಬಾಧೆ ತಾಳಲಾರದೇ ರೈತನೋರ್ವ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿರುವ ಘಟನೆ ತಾಲೂಕಿನ ಅಂಕೇಗೌಡನಕೊಪ್ಪಲು ಗ್ರಾಮದಲ್ಲಿ ಸೋಮವಾರ ಬೆಳಗ್ಗೆ ನಡೆದಿದೆ.



ಗ್ರಾಮದ ನಿವಾಸಿ ಲೇಟ್ ಪಾಪೇಗೌಡ ಪುತ್ರ ನಾಗರಾಜು(54) ಆತ್ಮಹತ್ಯೆ ಮಾಡಿಕೊಂಡವರು. ಈತ ಬೇಸಾಯಕ್ಕಾಗಿ ಸೊಸೈಟಿ, ಚಿನಕುರಳಿ ಡಿಸಿಸಿ ಬ್ಯಾಂಕ್, ಚಿನ್ನಾಭರಣ ಸಾಲ ಸೇರಿದಂತೆ ಖಾಸಗಿ ಫೈನಾನ್ಸ್ ಕಂಪನಿಗಳಿಂದ 6 ಲಕ್ಷಕ್ಕೂ ಅಧಿಕ ಸಾಲ ಮಾಡಿದ್ದರು ಎನ್ನಲಾಗಿದೆ. ಇದರಿಂದ ಮನನೊಂದು ಸೋಮವಾರ ಬೆಳಗ್ಗೆ ತಮ್ಮ ಜಮೀನಿನಲ್ಲಿ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾನೆ. ಮೃತರ ಪುತ್ರ ಚಂದನ್‌ಕುಮಾರ್ ನೀಡಿದ ದೂರಿನ ಮೇರೆಗೆ ಪಾಂಡವಪುರ ಪ್ರಕರಣದ ದಾಖಲಾಗಿದೆ.



ಕೆ.ಎಚ್.ವೆಂಕಟಪ್ಪಶೆಟ್ಟಿ ನಿಧನ

ಕಿಕ್ಕೇರಿ, ಸೆ.23– ಪಟ್ಟಣದ ಕುರುಹಿನಶೆಟ್ಟಿ ಸಮಾಜದ ಹಿರಿಯ ಮುಖಂಡ ಕೆ.ಎಚ್.ವೆಂಕಟಪ್ಪಶೆಟ್ಟಿ(93) ಭಾನುವಾರ ರಾತ್ರಿ ನಿಧನರಾದರು. ಮೃತರು ಮೂವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಬೆಂಗಳೂರಿನ ಲಯನ್ಸ್ ಸಂಸ್ಥೆ ಮೂಲಕ ಮೃತರ ನೇತ್ರದಾನ ಮಾಡ ಲಾಯಿತು. ಅಂತ್ಯಕ್ರಿಯೆ ಸೋಮವಾರ ಸ್ವಗ್ರಾಮದ ರುದ್ರಭೂಮಿಯಲ್ಲಿ ನಡೆಯಿತು.

ಬೆಂಗಳೂರಿಗೆ ಕುಡಿಯುವ ನೀರು

ಕಾವೇರಿ 5ನೇ ಹಂತದ ಯೋಜನೆಗೆ ದಸರಾ ವೇಳೆ ಚಾಲನೆ

ಹಲಗೂರು/ಮಂಡ್ಯ,ಸೆ.23– ಬೆಂಗಳೂರು ನಗರದ ಮೂಲೆ ಮೂಲೆಗೂ ಕಾವೇರಿ ನೀರನ್ನು ತಲುಪಿಸುವ ಮಹತ್ವಾಕಾಂಕ್ಷೆಯ ಕಾವೇರಿ ಐದನೇ ಹಂತದ ಯೋಜನೆಗೆ ದಸರಾ ಸಮಯದಲ್ಲಿ ಚಾಲನೆ ನೀಡಲಾಗುವುದು ಎಂದು ಬೆಂಗಳೂರು ನಗರಾಭಿವೃದ್ಧಿ ಸಚಿವರೂ ಆದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಸೋಮವಾರ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ಹಲಗೂರು ಬಳಿ ಇರುವ ತೊರೆಕಾಡನಹಳ್ಳಿಯ ಬೆಂಗಳೂರು ನೀರು ಸರಬರಾಜು ಮಂಡಳಿಯ ಬೃಹತ್ ನೀರು ಶುದ್ಧೀಕರಣ ಘಟಕಕ್ಕೆ ಭೇಟಿ ನೀಡಿ, ಕಾವೇರಿ 5ನೇ ಹಂತದ ನೀರು ಸರಬರಾಜು ಯೋಜನೆಯನ್ನು ವೀಕ್ಷಣೆ ಮಾಡಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದರು.

ಕಾವೇರಿ 5ನೇ ಹಂತದ ನೀರು ಸರಬರಾಜು ಯೋಜನೆ ಭಾರತ ದೇಶದ ಅತಿದೊಡ್ಡ ನೀರು ಸರಬರಾಜು ಯೋಜನೆಗಳಲ್ಲಿ ಒಂದಾಗಿದೆ. ಒಂದೇ ಹಂತದಲ್ಲಿ 50 ಲಕ್ಷ ಜನರಿಗೆ ನೀರು ಒದಗಿಸುವ ಬೃಹತ್ ಯೋಜನೆ ಇದಾಗಿದ್ದು, ದೇಶದ ಮೆಟ್ರೋ ಸಿಟಿಗಳನ್ನು ಹೊರತುಪಡಿಸಿ ಬೇರೆ ಯಾವುದೇ ನಗರಗಳಲ್ಲೂ ಇಷ್ಟು ದೊಡ್ಡ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿಲ್ಲ. ಭಾರತದಲ್ಲೆ ಅತಿದೊಡ್ಡ 775 ಎಂ.ಎಲ್.ಡಿ ಸಾಮರ್ಥ್ಯದ ಅತ್ಯಾಧುನಿಕ ವಾಟರ್ ಟ್ರೀಟ್‌ಮೆಂಟ್ ಪ್ಲಾಂಟ್ ನಿರ್ಮಾಣ ಈ ಯೋಜನೆಯ ಪ್ರಮುಖ ಅಂಶಗಳಲ್ಲಿ ಒಂದಾಗಿದೆ. ಅತ್ಯಾಧುನಿಕ ಪ್ರವಾಹ ನಿಯಂತ್ರಣ ವ್ಯವಸ್ಥೆಯನ್ನು ಅಳವಡಿಸಲಾಗಿದ್ದು, ಇದರಿಂದ ನಿರಂತರವಾಗಿ ಕಾರ್ಯಾಚರಣೆ ಸಾಧ್ಯವಾಗಲಿದೆ ಎಂದರು.

ಬೆಂಗಳೂರಿನ ಮನೆ ಮನೆಗೂ ಕಾವೇರಿ ನೀರು: ಬೆಂಗಳೂರು ನಗರದ ಹೊರವಲಯಕ್ಕೆ ಬರುವ ಕಾವೇರಿ ನೀರು, ವಾಜರಹಳ್ಳಿ ಬಳಿ ಪೈಪ್‌ಲೈನ್ ವಿಭಜನೆಯಾಗಿ ಸ್ಟೀಲ್ ಟ್ರಂಕ್ ಮೇನ್ ಮೂಲಕ ಗೊಟ್ಟಿಗೆರೆ, ದೊಡ್ಡಕನಹಳ್ಳಿ, ಲಿಂಗಧೀರನಹಳ್ಳಿ, ಸಿಂಗಾಪುರ, ಎಸ್‌ಎಂವಿ 6ನೇ ಬ್ಲಾಕ್, ಕಾಡುಗೋಡಿ ಮತ್ತು ಚೊಕ್ಕನಹಳ್ಳಿ ಜಲಾಶಯಗಳಿಗೆ ನೀರು ತುಂಬಿಸುತ್ತದೆ. ಬೆಂಗಳೂರಿನ ವಿವಿಧ ಬಡಾವಣೆಯ "ನೀರಿನ ದಾಹ" ತಣಿಸುವ ಯೋಜನೆ ಇದಾಗಿದೆ. ಕಾವೇರಿ 5ನೇ ಹಂತದ ಯೋಜನೆಯಿಂದ ಯಶವಂತಪುರ, ಬೆಂಗಳೂರು ದಕ್ಷಿಣ, ಬ್ಯಾಟರಾಯನಪುರ, ಟಿ. ದಾಸರಹಳ್ಳಿ, ಮಹದೇವಪುರ, ರಾಜರಾಜೇಶ್ವರಿನಗರ ಹಾಗೂ ಬೊಮ್ಮನಹಳ್ಳಿ ವಲಯದ ವಿವಿಧ ಹಳ್ಳಿಗಳ ಮನೆ ಮನೆಗೂ ಕಾವೇರಿ ನೀರು ಸರಬರಾಜು ಆಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.



ಕಾವೇರಿ 5ನೇ ಹಂತದ ನೀರು ಸರಬರಾಜು ಯೋಜನೆಯನ್ನು ಡಿಸಿಎಂ ಡಿ.ಕೆ.ಶಿವಕುಮಾರ್ ವೀಕ್ಷಿಸಿದರು.

ದಸರಾ ಸಂದರ್ಭದಲ್ಲಿ ಉದ್ಘಾಟನೆ: ಈ ಮಹತ್ವಾಕಾಂಕ್ಷಿ ಯೋಜನೆಯನ್ನು ದಸರಾ ಸಮಯದಲ್ಲಿ ಉದ್ಘಾಟಿಸಲಾಗುವುದು. ಈಗಾಗಲೇ ಕಾಮಗಾರಿ ಬಹುತೇಕ ಮುಗಿದಿದೆ. ಇನ್ನು ಕೆಲವೇ ಸಣ್ಣ ಪುಟ್ಟ ಕಾಮಗಾರಿಗಳು ಬಾಕಿಯಿದ್ದು ಪೂರ್ಣಗೊಳಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಅಲ್ಲದೇ, ದಸರಾ ಸಂದರ್ಭದಲ್ಲಿ ಉದ್ಘಾಟನೆಗೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳುವಂತೆಯೂ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ ಎಂದು ತಿಳಿಸಿದರು.

ತೀವ್ರ ಬರಗಾಲದಿಂದ ನಗರದ ಜನತೆಗೆ ಕುಡಿಯುವ ನೀರಿನ ಸಂಕಷ್ಟ ಎದುರಾಗಿತ್ತು. ಅಧಿಕಾರಿಗಳು ಮತ್ತು ಸಿಬ್ಬಂದಿ ಶ್ರಮದಿಂದ ಕುಡಿಯುವ ನೀರು ಕೊರತೆ ನೀಗಿಸಲಾಗಿತ್ತು. ಲಕ್ಷಾಂತರ ಜನರ ಉಪಯೋಗದ ಯೋಜನೆಯ ಬಗ್ಗೆ ಯಾವುದೇ ವಿರೋಧಿಗಳ ಕೊಂಕು ಬರಬಾರದು ಎಂಬ ನಿಟ್ಟಿನಲ್ಲಿ ನಾನೇ ಖುದ್ದು ಕಾಮಗಾರಿ ವೀಕ್ಷಣೆ ಮಾಡಿದ್ದು, ಅಧಿಕಾರಿಗಳಿಗೆ ಸಲಹೆ ಮತ್ತು ಸೂಚನೆ ನೀಡಲಾಗಿದೆ. ವಿಜಯದಶಮಿ ಮುಗಿದ ನಂತರ ಸೂಕ್ತ ದಿನಾಂಕ ನಿಗದಿಪಡಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಒಡಗೂಡಿ ಕುಡಿಯುವ ನೀರಿನ ಯೋಜನೆ ಲೋಕಾರ್ಪಣೆ ಮಾಡಲಾಗುವುದು ಎಂದರು.

ಈ ಸಂದರ್ಭದಲ್ಲಿ ಶಾಸಕರಾದ ಪಿ.ಎಂ. ನರೇಂದ್ರಸ್ವಾಮಿ, ಎಸ್.ಟಿ.ಸೋಮಶೇಖರ್, ವಿಧಾನಪರಿಷತ್ ಸದಸ್ಯರಾದ ದಿನೇಶ್‌ಗೂಳಿಗೌಡ, ಎಸ್.ರವಿ, ಬೆಂಗಳೂರು ಜಲ ಮಂಡಳಿ ಅಧ್ಯಕ್ಷ ರಾಮ್ ಪ್ರಸಾತ್ ಮನೋಹರ್, ಮುಖ್ಯ ಇಂಜಿನಿಯರ್‌ಗಳಾದ ಮಹೇಶ್, ರಾಜಶೇಖರ್, ಅಪರ ಮುಖ್ಯ ಇಂಜಿನಿಯರ್‌ಗಳಾದ ರಮಾನಂದ, ರಾಘವೇಂದ್ರ, ಕಾರ್ಯ ನಿರ್ವಾಹಕ ಇಂಜಿನಿಯರ್‌ಗಳಾದ ಹನೀಫ್ ಯತ್ನಾಟಿ, ಬಿ.ಕೆ.ನರೇಶ್ ಸೇರಿದಂತೆ ಹಲವರು ಭಾಗವಹಿಸಿದ್ದರು.

ಮೂರನೇ ಪುಟದಿಂದ

ಯುವ ದಸರಾ

ಇದೀಗ ಮೈಸೂರು ನಗರ ಬಸ್ ನಿಲ್ದಾಣದಿಂದ 9 ಕಿ.ಮೀ. ದೂರದಲ್ಲಿ ಉತ್ತನಹಳ್ಳಿ ಬಳಿಯ ಖಾಸಗಿ ಒಡೆತನದ 100 ಎಕರೆ ಬಯಲು ಪ್ರದೇಶದಲ್ಲಿ ಈ ಕಾರ್ಯಕ್ರಮ ನಡೆಸಲು ಯುವ ದಸರಾ ಉಪಸಮಿತಿ ನಿರ್ಧರಿಸಿದೆ. ಈ ಬಾರಿ ಅದ್ಧೂರಿಯಾಗಿ ದಸರಾ ಆಚರಿಸಲು ರಾಜ್ಯ ಸರ್ಕಾರ ತೀರ್ಮಾನಿಸಿರುವುದರಿಂದ ಅಂತರರಾಷ್ಟ್ರೀಯ ಖ್ಯಾತಿಯ ಸಂಗೀತಗಾರರು, ಗಾಯಕರನ್ನು ಆಹ್ವಾನಿಸುತ್ತಿದ್ದು, ಯುವ ದಸರಾಗೆ ಲಕ್ಷಕ್ಕೂ ಅಧಿಕ ಮಂದಿ ಪಾಲ್ಗೊಳ್ಳುವ ನಿರೀಕ್ಷೆ ಇದೆ. ಮಹಾರಾಜ ಕಾಲೇಜು ಮೈದಾನದಲ್ಲಿ ಸ್ಥಳಾವಕಾಶ ಮತ್ತು ವಾಹನ ನಿಲುಗಡೆ ಸಮಸ್ಯೆ ಉದ್ಭವಿಸುವುದನ್ನು ತಡೆಯಲು ಹೊರ ವಲಯವನ್ನು ಆಯ್ಕೆ ಮಾಡಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ತಿಳಿಸಿದ್ದಾರೆ.

ಎ.ಆರ್.ರೆಹಮಾನ್‌ರಂತಹ ಪ್ರಸಿದ್ಧ ಸಂಗೀತಗಾರ–ಗಾಯಕರನ್ನು ಆಹ್ವಾನಿಸಿರುವುದರಿಂದ ಬೆಂಗಳೂರು ಸೇರಿದಂತೆ ಹೊರಗಡೆಯಿಂದಲೂ ಹೆಚ್ಚಿನ ಸಂಖ್ಯೆಯಲ್ಲಿ ಯುವ ಸಮೂಹ ಈ ಅದ್ದೂರಿ ಸಂಗೀತ ಕಾರ್ಯಕ್ರಮಕ್ಕೆ ಬರುವ ನಿರೀಕ್ಷೆ ಇರುವ ಕಾರಣ ನಾವು ಉತ್ತನಹಳ್ಳಿ ಬಳಿಯ ಸುವಿಶಾಲ ಬಯಲು ಪ್ರದೇಶದಲ್ಲಿ ಕಾರ್ಯಕ್ರಮ ನಡೆಸಲು ತೀರ್ಮಾನಿಸಿದ್ದೇವೆ ಎಂದು ತಿಳಿಸಿದರು.

ಅಲ್ಲಿ ವಿಶಾಲ ವೇದಿಕೆ, ಡಾರ್ಕ್ ರೂಂಗಳೂ, ಪ್ರೇಕ್ಷಕರಿಗೆ ಆಸನ, ಜರ್ಮನ್ ಟೆಂಟ್, ಕುಡಿಯುವ ನೀರು, ಶೌಚಾಲಯ, ರಸ್ತೆ, ವಿದ್ಯುದ್ದೀಪ, ಪೊಲೀಸ್ ಭದ್ರತೆಯಂತಹ ಮೂಲ ಸೌಲಭ್ಯ ಒದಗಿಸಲಾಗುವುದು. ರಾತ್ರಿ ವೇಳೆ ಯುವಕರು, ಮಹಿಳೆಯರಿಗೆ ರಕ್ಷಣೆ ಒದಗಿಸಲು ಸೂಕ್ತ ಪೊಲೀಸ್ ವ್ಯವಸ್ಥೆ ಮಾಡಲಾಗುವುದು ಎಂದು ಲಕ್ಷ್ಮೀಕಾಂತರೆಡ್ಡಿ ತಿಳಿಸಿದ್ದಾರೆ. ಎ.ಆರ್. ರೆಹಮಾನ್ ಅಲ್ಲದೇ ಭಾರತೀಯ ಚಿತ್ರರಂಗದ ಹಿರಿಯ ಸಂಗೀತ ನಿರ್ದೇಶಕ ಇಳಯರಾಜ, ಖ್ಯಾತ ಗಾಯಕಿ ಶ್ರೇಯಾ ಘೋಷಾಲ್, ಬಾದ್‌ಶಾ, ಕೆಜಿಎಫ್ ಖ್ಯಾತಿಯ ರವಿ ಬಸ್ರೂರ್ ಸಂಗೀತ ಕಾರ್ಯಕ್ರಮ ಏರ್ಪಡಿಸಲು ಉದ್ದೇಶಿಸಲಾಗಿದೆ.

ಭವಿಷ್ಯ ಇಂದು ನಿರ್ಧಾರ

ಸುಪ್ರೀಂಕೋರ್ಟ್ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ಸೇರಿದಂತೆ ಹಲವು ಹಿರಿಯ ವಕೀಲರು ಸಿದ್ದರಾಮಯ್ಯ ಪರ ವಾದ ಮಂಡಿಸಿದ್ದರೆ, ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಪರ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ವಾದ ಮಂಡಿಸಿದ್ದರು. ಅಲ್ಲದೇ ದೂರುದಾರರಾದ ಸ್ನೇಹಮಯಿ ಕೃಷ್ಣ ಮತ್ತು ಟಿಜೆ ಅಬ್ರಾಹಂ ಪರ ವಕೀಲರು ಸಹ ತಮ್ಮ ವಾದ ಮಂಡಿಸಿದ್ದರು. ಸೆಪ್ಟೆಂಬರ್ 12ರಂದು ಈ ಎಲ್ಲಾ ವಾದ ಪ್ರತಿವಾದ ಆಲಿಸಿದ್ದ ನ್ಯಾ. ಎಂ.ನಾಗಪ್ರಸನ್ನ ಅವರು ಆದೇಶವನ್ನು ಕಾಯ್ದಿರಿಸಿದ್ದರು.

ಮುಡಾ ವ್ಯಾಪ್ತಿಯಲ್ಲಿ ಸಿಎಂ ಸಿದ್ದರಾಮಯ್ಯನವರ ಪತ್ನಿ ಪಾರ್ವತಮ್ಮನವರ ಹೆಸರಿನಲ್ಲಿ ಒಟ್ಟು 1,14,100 ಚದರ ಅಡಿಯಷ್ಟು ಜಾಗವನ್ನು ಬಡಾವಣೆ ನಿರ್ಮಾಣಕ್ಕೆ ಭೂಸ್ವಾಧೀನ ಮಾಡಿಕೊಳ್ಳಲಾಗಿತ್ತು. ಇದಕ್ಕೆ ಬದಲಾಗಿ ಮುಡಾದಿಂದ ಮೂರು ವರ್ಷಗಳ ಹಿಂದೆ (2021) ಮೈಸೂರಿನ ವಿಜಯನಗರದಲ್ಲಿ 14 ನಿವೇಶಗಳನ್ನು ನೀಡಿತ್ತು. ಸಿಎಂ ಸಿದ್ದರಾಮಯ್ಯ ಅಧಿಕಾರಿಗಳ ಮೇಲೆ ಒತ್ತಡ ಹೇರಿ ಜಾಗ ಬರೆಸಿಕೊಂಡಿದ್ದಾರೆ. ಅಕ್ರಮವಾಗಿ ನಿವೇಶನ ಪಡೆದಿದ್ದಾರೆ ಎಂಬ ಆರೋಪ ಕೇಳಿ ಬಂದಿತ್ತು.

ಈ ಸಂಬಂಧ ಸಾಮಾಜಿಕ ಕಾರ್ಯಕರ್ತ ಅಬ್ರಹಾಂ ಎಂಬುವವರು ರಾಜ್ಯಪಾಲರ ಬಳಿ ತನಿಖೆಗೆ ಅನುಮತಿಸುವಂತೆ ಕೋರಿ ದೂರು ನೀಡಿದ್ದರು. ದೂರಿನ ಮೇರೆಗೆ ರಾಜ್ಯಪಾಲರು ಸಿಎಂ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದು, ರಾಜಕೀಯ ಆರೋಪ, ಪ್ರತ್ಯಾರೋಪಕ್ಕೆ ಕಾರಣವಾಗಿತ್ತು. ರಾಜ್ಯಪಾಲರು ತಮ್ಮ ವಿರುದ್ಧ ನೀಡಿರುವ ಪ್ರಾಸಿಕ್ಯೂಷನ್ ಅನುಮತಿ ರದ್ದುಗೊಳಿಸುವಂತೆ ಕೋರಿ ಸಿಎಂ ಸಿದ್ದರಾಮಯ್ಯ ಅವರು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು.

ಟಿಕೆಟ್ ಮಾರಾಟ

ಮೈಸೂರು ದಸರಾ–2024ರ ಅಧಿಕೃತ ಜಾಲತಾಣ **https://www.mysoredasara.gov.in/** ಸಂಪರ್ಕಿಸುವ ಮೂಲಕ ಮಾತ್ರವೇ ಗೋಲ್ಡ್ ಕಾರ್ಡ್ ಹಾಗೂ ಟಿಕೆಟ್ ಕೊಳ್ಳುವಂತೆ ದಸರಾ ವಿಶೇಷಾಧಿಕಾರಿಯೂ ಆದ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಐದು ದಿನವೂ ಮಾರಾಟ: ಆನ್‌ಲೈನ್‌ನಲ್ಲಿ ಮಾರಾಟ ಆರಂಭವಾದ ಕೆಲವೇ ನಿಮಿಷಗಳಲ್ಲಿ ಗೋಲ್ಡ್ ಕಾರ್ಡ್ ಹಾಗೂ ಟಿಕೆಟ್‌ಗಳು ಸೋಲ್ಡ್‌ಔಟ್ ಆಗುತ್ತವೆ. ಜಂಬೂ ಸವಾರಿ ಹಾಗೂ ಪಂಜಿನ ಕವಾಯತು ವೀಕ್ಷಣೆಗೆ ವರ್ಷದಿಂದ ಕಾತುರವಾಗಿ ಕಾದಿರುವ ಪ್ರವಾಸಿಗರಿಗೆ ಭಾರೀ ನಿರಾಸೆಯಾಗುತ್ತದೆ. ಇನ್ನು ಗೋಲ್ಡ್ ಕಾರ್ಡ್, ಟಿಕೆಟ್ ಇದ್ದವರಿಗೂ ಆಸನ ಸಿಗುವುದಿಲ್ಲ. ಆಸನ ಸಂಖ್ಯೆಗಿಂತ ದುಪ್ಪಟ್ಟು ಸಂಖ್ಯೆಯ ಟಿಕೆಟ್ ಮಾರಾಟ ಮಾಡಿ, ಅದ್ವಾನ ಸೃಷ್ಟಿಸುತ್ತಾರೆ. ಇದರಲ್ಲಿ ಏನೋ ಗೋಲ್‌ಮಾಲ್ ಆಗುತ್ತಿದೆ ಇಂತಹ ಹತ್ತಾರು ಆರೋಪ ಹಾಗೂ ಅಸಮಾಧಾನದ ನುಡಿಗಳು ಪ್ರತಿವರ್ಷ ಕೇಳಿಬರುತ್ತವೆ. ಈ ಹಿನ್ನೆಲೆಯಲ್ಲಿ ದೀಪಾಲಂಕಾರ ಉಪಸಮಿತಿ ಸುದ್ದಿಗೋಷ್ಠಿಯಲ್ಲಿ ಪ್ರತಿಕ್ರಿಯಿಸಿರುವ ಜಿಲ್ಲಾಧಿಕಾರಿಗಳು, ಈ ಬಾರಿ ಒಟ್ಟುಗೋಲ್ಡ್ ಕಾರ್ಡ್ ಹಾಗೂ ಟಿಕೆಟ್‌ಗಳನ್ನು ವಿಭಾಗಿಸಿ, ಐದು ದಿನವೂ ಮಾರಾಟ ಮಾಡಲು ಕ್ರಮ ಕೈಗೊಳ್ಳಲಾಗಿದೆ ಎಂದಿದ್ದಾರೆ.

ಚಿತ್ತಾರ ಮೂಡಿಸಲಿವೆ ಬರೋಬ್ಬರಿ 1500 ಡ್ರೋನ್‌ಗಳು

ಈ ಕುರಿತು ವಿಜಯನಗರ 2ನೇ ಹಂತದಲ್ಲಿರುವ ಸೆಸ್ಕ್ ಪ್ರಧಾನ ಕಚೇರಿಯ ಕಾನ್ಫರೆನ್ಸ್ ಹಾಲ್‌ನಲ್ಲಿ ಸೋಮವಾರ ದಸರಾ ದೀಪಾಲಂಕಾರದ ಪೋಸ್ಟರ್ ಬಿಡುಗಡೆಗೊಳಿಸಿ ಮಾತನಾಡಿದ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಮೈಸೂರು ದಸರೆಯ ಪ್ರಮುಖ ಆಕರ್ಷಣೆಗಳಲ್ಲಿ ಒಂದಾಗಿರುವ ದಸರಾ ದೀಪಾಲಂಕಾರಕ್ಕೆ ಈ ಬಾರಿ ಡ್ರೋನ್ ಪ್ರದರ್ಶನ ಹೊಸ ಮೆರುಗು ನೀಡಲಿದ್ದು, 1500 ಡ್ರೋನ್‌ಗಳು ಆಗಸದಲ್ಲಿ ಬೆಳಕಿನ ಹೊಸ ಚಿತ್ತಾರ ಮೂಡಿಸಲಿವೆ ಎಂದರು.

ದಸರಾ ದೀಪಾಲಂಕಾರದೊಂದಿಗೆ ಇದೇ ಮೊದಲ ಬಾರಿಗೆ ಡ್ರೋನ್ ಪ್ರದರ್ಶನ ಏರ್ಪಡಿಸಲಾಗಿದೆ. ಎಲ್.ಇ.ಡಿ. ಬಲ್ಬ್‌ಗಳನ್ನು ಅಳವಡಿಸಿರುವ ಸುಮಾರು 1500 ಡ್ರೋನ್‌ಗಳನ್ನು ಬಳಸಿ ಆಕಾಶದಲ್ಲಿ ಅದ್ಭುತ ವಿನ್ಯಾಸಗಳನ್ನು ಮೂಡಿಸಲಾಗುವುದು. ಬನ್ನಿಮಂಟಪ ಪಂಜಿನ ಕವಾಯತು ಮೈದಾನದಲ್ಲಿ ಅ.6, 7 ಮತ್ತು 11, 12ರಂದು ರಾತ್ರಿ 8 ಗಂಟೆಯಿಂದ 8.15ರವರೆಗೆ ಡ್ರೋನ್ ಶೋ ನಡೆಯಲಿದ್ದು, ಅ.6 ಮತ್ತು 7ರಂದು ಸಾರ್ವಜನಿಕರಿಗೆ ಪ್ರವೇಶ ಉಚಿತವಾಗಿರಲಿದೆ. ಅ.11 ಮತ್ತು 12 ರಂದು ಪಂಜಿನ ಕವಾಯತು ರಿಹರ್ಸಲ್ ಪಾಸ್(ಅ.11) ಹಾಗೂ ಅ.12ರಂದು ಪಂಜಿನ ಕವಾಯತು ಪಾಸ್ ಹೊಂದಿರುವವರೂ ವೀಕ್ಷಣೆ ಮಾಡಬಹುದಾಗಿದ್ದು, ನಾಲ್ಕು ದಿನವೂ ಡ್ರೋನ್ ಶೋ ಪ್ರವೇಶ ಉಚಿತವಾಗಿತವಾಗಿರಲಿದೆ ಎಂದು ಮಾಹಿತಿ ನೀಡಿದರು.

21 ದಿನ: ಅ.3 ರಿಂದ 21 ದಿನಗಳ ಕಾಲ ಮೈಸೂರು ನಗರವನ್ನು ವಿದ್ಯುತ್ ದೀಪಾಲಂಕಾರ ಬೆಳಗಲಿದೆ. ಈ ಬಾರಿಯ ದೀಪಾಲಂಕಾರವನ್ನು ಅತ್ಯಂತ ಆಕರ್ಷಣೀಯಗೊಳಿಸಲು ಸೆಸ್ಕ್ ಅಧಿಕಾರಿಗಳ ತಂಡ ಸಾಕಷ್ಟು ಮುತುವರ್ಜಿ ವಹಿಸಿದೆ. ಒಟ್ಟು 130 ಕಿ.ಮೀ. ರಸ್ತೆ, 100 ವೃತ್ತಗಳು, ಭಾರತದಲ್ಲಿ ಪ್ರಜಾಪ್ರಭುತ್ವ ಸಾಗಿಬಂದ ಹಾದಿ, ತಾಯಿ ಭುವನೇಶ್ವರಿ ಸೇರಿದಂತೆ 65 ಪ್ರತಿಕೃತಿಗಳು ಹಾಗೂ ಹಸಿರು ಚಪ್ಪರ, ಸುಸ್ವಾಗತ, ವಿವಿಧ ಕಮಾನುಗಳು, ನಿಗಮದ ಕಚೇರಿಗಳು ಸೇರಿ 25 ಕಡೆಗಳಲ್ಲಿ ದೀಪಾಲಂಕಾರ ಮಾಡಲಾಗುವುದು ಎಂದು ತಿಳಿಸಿದರು.

10 ಕೋಟಿ ಅಂದಾಜು ವೆಚ್ಚ: ದಸರಾ ದೀಪಾಲಂಕಾರಕ್ಕಾಗಿ 6.50 ಕೋಟಿ ರೂ. ಹಾಗೂ ಡ್ರೋನ್ ಶೋಗೆ 3 ರಿಂದ 3.50 ಕೋಟಿ ರೂ. ಸೇರಿ 10 ಕೋಟಿ ರೂ. ಅಂದಾಜು ವೆಚ್ಚವಾಗಲಿದೆ. 2881 ಕಿ.ವ್ಯಾ ಅಂದಾಜು ತಾತ್ಕಾಲಿಕ ವಿದ್ಯುತ್ ಸಂಪರ್ಕ ಭಾರ ಹಾಗೂ 2,42,012 ಯೂನಿಟ್(ಅಂದಾಜು 3 ಮೆಗಾ ವ್ಯಾಟ್)ಗಳ ವಿದ್ಯುತ್ ಬಳಕೆ ಮಾಡಲಾಗುತ್ತದೆ ಎಂದು ವಿವರಿಸಿದರು.

10–15 ವಿನ್ಯಾಸ ಪ್ರದರ್ಶನ: ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಅಧ್ಯಕ್ಷ ರಮೇಶ್ ಬಂಡಿಸಿದ್ದೇಗೌಡ ಮಾತನಾಡಿ, ದಸರಾ ದೀಪಾಲಂಕಾರದ ಜತೆಗೆ ಈ ಬಾರಿ ಡ್ರೋನ್ ಪ್ರದರ್ಶನ ನಡೆಸಲಾಗುತ್ತಿದೆ. ವಾರಣಾಸಿ, ಹರಿದ್ವಾರಗಳಲ್ಲಿ ಡ್ರೋನ್ ಪ್ರದರ್ಶನ ನೀಡಿರುವ ಕಂಪನಿಯು ಮೈಸೂರಲ್ಲಿ ಪ್ರದರ್ಶನ ನೀಡುತ್ತಿದ್ದು, 15 ನಿಮಿಷಗಳ ಡ್ರೋನ್ ಶೋನಲ್ಲಿ 10–15 ವಿನ್ಯಾಸಗಳನ್ನು ಪ್ರದರ್ಶನ ಮಾಡಲಾಗುವುದು. ಸುಮಾರು 1 ಕಿ.ಮೀ ದೂರದಿಂದಲೂ ಡ್ರೋನ್ ಶೋ ನೋಡಬಹುದಾಗಿದೆ ಎಂದರು.

ಬಾಟ್‌ಲ್ಯಾಬ್ ತಂಡದಿಂದ ಡ್ರೋನ್ ಶೋ: ಸದ್ಯ ದೇಶದಲ್ಲಿರುವ ಏಕೈಕ ಡ್ರೋನ್ ಶೋ ಕಂಪನಿಯಾದ ಬಾಟ್‌ಲ್ಯಾಬ್ ತಂಡ ಮೈಸೂರು ದಸರಾ ಮಹೋತ್ಸವದಲ್ಲಿ ಡ್ರೋನ್ ಪ್ರದರ್ಶನ ನೀಡಲಿದೆ. ಡ್ರೋನ್ ಶೋ ಖರ್ಚೆ 2.50 ಕೋಟಿಯಿಂದ 3 ಕೋಟಿ ರೂ. ಆಗಲಿದೆ. ಈ ತಂಡವೂ ಈಗಾಗಲೇ ವಾರಣಾಸಿ, ಹರಿದ್ವಾರದಲ್ಲಿ ಯಶಸ್ವಿಯಾಗಿ ಡ್ರೋನ್ ಶೋ ನೀಡಿದ್ದು, ಪ್ರಧಾನಿಗಳೇ ಉದ್ಘಾಟಿಸಿದ್ದಾರೆ. ಡ್ರೋನ್ ಶೋಗೆ ಸಾಕಷ್ಟು ಖರ್ಚಾಗಲಿದ್ದು, ಕಂಪನಿಯವರೊಂದಿಗೆ ಮಾತನಾಡಿ ಖರ್ಚು ಕಡಿಮೆ ಮಾಡುವ ಪ್ರಯತ್ನವನ್ನು ಮಾಡಿದ್ದೇವೆ ಎಂದು ತಿಳಿಸಿದರು.

ಸಿಬ್ಬಂದಿ ನಿಯೋಜನೆ: ಈ ಬಾರಿ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಲಾಗುವುದು. ವಿದ್ಯುತ್ ಅಡೆತಡೆಗಳಾಗದಂತೆ ತಡೆಯಲು ಹಾಗೂ ಸಾರ್ವಜನಿಕರಿಂದ ದೀಪಾಲಂಕಾರಕ್ಕೆ ಹಾನಿಯಾಗದಂತೆ ಹಾಗೂ ಯಾರಿಗೂ ತೊಂದರೆಯೂ ಅಥವಾ ಅನಾಹುತಗಳು ಆಗದಂತೆ ತಡೆಗಟ್ಟಲು ಅಲ್ಲಲ್ಲಿ ಸೆಸ್ಕ್ ಸಿಬ್ಬಂದಿಗಳನ್ನು ಸಾರ್ವಜನಿಕರ ಸುರಕ್ಷತೆಗಾಗಿ ನಿಯೋಜಿಸಲಾಗುವುದು ಎಂದು ಹೇಳಿದರು.

ಅ.3 ರಂದು ಉದ್ಘಾಟನೆ: ಸೆಸ್ಕ್ ತಾಂತ್ರಿಕ ವಿಭಾಗದ ನಿರ್ದೇಶಕ ಕೆ.ಎಂ.ಮುನಿಗೋಪಾಲ್ ರಾಜು ಮಾತನಾಡಿ, ದಸರಾ ದೀಪಾಲಂಕಾರವನ್ನು ಅ.3 ರಂದು ಸಂಜೆ 6.30ಕ್ಕೆ ಸಯ್ಯಾಜಿರಾವ್ ರಸ್ತೆಯಲ್ಲಿ ವಿದ್ಯುತ್ ದೀಪಗಳಿಂದ ನಿರ್ಮಿಸಿರುವ ಹಸಿರು ಚಪ್ಪರವನ್ನು ಬೆಳಗಿಸುವ ಮೂಲಕ ಇಂದನ ಸಚಿವರಾದ ಕೆ.ಜೆ.ಜಾರ್ಜ್ ಉದ್ಘಾಟಿಸಲಿದ್ದಾರೆ ಎಂದು ತಿಳಿಸಿದರು. ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕಿ ಜಿ.ಶೀಲಾ, ಸೆಸ್ಕ್ ಹಣಕಾಸು ನಿರ್ದೇಶಕ ಶೇಖ್ ಮಹೀಮುಲ್ಲಾ, ಅಧೀಕ್ಷಕ ಇಂಜಿನಿಯರ್ ಸುನೀಲ್ ಕುಮಾರ್, ವಿದ್ಯುತ್ ಗುತ್ತಿಗೆದಾರರ ಸಂಘದ ಅಧ್ಯಕ್ಷ ರಮೇಶ್, ಕಾರ್ಯದರ್ಶಿ ರಘು, ಸೆಸ್ಕ್ ನೌಕರರ ಸಂಘದ ಸಂದೀಪ್ ಸೇರಿದಂತೆ ಪ್ರಮುಖ ಅಧಿಕಾರಿಗಳು ಉಪಸ್ಥಿತರಿದ್ದರು.

ಜಾಮೀನು ಮಂಜೂರು

ಹಿಂದಿರುವ ದರ್ಶನ್ ಹಾಗೂ ಅವರ ಆಪ್ತೆ ಪವಿತ್ರಾಗೌಡ ಪಾತ್ರ ಬಯಲಾಯಿತು. ಈ ಮಾಹಿತಿ ಮೇರೆಗೆ ಜೂ.11 ರಂದು ದರ್ಶನ್ ಸೇರಿ 17 ಮಂದಿ ಆರೋಪಿಗಳನ್ನು ಬಂಧಿಸಲಾಗಿತ್ತು. ಇದೇ ಪ್ರಕರಣ ಸಂಬಂಧ ಬೆಂಗಳೂರಿನ 57ನೇ ಸಿಟಿ ಸಿವಿಲ್ ನ್ಯಾಯಾಲಯದಲ್ಲಿ ಇಂದು ನಡೆದ ಅರ್ಜಿ ವಿಚಾರಣೆಯಲ್ಲಿ ಬಂಧನದಲ್ಲಿರುವ ನಟ ದರ್ಶನ್ ಜಾಮೀನು ಅರ್ಜಿ ವಿಚಾರಣೆಯನ್ನು ಸೆ.27ಕ್ಕೆ ಮುಂದೂಡಿಕೆ ಮಾಡಲಾಗಿದ್ದು, ಪವಿತ್ರಾಗೌಡ ಜಾಮೀನು ಅರ್ಜಿಯ ವಿಚಾರಣೆಯನ್ನು ಸೆ. 25ಕ್ಕೆ ಮುಂದೂಡಿಕೆ ಮಾಡಲಾಗಿದೆ.

ದಸರಾ ಚಲನಚಿತ್ರೋತ್ಸವದ ಪೋಸ್ಟರ್ ಬಿಡುಗಡೆ

ಅ.4ರಿಂದ 10ರವರೆಗೆ ಡಿಆರ್‌ಸಿ, ಐನಾಕ್ಸ್ ಮಲ್ಟಿಪ್ಲೆಕ್ಸ್‌ನಲ್ಲಿ ಚಿತ್ರ ಪ್ರದರ್ಶನ



ದಸರಾ ಚಲನ ಚಿತ್ರೋತ್ಸವದ ಪೋಸ್ಟರ್ ಅನ್ನು ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಬಿಡುಗಡೆ ಮಾಡಿದರು.

ಮೈಸೂರು,ಸೆ.23(ಎಂಟಿವೈ)– ದಸರಾ ಮಹೋತ್ಸವದ ಅಂಗವಾಗಿ ಮೈಸೂರಿನ ಡಿಆರ್‌ಸಿ ಮತ್ತು ಐನಾಕ್ಸ್ ಮಲ್ಟಿಪ್ಲೆಕ್ಸ್‌ನಲ್ಲಿ ಅ.4ರಿಂದ 10ರವರೆಗೆ ದಸರಾ ಚಲನ ಚಿತ್ರೋತ್ಸವ ಜರುಗಲಿದ್ದು, ಜಿಲ್ಲಾ ಉಸ್ತು ವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಪೋಸ್ಟರ್ ಬಿಡುಗಡೆ ಮಾಡಿದರು.

ಮೈಸೂರು ಜಿ.ಪಂ.ಸಭಾಂಗಣದಲ್ಲಿ ಸೋಮವಾರ ಮಧ್ಯಾಹ್ನ ದಸರಾ ಚಲನ ಚಿತ್ರೋತ್ಸವದ ಪೋಸ್ಟರ್ ಬಿಡುಗಡೆ ಮಾಡಿ, ದಸರಾ ಚಲನಚಿತ್ರೋತ್ಸವವನ್ನು ಯಶಸ್ವಿಯಾಗಿ ಆಯೋಜಿಸುವಂತೆ ಸಲಹೆ ನೀಡಿದರು. ಪ್ರಸಕ್ತ ಸಾಲಿನ ದಸರಾ ಚಲನ ಚಿತ್ರೋತ್ಸವದ ಉದ್ಘಾಟನಾ ಸಮಾರಂಭ ಅ.3ರಂದು ಬೆಳಗ್ಗೆ 9.30ಕ್ಕೆ ಮುಕ್ತ ವಿಶ್ವವಿದ್ಯಾನಿಲಯ ಘಟಿಕೋತ್ಸವ ಭವನದಲ್ಲಿ ಜರುಗಲಿದೆ. ಈ ಸಂದರ್ಭದಲ್ಲಿ ಸಿನಿ ತಾರೆಯರಾದ ರಮೇಶ್ ಅರವಿಂದ್, ಡಾಲಿ ಧನಂಜಯ, ಸಪ್ತಮಿಗೌಡ, ಶರಣ್ಯ ಶೆಟ್ಟಿ, ಅಕ್ಷಿತ ಬೋಪಯ್ಯ ಪಾಲ್ಗೊಳ್ಳಲಿದ್ದಾರೆ. ಅಲ್ಲದೆ, 'ಕರ್ನಾಟಕದ ಕುಳ್ಳ' ದಿ.ದ್ವಾರಕೀಶ್ ಅವರ ನೆನಪಿನ ಅಂಗ ವಾಗಿ ಯೋಗೇಶ್ ದ್ವಾರಕೀಶ್ ಹಾಗೂ ಸಂಗೀತ ನಿರ್ದೇಶಕ, ಹಾಸ್ಯ ನಟ ಸಾಧುಕೋಕಿಲ ಅವರ ತಂಡದಿಂದ ಮನರಂಜನಾ ಕಾರ್ಯಕ್ರಮ ಜರುಗಲಿದೆ. ಅ.4ರಿಂದ 10ರವರೆಗೆ ಮೈಸೂರಿನ ಬಿ.ಎಂ. ಹ್ಯಾಬಿಟಾಟ್ ಮಾಲ್‌ನಲ್ಲಿನ ಡಿಆರ್‌ಸಿ ಹಾಗೂ ಮಾಲ್ ಆಫ್ ಮೈಸೂರ್‌ನಲ್ಲಿರುವ ಐನಾಕ್ಸ್ ಚಿತ್ರಮಂದಿರದಲ್ಲಿ ಚಲನ ಚಿತ್ರಗಳು ಪ್ರದರ್ಶನಗೊಳ್ಳಲಿದೆ. ಚಲನ ಚಿತ್ರೋತ್ಸವದಲ್ಲಿ ಪ್ರದರ್ಶನಗೊಳ್ಳುವ ಎಲ್ಲಾ ಚಲನಚಿತ್ರ ವೀಕ್ಷಣೆಗೆ ಪಾಸ್ ವ್ಯವಸ್ಥೆ ಮಾಡಲಾಗಿದ್ದು, ವಿದ್ಯಾರ್ಥಿ ಹಾಗೂ ಹಿರಿಯ ನಾಗರಿಕರಿಗಾಗಿ 300 ರೂ. ಹಾಗೂ ಸಾಮಾನ್ಯ ಜನರಿಗೆ 500 ರೂ. ಮುಖಬೆಲೆಯ ಪಾಸ್ ನೀಡಲಾಗುತ್ತದೆ. ಚಲನಚಿತ್ರೋತ್ಸವದಲ್ಲಿ ಪ್ರದರ್ಶನಗೊಳ್ಳುವ ಚಲನಚಿತ್ರಗಳ ಹೆಸರನ್ನು ಚಲನಚಿತ್ರ ಉಪಸಮಿತಿ ಬಿಡುಗಡೆ ಮಾಡಲಿದೆ.

ಇಂದಿನಿಂದ ದಸರಾ ಯುವ ಸಂಭ್ರಮ

350 ಕಾಲೇಜು ತಂಡಗಳು ಭಾಗಿ

ಮೈಸೂರು, ಸೆ.23(ಎಂಕೆ)– ನಾಳೆಯಿಂದ ಮೈಸೂರು ವಿವಿ ಮಾನಸಗಂಗೋತ್ರಿಯ ಬಯಲು ರಂಗಮಂದಿರದಲ್ಲಿ ನಡೆಯುವ ದಸರಾ ಯುವ ಸಂಭ್ರಮದಲ್ಲಿ 350 ಕಾಲೇಜು ತಂಡಗಳು ಭಾಗವಹಿಸಲಿವೆ ಎಂದು ಮೈಸೂರು ಜಿಲ್ಲಾ ಉಸ್ತು ವಾರಿ ಸಚಿವ ಡಾ.ಹೆಚ್.ಸಿ. ಮಹದೇ ವಪ್ಪ ತಿಳಿಸಿದರು. ವಿಜಯನಗರ 2ನೇ ಹಂತದಲ್ಲಿರುವ ಸೆಸ್ಕ್ ಪ್ರಧಾನ ಕಚೇರಿಯ ಕಾನ್ಫರೆನ್ಸ್ ಹಾಲ್‌ನಲ್ಲಿ ಸೋಮವಾರ ದಸರಾ ದೀಪಾಲಂಕಾರದ ಪೋಸ್ಟರ್ ಬಿಡುಗಡೆ ವೇಳೆ ಮಾತನಾಡಿದ ಅವರು, ದಸರಾ ಯುವ ಸಂಭ್ರಮಕ್ಕೆ ಒಟ್ಟಾರೆ 470 ಕಾಲೇಜು ತಂಡಗಳು ಅರ್ಜಿ ಸಲ್ಲಿಸಿದ್ದು, ಅವು ಗಳಲ್ಲಿ 350 ಕಾಲೇಜು ತಂಡಗಳನ್ನು ಆಯ್ಕೆ ಮಾಡಲಾಗಿದೆ. ಉಳಿದ ಕಾಲೇಜು ತಂಡಗಳಿಗೂ ಅವಕಾಶ ನೀಡಲು ಸಾಧ್ಯ ವಾದಲ್ಲಿ ಇನ್ನೂ ಒಂದು ದಿನ ಯುವ ಸಂಭ್ರಮ ವಿಸ್ತರಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ತಿಳಿಸಿದರು.

ಮಹಾರಾಷ್ಟ್ರದಲ್ಲಿ ಸೇತುವೆಯಿಂದ ಕೆಳಗೆ ಬಿದ್ದ ಬಸ್; ನಾಲ್ವರು ಸಾವು

ಅಮರಾವತಿ: ಖಾಸಗಿ ಬಸ್‌ವೊಂದು ಸೇತುವೆಯಿಂದ ಕೆಳಗೆ ಬಿದ್ದ ಪರಿಣಾಮ ನಾಲ್ವರು ಸಾವನ್ನಪ್ಪಿದ್ದು, 30 ಪ್ರಯಾಣಿಕರು ಗಾಯಗೊಂಡಿರುವ ಘಟನೆ ಮಹಾರಾಷ್ಟ್ರದ ಅಮರಾವತಿ ಜಿಲ್ಲೆಯ ಸೆಮಡೋಹ್ ಬಳಿ ಸೋಮವಾರ ಬೆಳಗ್ಗೆ ನಡೆದಿದೆ.

ಪರತವಾಡಿ ಧಾನಿ ಮಾರ್ಗದ ಬಸ್ ಮೇಲ್ಘಾಟ್‌ನ ತಿರುವು ರಸ್ತೆಯಲ್ಲಿ ಚಾಲಕನ ನಿಯಂತ್ರಣ ತಪ್ಪಿ ಸಮೀಪದ ಸೇತುವೆ ಕೆಳಗೆ ಬಿದ್ದಿದೆ. ಘಟನೆಯಲ್ಲಿ ನಾಲ್ಕು ಮಂದಿ ಸಾವನ್ನಪ್ಪಿದ್ದು, 30 ಪ್ರಯಾಣಿಕರು ಗಾಯಗೊಂಡಿದ್ದಾರೆ ಎಂದು ಜಿಲ್ಲಾಧಿಕಾರಿ ಸೌರಭ್ ಕಟಿಯಾರ್ ಮಾಹಿತಿ ನೀಡಿದ್ದಾರೆ.

ಬೈಕ್‌ಗೆ ಕಾರು ಡಿಕ್ಕಿ

ಹೆತ್ತವರ ಎದುರೇ ಮಗು ಸಾವು

ಮೈಸೂರು, ಸೆ.23(ಆರ್‌ಕೆ)– ಬೈಕ್‌ಗೆ ಕಾರೊಂದು ಹಿಂಬದಿಯಿಂದ ಡಿಕ್ಕಿ ಹೊಡೆದ ಪರಿಣಾಮ ಹೆತ್ತವರ ಕಣ್ಣೆದುರೇ ಒಂದೂವರೆ ವರ್ಷದ ಕಂದಮ್ಮ ಸಾವನ್ನಪ್ಪಿರುವ ಘಟನೆ ಇಲವಾಲ ಸಮೀಪ ಭಾನುವಾರ ಮಧ್ಯಾಹ್ನ ಹುಣಸೂರು ರಸ್ತೆಯಲ್ಲಿ ಸಂಭವಿಸಿದೆ. ಇಲವಾಲ ನಿವಾಸಿಗಳಾದ ಅಭಿಷೇಕ್ ಮತ್ತು ದಿವ್ಯಾಶ್ರೀ ದಂಪತಿಯ ಗಂಡು ಮಗು ಲಿಖಿತ್ ಸಾವನ್ನಪ್ಪಿದ್ದು, ಘಟನೆ ಯಲ್ಲಿ ತಂದೆ–ತಾಯಿ ಗಾಯಗೊಂಡಿದ್ದಾರೆ. ಇಲವಾಲದಿಂದ ಮೈಸೂರಿಗೆ ಬೈಕ್‌ನಲ್ಲಿ ಬರುತ್ತಿದ್ದಾಗ, ಹಿಂದಿನಿಂದ ಬಂದ ಕಿಯಾ ಸೋನೆಟ್ ಕಾರು, ಇಲವಾಲ–ಲಿಂಗದೇವರಕೊಪ್ಪಲು ನಡುವೆ ಹೊಸ ಪೆಟ್ರೋಲ್ ಬಂಕ್ ಎದುರು ಭಾನುವಾರ ಮಧ್ಯಾಹ್ನ 3.30 ಗಂಟೆ ವೇಳೆಯಲ್ಲಿ ಡಿಕ್ಕಿ ಹೊಡೆದಿದೆ. ಕಾರು ಡಿಕ್ಕಿ ಹೊಡೆದ ರಭಸಕ್ಕೆ ಬೈಕ್‌ನಲ್ಲಿ ತಾಯಿಯೊಂದಿಗೆ ಕುಳಿತಿದ್ದ ಮಗ 10 ಅಡಿ ದೂರಕ್ಕೆ ಎಸೆಯಲ್ಪಟ್ಟಿದೆ. ತೀವ್ರವಾಗಿ ಗಾಯಗೊಂಡು ಸ್ಥಳದಲ್ಲೇ ಸಾವನ್ನಪ್ಪಿತು ಎಂದು ಪ್ರಕರಣ ದಾಖಲಿಸಿಕೊಂಡಿರುವ ಇಲವಾಲ ಠಾಣೆ ಪೊಲೀಸರು ತಿಳಿಸಿದ್ದಾರೆ. ಕಣ್ಣೆದುರೇ ಕಂದಮ್ಮ ಅಸು ನೀಗಿದ್ದನ್ನು ಕಂಡು ಅಭಿಷೇಕ್ ಮತ್ತು ದಿವ್ಯಾಶ್ರೀ ಆಕ್ರಂದನ ಮುಗಿಲು ಮುಟ್ಟಿತ್ತು. ಇಂದು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ಮಗುವಿನ ಮೃತದೇಹವನ್ನು ವಾರಸುದಾರರಿಗೆ ಒಪ್ಪಿಸಲಾಯಿತು.



ಮೈಸೂರಲ್ಲಿ ಗಂಜಿಫಾ ಚಿತ್ರಗಳ ತರಬೇತಿ

ಮೈಸೂರು: ಭಾರತ ಸರ್ಕಾರದ ನವದೆಹಲಿಯ ಅಭಿವೃದ್ಧಿ ಆಯುಕ್ತರ (ಕರಕುಶಲ) ಕಾರ್ಯಾಲಯದ ವತಿಯಿಂದ ಸಮಗ್ರ ಕೌಶಲ ಉನ್ನತೀಕರಣ ಕಾರ್ಯಕ್ರಮದಡಿ ಅನುಭವಿ ಹಾಗೂ ನುರಿತ ಕಲಾವಿದರಾದ ಗಂಜಿಫಾ ರಘುಪತಿ ಭಟ್ ಅವರಿಂದ 5 ತಿಂಗಳ ತರಬೇತಿ ಶಿಬಿರವನ್ನು ಮೈಸೂರಿನಲ್ಲಿ ಆಯೋಜಿಸಲಾಗಿದೆ. ತರಬೇತಿ ಸಮಯ ಬೆಳಗ್ಗೆ 10ರಿಂದ ಸಂಜೆ 4ರವರೆಗೆ. ಸಂಪರ್ಕಿಸಬೇಕಾದ ಮೊ.ಸಂಖ್ಯೆ: 9844200900 (ರಘುಪತಿ ಭಟ್). ತರಬೇತಿ ಭತ್ಯೆ ಸಹ ನೀಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಸೆ.29ಕ್ಕೆ ಬಿಸಿಎಂ ಹಳೇ ವಿದ್ಯಾರ್ಥಿಗಳ ಸಂಘ ಉದ್ಘಾಟನೆ



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆದ ಹಳೆ ವಿದ್ಯಾರ್ಥಿಗಳ ಸಭೆಯಲ್ಲಿ ಮುಖ್ಯಮಂತ್ರಿಗಳ ಜಂಟಿ ಕಾರ್ಯದರ್ಶಿ ಪಿ.ಶಿವಸ್ವಾಮಿ ಮಾತನಾಡಿದರು.

ಮೈಸೂರು,ಸೆ.23(ಎಂಟಿವೈ)– ಮೈಸೂರಿನ ಕಲಾಮಂದಿರದಲ್ಲಿ ಸೆ.29ರಂದು ಬೆಳಗ್ಗೆ 10.30ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬಿಸಿಎಂ ಹಳೆ ವಿದ್ಯಾರ್ಥಿಗಳ ಸಂಘವನ್ನು ಉದ್ಘಾಟಿಸಲಿದ್ದಾರೆ ಎಂದು ಬಿಸಿಎಂ ಹಳೆ ವಿದ್ಯಾರ್ಥಿ ಸಂಘದ ಜಿಲ್ಲಾಧ್ಯಕ್ಷ ಹಾಗೂ ಮುಖ್ಯಮಂತ್ರಿಗಳ ಜಂಟಿ ಕಾರ್ಯದರ್ಶಿ ಪಿ.ಶಿವಸ್ವಾಮಿ ತಿಳಿಸಿದ್ದಾರೆ.

ಮೈಸೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಬಿಸಿಎಂ ಹಳೆ ವಿದ್ಯಾರ್ಥಿಗಳ ಸಂಘದ ಉದ್ಘಾಟನಾ ಕಾರ್ಯಕ್ರಮಕ್ಕೆ ದೇಶ, ವಿದೇಶಗಳಲ್ಲಿರುವ ಹಳೆ ವಿದ್ಯಾರ್ಥಿಗಳು ಆಗಮಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಸಚಿವರು, ಶಾಸಕರು ಸೇರಿದಂತೆ ಗಣ್ಯರು, ಹಿರಿಯ ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ. ಕಾರ್ಯಕ್ರಮದ ಯಶಸ್ವಿಗೆ ಅಗತ್ಯ ಸಿದ್ಧತೆಗಳನ್ನು ಪೂರ್ಣಗೊಳಿಸುವಂತೆ ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಈ ಹಿಂದೆ ಕಾರ್ಯ ನಿರ್ವಹಿಸುತ್ತಿದ್ದ ಅಡುಗೆ ಸಿಬ್ಬಂದಿ, ವಾರ್ಡನ್‌ಗಳನ್ನು ಅಭಿನಂದಿಸಲಾಗುತ್ತದೆ. ಪೋಷಕರಿಲ್ಲದ ಬಿಸಿಎಂ ಹಾಸ್ಟಲ್ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ ನೀಡುತ್ತಿದ್ದೇವೆ. ಆದ್ದರಿಂದ ಪ್ರತಿಯೊಬ್ಬ ಬಿಸಿಎಂ ಹಳೆಯ ವಿದ್ಯಾರ್ಥಿಗಳು ಸ್ವಯಂಪ್ರೇರಿತರಾಗಿ ಕಾರ್ಯಕ್ರಮಕ್ಕೆ ಬಂದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಶಿವಸ್ವಾಮಿ ತಿಳಿಸಿದರು.

ಸಭೆಯಲ್ಲಿ ಹಳೆಯ ವಿದ್ಯಾರ್ಥಿಗಳಾದ ಬಸವರಾಜು, ಮಹದೇವ ಆರ್., ಮಂಜುನಾಥ, ಜವರಪ್ಪ, ಬಿ.ಪಿ.ರಾಜೇಶ, ಜೆ.ಕೆ.ರಮೇಶ್‌ಗೌಡ, ಕೆ.ಹುಚ್ಚೇಗೌಡ, ಡಾ.ಆನಂದ, ಡಾ.ನಾಗೇಶ್ ಕೃಷ್ಣ ಸೇರಿದಂತೆ ಎಲ್ಲಾ ಪಾಲ್ಗೊಂಡಿದ್ದರು.

ಜನಹಿತ ಸಂಘದ ನೂತನ ಪದಾಧಿಕಾರಿಗಳ ಆಯ್ಕೆ...



ಮೈಸೂರಿನ ಬೋಗಾದಿ ಎರಡನೇ ಹಂತದಲ್ಲಿರುವ ಜನಹಿತ ಸಂಘದ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಕುಳಿತಿರುವವರು: ಎಸ್.ರಾಮದಾಸ್ (ಖಜಾಂಚಿ), ಜಾರ್ಜ್ ಮೈಸ್ಕರೇನ್ಹಸ್ (ಉಪಾಧ್ಯಕ್ಷ), ಎಸ್.ಜವರಪ್ಪ(ಅಧ್ಯಕ್ಷ) ಮತ್ತು ಲಕ್ಷ್ಮಿ ಜೆ.(ಕಾರ್ಯದರ್ಶಿ), ನಿಂತಿರುವವರು: ಎಂ.ಎಸ್.ಶಂಕರನಾರಾಯಣ, ಅಮಿತ್ ಎಲ್.ಡೊಯ್ಜೋಡೆ, ಅಂಬಿಕಾ ವೆಂಕಟೇಶ್, ಬಸಪ್ಪ ಸಿ. ಸಾಲುಂಡಿ ಮತ್ತು ಲೋಕೇಶ್ (ಸಮಿತಿ ಸದಸ್ಯರು).

ಹಾಸನ ಜಿಲ್ಲಾ ಬಳಗದಿಂದ ಪ್ರತಿಭಾ ಪುರಸ್ಕಾರ

ಮೈಸೂರು,ಸೆ.23– ಈ ಸಾಲಿನ ಎಸ್‌ಎಸ್‌ಎಲ್‌ಸಿ, ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ಹಾಸನ ಜಿಲ್ಲಾ ವಿದ್ಯಾರ್ಥಿಗಳಿಗೆ ಹಾಸನ ಜಿಲ್ಲಾ ಬಳಗವು ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ಮೈಸೂರು ಜಿಲ್ಲೆಯಲ್ಲಿ ವಾಸವಿದ್ದು, ಮೈಸೂರು ಜಿಲ್ಲೆಯಲ್ಲೇ ಪರೀಕ್ಷೆ ಬರೆದಿರಬೇಕು. ವಿದ್ಯಾರ್ಥಿ ಪೋಷಕರು ಹಾಸನ ಜಿಲ್ಲಾ ಬಳಗದ ಖಾಯಂ ಸದಸ್ಯರಾಗಿರಬೇಕು. ಅಂತಹ ವಿದ್ಯಾರ್ಥಿಗಳು ಬಿ.ಜಿ.ರಂಗೇಗೌಡ, ನಂ.11488, ವಿಜಯನಗರ 1ನೇ ಹಂತ, ಮೈಸೂರು ಅವರಿಗೆ ಅರ್ಜಿಯೊಂದಿಗೆ ಅಂಕ ಪಟ್ಟಿ ದೃಢೀಕೃತ ಪ್ರತಿ, ಖಾಯಂ ಸದಸ್ಯತ್ವ ಹೊಂದಿರುವ ರಶೀದಿ ನಕಲು ಪ್ರತಿಯನ್ನು ಅ.31ರೊಳಗೆ ಕಳುಹಿಸಲು ಕೋರಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ.9886647852 ಸಂಪರ್ಕಿಸಬಹುದು.

ಶಾಸಕ ಸ್ಥಾನದ ಜೊತೆ ಸಾರ್ವಜನಿಕ ಜೀವನಕ್ಕೂ ಮುನಿರತ್ನ ಮಾರಕ

ಕೆಪಿಸಿಸಿ ಸದಸ್ಯ ಎಸ್.ರಾಕೇಶ್‌ಕುಮಾರ್ ಖಂಡನೆ

ಮೈಸೂರು,ಸೆ.23– ಶಾಸಕ ಮುನಿರತ್ನ ದಲಿತ ಸಮುದಾಯ ಹಾಗೂ ಮಹಿಳೆಯರ ಬಗ್ಗೆ ನೀಡಿರುವ ಅವಹೇಳನಕಾರಿ ಹೇಳಿಕೆಯನ್ನು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಪರಿಶಿಷ್ಟ ವಿಭಾಗದ ಮಾಧ್ಯಮ ವಕ್ತಾರ, ರಾಜ್ಯ ಕಾರ್ಯಕಾರಿಣಿ ಸದಸ್ಯ ಎಸ್.ರಾಕೇಶ್ ಕುಮಾರ್ ಖಂಡಿಸಿದ್ದಾರೆ. ಮುನಿರತ್ನ ಶಾಸಕ ಸ್ಥಾನಕ್ಕೆ ರಾಜೀನಾಮೆ ಕೊಟ್ಟು ಸಾರ್ವಜನಿಕ ಜೀವನದಿಂದಲೇ ದೂರ ಉಳಿಯಬೇಕು. ಅವರ ಹೇಳಿಕೆ ಬಿಜೆಪಿ ಸಂಸ್ಕೃತಿ ಹಾಗೂ ಸದರಿ ಪಕ್ಷದಲ್ಲಿ ದಲಿತ ಸಮುದಾಯಕ್ಕೆ ನೀಡಿರುವ ಗೌರವವನ್ನು ತೋರಿಸುತ್ತದೆ. ಈ ಕೂಡಲೇ ಶಿಸ್ತಿನ ಪಕ್ಷ ಎಂದು ಸ್ವಯಂ ಘೋಷಿಸಿಕೊಂಡಿರುವ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ, ಮುನಿರತ್ನರನ್ನು ಪಕ್ಷದಿಂದ ಉಚ್ಚಾಟಿಸಬೇಕು ಎಂದು ಆಗ್ರಹಿಸಿದ್ದಾರೆ.

ಗಂಗಾರತಿ, ಕಾವೇರಿ ಆರತಿ ಬಿಜೆಪಿಯವರ ಗುತ್ತಿಗೆಯಲ್ಲ!

ಕೃಷಿ ಸಚಿವ ಚಲುವರಾಯಸ್ವಾಮಿ, ವಿಪಕ್ಷ ನಾಯಕ ಆರ್.ಅಶೋಕ್‌ಗೆ ತಿರುಗೇಟು





ಬೆಂಗಳೂರು,ಸೆ.23.(ಕೆಎಂಶಿ)– ಹಿಂದೂ ಧಾರ್ಮಿಕ ಆಚರಣೆ, ಹಿಂದೂ ಸಂಪ್ರದಾಯಗಳು ಗಂಗಾರತಿ, ಕಾವೇರಿ ಆರತಿ ಬಿಜೆಪಿಯವರ ಗುತ್ತಿಗೆ ಅಲ್ಲ ಎಂದು ಕಾವೇರಿ ಆರತಿ ಸಮಿತಿ ಅಧ್ಯಕ್ಷ, ಕೃಷಿ ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವರೂ ಆದ ಎನ್.ಚಲುವರಾಯಸ್ವಾಮಿ ತಿರುಗೇಟು ನೀಡಿದ್ದಾರೆ.

ಈ ಸಂಬಂಧ ಹೇಳಿಕೆ ಬಿಡುಗಡೆ ಮಾಡಿರುವ ಅವರು, ಅನಾದಿ ಕಾಲದಿಂದ ನಮ್ಮ ಪೂರ್ವಜರು ಸಂಪ್ರದಾಯ ಆಚರಣೆ ಮಾಡಿಕೊಂಡು ಬರುತ್ತಿದ್ದಾರೆ, ವಾರಾಣಸಿ, ಹರಿದ್ವಾರದಲ್ಲಿ ಈ ಆಚರಣೆ ನೂರಾರು ವರ್ಷಗಳಿಂದ ನಡೆದುಕೊಂಡು ಬರುತ್ತಿದೆ ಎಂದಿದ್ದಾರೆ.

ಬಿಜೆಪಿ, ಹಿಂದೂ ಮಹಾಸಭಾದಂತಹ ಸಂಘಟನೆಗಳು ಹುಟ್ಟುವುದಕ್ಕೂ ಮೊದಲೇ ಧಾರ್ಮಿಕ ಆಚರಣೆಗಳು ನಡೆಯುತ್ತಿವೆ. ಈ ಮೊದಲು ಗಂಗಾರತಿ, ಅಯೋಧ್ಯೆಯೂ ಮೊದಲೇ ಇದ್ದವು. ಇವೆಲ್ಲವೂ ಬಿಜೆಪಿ ಬಂದ ಮೇಲೆ ಬಂದಿದ್ದಲ್ಲ, ಸಂಪ್ರದಾಯ, ಧಾರ್ಮಿಕ ಆಚರಣೆಗಳು ಬಿಜೆಪಿ ಮತ್ತು ವಿಪಕ್ಷ ನಾಯಕ ಆರ್.ಅಶೋಕ್ ಅವರ ಗುತ್ತಿಗೆ ಅಲ್ಲ. ಕಾಂಗ್ರೆಸ್ ಎಲ್ಲ ಪರಂಪರೆ ಮುಂದುವರಿಸಿಕೊಂಡು ಬರುತ್ತಿರುವುದಕ್ಕೆ ಬಿಜೆಪಿಯವರು ಈ ವಿಷಯದ ಬಗ್ಗೆ ಮಾತನಾಡುತ್ತಿದ್ದಾರೆ. ತಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳುವ ಕೆಲಸ ಮಾಡುತ್ತಿದ್ದಾರೆ. ಧಾರ್ಮಿಕ ಆಚರಣೆ ನೆಪದಲ್ಲಿ ಕಿಡಿಗೇಡಿ ಕೆಲಸ ಮಾಡಿದರೆ ಕಾನೂನು ಕ್ರಮ ಕೈಗೊಳ್ಳುವುದು ಆಯಾ ಸರ್ಕಾರಗಳ ಜವಾಬ್ದಾರಿ. ಯಾರ ಸರ್ಕಾರವೇ ಇರಲಿ, ಕಾನೂನುಬಾಹಿರ ಘಟನೆಗಳು ನಡೆದಾಗ ಕ್ರಮ ತೆಗೆದುಕೊಳ್ಳಲಾಗುತ್ತದೆ.

ಗಣೇಶ ಕಾರ್ಯಕ್ರಮವಾಗಲೀ ಅಥವಾ ಇನ್ಯಾವುದೇ ಕಾರ್ಯಕ್ರಮಗಳಾಗಲೀ, ನೆಲದ ಕಾನೂನು ಗೌರವಿಸುವುದು ಪ್ರತಿಯೊಬ್ಬರ ಕರ್ತವ್ಯ, ಅದನ್ನು ಪಾಲನೆ ಮಾಡಲಾಗಿದೆ. ವ್ಯಂಗ್ಯವಾಡುವುದು ಮಾಜಿ ಡಿಸಿಎಂ ಹಾಗೂ ಗೃಹ ಸಚಿವರಾಗಿದ್ದ ಅಶೋಕ್ ಅವರಿಗೆ ಶೋಭೆ ತರುವುದಿಲ್ಲ.

ಗಂಗಾರತಿ, ದಸರಾ ಆಚರಣೆ, ಜಾತ್ರೆ ಸಮಾರಂಭಗಳನ್ನೂ ಬಿಜೆಪಿಯವರು ತಮ್ಮ ಸ್ವತ್ತು ಎಂಬಂತೆ ನೋಡುತ್ತಾರೆ, ಇದು ನೆಲದ ವಾಸಿಗಳ ಹಕ್ಕು, ಉತ್ತರ ಭಾರತದಲ್ಲಿ ಮಾಡುತ್ತಿರುವುದನ್ನು ದಕ್ಷಿಣ ಭಾರತದಲ್ಲೂ ವ್ಯವಸ್ಥಿತವಾಗಿ ಮಾಡಬೇಕು ಎಂಬುದು ಸರ್ಕಾರದ ಉದ್ದೇಶ.


ಕಾವೇರಿ ಆರತಿ ಕಾರ್ಯಕ್ರಮವನ್ನು ಅಶೋಕ್ ಅವರು ಅಭಿನಂದಿಸುತ್ತಾರೆ, ಪ್ರಶಂಸಿಸುತ್ತಾರೆ ಎಂದು ಭಾವಿಸಿದ್ದೆವು. ಆದರೆ ಅವರು ಟೀಕೆ ಮಾಡುತ್ತಾರೆ ಎಂದರೆ ಅವರಿಗಿರುವ ಕಾಳಜಿ ತೋರುತ್ತದೆ.

ಬಿಜೆಪಿಯವರ ಈ ವರ್ತನೆ ಗಮನಿಸಿದರೆ, ಧಾರ್ಮಿಕ ವಿರೋಧಿಗಳು ಎಂಬಂತಾಗುತ್ತದೆ, ಎಲ್ಲ ವಿಷಯಕ್ಕೂ ರಾಜಕೀಯ ಬಣ್ಣ ಲೇಪನ ಮಾಡುತ್ತಾರೆ. ಇದು ಕೀಳು ಮಟ್ಟದ ಮನಸ್ಥಿತಿ, ಕೇವಲ ಘೋಷಣೆ ಕೂಗಿದರೆ, ಕೇಸರಿ ಶಾಲು ಹಾಕಿಕೊಂಡರೆ, ಮೆರವಣಿಗೆ ಮಾಡಿದರೆ ಹಿಂದುತ್ವ ಅಲ್ಲ. ವ್ಯವಸ್ಥಿತವಾಗಿ ಆಚರಣೆ ಮಾಡುವ ಮೂಲಕ ಧಾರ್ಮಿಕ ಆಚರಣೆ ಮತ್ತು ಸಂಸ್ಕಾರಗಳನ್ನು ಮುಂದಿನ ಪೀಳಿಗೆಗೆ ತೆಗೆದುಕೊಂಡು ಹೋಗುವುದು ಮುಖ್ಯ.

ಈ ಕೆಲಸವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾಡುತ್ತಿದ್ದಾರೆ. ಇದನ್ನು ಅಭಿನಂದಿಸುವ ಕೆಲಸ ಮೊದಲು ಮಾಡಿ, ನಿಜವಾದ ಸಂಸ್ಕಾರವಂತರಾದರೆ ಬೆಂಬಲಿಸಬೇಕಿತ್ತು, ಸಂಸ್ಕಾರ ಇದ್ದಂತೆ ಕಾಣುತ್ತಿಲ್ಲ ಎಂದು ಟೀಕಿಸಿದ್ದಾರೆ.

ಕಾವೇರಿ ಆರತಿ ಹೆಸರಲ್ಲಿ ಜನರ ತೆರಿಗೆ ಹಣ ಪೋಲು

ಟ್ವೀಟ್ ಮೂಲಕ ವಿಪಕ್ಷ ನಾಯಕ ಆರ್.ಅಶೋಕ್ ಆರೋಪ



ಬೆಂಗಳೂರು,ಸೆ23.(ಕೆಎಂಶಿ)–ಗಂಗಾ ಆರತಿ ಮಾದರಿಯಲ್ಲಿ ಕಾವೇರಿ ಆರತಿ ಕಾರ್ಯಕ್ರಮ ಹೆಸರಿನಲ್ಲಿ ರಾಜ್ಯ ಸರ್ಕಾರ ಸಾರ್ವಜನಿಕರ ತೆರಿಗೆ ಹಣ ಪೋಲು ಮಾಡುತ್ತಿದೆ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಆರೋಪಿಸಿದ್ದಾರೆ.

ಈ ಸಂಬಂಧ ಟ್ವೀಟ್ ಮಾಡಿರುವ ಅವರು, ಈಗಾಗಲೇ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ನೇತೃತ್ವದಲ್ಲಿ ಮಂಡ್ಯ, ಮೈಸೂರು ಭಾಗದ ಶಾಸಕರು, ವಿಧಾನಪರಿಷತ್ ಸದಸ್ಯರು, ಕಾವೇರಿ ಅಭಿವೃದ್ಧಿ ನಿಗಮದ ಹಿರಿಯ ಅಧಿಕಾರಿಗಳು ಮೂರು ದಿನಗಳ ಹರಿದ್ವಾರ ಹಾಗೂ ಕಾಶಿ ಭೇಟಿ ನೀಡಿ ಅಧ್ಯಯನ ನಡೆಸಿ ಬಂದಿದ್ದು, ಈಗ ಮತ್ತೊಮ್ಮೆ ಅಧಿಕಾರಿಗಳ ನಿಯೋಗ ಕಳುಹಿಸುತ್ತಿರುವುದು ಹಣದ ಲೂಟಿ ಕಾರ್ಯಕ್ರಮವಾಗಿದೆ ಎಂದಿದ್ದಾರೆ. ಅಧಿಕಾರಿಗಳ ನಿಯೋಗ ಮತ್ತೊಮ್ಮೆ ಕಳುಹಿಸುವುದಾದರೆ, ಸಚಿವರು ತಮ್ಮ ತಂಡದೊಂದಿಗೆ ಹರಿದ್ವಾರ ಹಾಗೂ ಕಾಶಿಗೆ ತೆರಳಿ ಸರ್ಕಾರಿ ಹಣದಲ್ಲಿ ಮೋಜು–ಮಸ್ತಿ ಮಾಡಿದ್ದಾರೆಯೇ.

ಅಯೋಧ್ಯೆ ರಾಮಮಂದಿರದ ಉದ್ಘಾಟನೆ ವೇಳೆ 30 ವರ್ಷ ಹಳೆ ಮೊಕದ್ದಮೆಗಳನ್ನು ರೀ–ಓಪನ್ ಮಾಡಿ ಕರಸೇವಕರನ್ನು ಜೈಲಿಗೆ ಹಾಕಿದ್ದ, ಗಣೇಶ ಮೂರ್ತಿಯನ್ನೇ ಪೊಲೀಸ್ ವ್ಯಾನ್‌ಗೆ ಹತ್ತಿಸಿದ, ನಾಗಮಂಗಲದಲ್ಲಿ ಗಣೇಶ ವಿಸರ್ಜನೆ ವೇಳೆ ನಡೆದ ಕೋಮುದಳ್ಳುರಿಯನ್ನು ಸಣ್ಣ ಘಟನೆ, ಆಕಸ್ಮಿಕ ಘಟನೆ ಎಂದು ತಿಪ್ಪೆ ಸಾರಿಸಿದ ಕಾಂಗ್ರೆಸ್ ಸರ್ಕಾರ ಈಗ ದಿಢೀರನೆ ಹಿಂದೂ ಧರ್ಮ, ಹಿಂದೂಗಳ ಆಚಾರ–ವಿಚಾರ, ಸಂಪ್ರದಾಯ–ಪರಂಪರೆ ಬಗ್ಗೆ ಎಲ್ಲಿಲ್ಲದ ಆಸಕ್ತಿ ತೋರುವ ನಾಟಕ ಮಾಡುತ್ತಿದೆ. ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೇ, ನಿಮಗೆ ನಿಜವಾಗಿಯೂ ದೇಶ, ಧರ್ಮದ ಬಗ್ಗೆ ಕಿಂಚಿತ್ತಾದರೂ ಕಾಳಜಿ ಇದ್ದರೆ, ಮೊದಲು ವಿಧಾನಸೌಧದಲ್ಲಿ ಪಾಕಿಸ್ತಾನ ಜಿಂದಾಬಾದ್ ಘೋಷಣೆ ಕೂಗಿದ, ನಾಗಮಂಗಲದಲ್ಲಿ, ದಾವಣಗೆರೆಯಲ್ಲಿ ಗಣೇಶ ವಿಸರ್ಜನೆ ವೇಳೆ ಗಲಭೆ ಎಬ್ಬಿಸಿದ, ಚಿಕ್ಕಮಗಳೂರಿನಲ್ಲಿ ಪ್ಯಾಲೆಸ್ಟೈನ್ ಧ್ವಜ ಹಿಡಿದು ಪುಂಡಾಟಿಕೆ ಮಾಡಿದ ನಿಮ್ಮ ಬ್ರದರ್ಸ್‌ಗಳನ್ನು ಒಳಗೆ ಹಾಕಿ. ಅದು ಬಿಟ್ಟು ಬರೀ ತೋರಿಕೆಗೆ ಕಾವೇರಿ ಆರತಿ ಮಾಡುವ ನಾಟಕದಿಂದ ತಾಯಿ ಕಾವೇರಿ ಮೆಚ್ಚುವುದಿಲ್ಲ ಎಂದಿದ್ದಾರೆ.

ಹೊಯ್ಸಳ, ಕೆಳದಿ ಚೆನ್ನಮ್ಮ ಪ್ರಶಸ್ತಿಗಾಗಿ ಅರ್ಜಿ ಆಹ್ವಾನ

ಮೈಸೂರು,ಸೆ.23– ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಹೊಯ್ಸಳ ಮತ್ತು ಕೆಳದಿ ಚೆನ್ನಮ್ಮ ಯೋಜನೆಯಡಿ ಅಸಾಧಾರಣ ಸಾಧನೆ ಮಾಡಿದ ಮಕ್ಕಳಿಗೆ ಜಿಲ್ಲಾ ಮಟ್ಟದಲ್ಲಿ ನೀಡುವ ಪ್ರಶಸ್ತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಯಾವುದೇ ಕ್ಷೇತ್ರದಲ್ಲಿ ನಾವೀನ್ಯತೆ ವಿನ್ಯಾಸ ಒಳಗೊಂಡಂತೆ, ತಾರ್ಕಿಕ ಸಾಧನೆಗಳು ಕ್ರೀಡೆ, ಕಲೆ, ಸಾಂಸ್ಕೃತಿಕ, ಸಂಗೀತ ಕ್ಷೇತ್ರಗಳಲ್ಲಿ ಅಸಾಧಾರಣ ಪ್ರತಿಭೆಯುಳ್ಳ 5ರಿಂದ 18 ವರ್ಷದೊಳಗಿನ ಮಕ್ಕಳು ವಿಜಯನಗರ 2ನೇ ಹಂತದಲ್ಲಿರುವ ಮಹಿಳಾ–ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರ ಕಚೇರಿಯಲ್ಲಿ ಪಡೆದು, ಭರ್ತಿ ಮಾಡಿದ ಅರ್ಜಿಗಳನ್ನು ಸೆ.30ರೊಳಗೆ ಪತ್ರಾಂಕಿತ ಅಧಿಕಾರಿಗಳಿಂದ ದೃಢೀಕರಿಸಿ ಅಗತ್ಯ ದಾಖಲೆಗಳೊಂದಿಗೆ ಕಚೇರಿಗೆ ಸಲ್ಲಿಸಬೇಕು. ಜಿಲ್ಲಾ ಮಟ್ಟದ ಪ್ರಶಸ್ತಿಗೆ ಆಯ್ಕೆಯಾದ ಮಕ್ಕಳಿಗೆ ತಲಾ ರೂ.10,000 ನಗದು ಬಹುಮಾನ ಹಾಗೂ ಪ್ರಶಸ್ತಿ ಪ್ರಮಾಣ ಪತ್ರ ನೀಡಲಾಗುವುದು. ಹಿಂದಿನ ವರ್ಷಗಳಲ್ಲಿ ತಮ್ಮ ಪ್ರಸ್ತಾವನೆಯು ಪ್ರಶಸ್ತಿಗೆ ಪರಿಗಣಿಸಲ್ಪಟ್ಟಿದ್ದಲ್ಲಿ, ಮತ್ತೊಮ್ಮೆ ಸಲ್ಲಿಸಲು ಅವಕಾಶವಿರುವುದಿಲ್ಲ. ಮಕ್ಕಳು ಪ್ರತಿಭೆ ಹೊಂದಿರುವ ಬಗ್ಗೆ ಪ್ರಮುಖ ದಿನಪತ್ರಿಕೆಗಳಲ್ಲಿ ಪ್ರಕಟವಾಗಿರುವ ಪತ್ರಿಕೆಗಳ ತುಣುಕುಗಳನ್ನು ಹಾಗೂ ಪಡೆದುಕೊಂಡಿರುವ ಪ್ರಶಸ್ತಿ ಪ್ರಮಾಣ ಪತ್ರಗಳ ಪ್ರತಿಗಳನ್ನು ಲಗತ್ತಿಸಿರಬೇಕು. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 2495432 ಅನ್ನು ಸಂಪರ್ಕಿಸಬಹುದು.

ಸೆ.26ರಂದು ಕ್ಯಾನ್ಸರ್ ಉಚಿತ ತಪಾಸಣಾ ಶಿಬಿರ

ಮೈಸೂರು,ಸೆ.23–ಮೈಸೂರಿನ ಪ್ರೀತಿ ಕ್ಯಾನ್ಸರ್ ಸೆಂಟರ್‌ನಲ್ಲಿ ಸೆ.26ರಂದು ಬೆಳಗ್ಗೆ 10ರಿಂದ ರಾತ್ರಿ 8ರವರೆಗೆ ಕ್ಯಾನ್ಸರ್ ಉಚಿತ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ದೂ. 0821–4259259 ಸಂಪರ್ಕಿಸಬಹುದು.

ಕಾರ್ಮಿಕ ವಿರೋಧಿ ಕಾನೂನು ರದ್ದುಗೊಳಿಸಲು ಆಗ್ರಹಿಸಿ ಪ್ರತಿಭಟನೆ



ಕೇಂದ್ರ ಸರ್ಕಾರ ರೂಪಿಸಿರುವ ಕಾರ್ಮಿಕ ವಿರೋಧಿಯ ಲೇಬರ್ ಕೋಡ್‌ಗಳನ್ನು ರದ್ದುಗೊಳಿಸುವಂತೆ ಆಗ್ರಹಿಸಿ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ(ಜೆಸಿಟಿಯು) ವತಿಯಿಂದ ಗಾಂಧಿ ಚೌಕದಲ್ಲಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು,ಸೆ.23(ಜಿಎ)–ಕೇಂದ್ರ ಸರ್ಕಾರ ರೂಪಿಸಿರುವ ಕಾರ್ಮಿಕ ವಿರೋಧಿಯ 4 ಲೇಬರ್ ಕೋಡ್‌ಗಳನ್ನು ರದ್ದು ಪಡಿಸಬೇಕೆಂದು ಆಗ್ರಹಿಸಿ ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ(ಜೆಸಿಟಿಯು) ವತಿಯಿಂದ ಮೈಸೂರು ಗಾಂಧಿಚೌಕದಲ್ಲಿ ಪ್ರತಿಭಟನೆ ನಡೆಸಲಾಯಿತು.

ಕೇಂದ್ರ ಸರ್ಕಾರವು ದುಡಿಯುವ ವರ್ಗಕ್ಕೆ ಮಾರಕವಾಗಿರುವ 4 ಕಾರ್ಮಿಕ ಸಂಹಿತೆಗಳಿಗೆ ಸಂಸತ್ತಿನ ಒಪ್ಪಿಗೆಯನ್ನು ಈಗಾಗಲೇ ಹಿಂಪಡೆದುಕೊಂಡಿದೆ. 4 ಸಂಹಿತೆಗಳಲ್ಲಿ ಒಂದನ್ನು 2019ರಲ್ಲಿ ಹಾಗೂ ಉಳಿದ ಮೂರು ಸಂಹಿತೆಗಳನ್ನು 2022ರಲ್ಲಿ ಹಿಂಪಡೆಯಲಾಗಿದೆ. ವಿರೋಧ ಪಕ್ಷದ ಸದಸ್ಯರು ಹಾಜರಿಲ್ಲದ ಸಂದರ್ಭದಲ್ಲಿ ಯಾವುದೇ ಚರ್ಚೆ ನಡೆಸದೇ ಅನುಮೋದಿಸಲಾಗಿದೆ. ಆದ್ದರಿಂದ ಈ ಸಂಹಿತೆಗಳನ್ನು ಜಾರಿಗೆ ತರಲು ಕೇಂದ್ರ ಸರ್ಕಾರ ನಿರಂತರ ಪ್ರಯತ್ನದಲ್ಲಿದ್ದು, ಈ ಸಂಹಿತೆಗಳನ್ನು ಹಿಂಡೆಯಬೇಕೆಂದು ಒತ್ತಾಯಿಸಿದರು. ಪ್ರತಿಭಟನೆಯಲ್ಲಿ ಎನ್.ಕೆ.ಬಾಲಾಜಿ ರಾವ್, ಎನ್.ಕೆ.ದೇವದಾಸ್, ಮುದ್ದುಕೃಷ್ಣ, ಜವರಯ್ಯ ಸೇರಿದಂತೆ ಮತ್ತಿತರರು ಪಾಲ್ಗೊಂಡಿದ್ದರು.

ಜೀವನಶೈಲಿ ಬದಲಾವಣೆಯಿಂದ ಹೃದ್ರೋಗ ತಡೆಗಟ್ಟಬಹುದು

ನಾರಾಯಣ ಆಸ್ಪತ್ರೆಯಿಂದ ಹೃದ್ರೋಗಿಗಳ ಜೊತೆ ಸಂವಾದದಲ್ಲಿ ಡಾ.ಎಂ.ಎನ್.ರವಿ ಸಲಹೆ



ವಿಶ್ವ ಹೃದಯ ದಿನಾಚರಣೆ ಅಂಗವಾಗಿ ನಾರಾಯಣ ಆಸ್ಪತ್ರೆಯು ಮೈಸೂರಿನ ರಿಯೋ ಮೆರಿಡಿಯನ್ ಸಭಾಂಗಣದಲ್ಲಿ ಏರ್ಪಡಿಸಿದ್ದ ಹೃದ್ರೋಗಿಗಳ ಜೊತೆ ಸಂವಾದ ಹಾಗೂ ಜಾಗೃತಿ ಕಾರ್ಯಕ್ರಮದಲ್ಲಿ ಡಾ.ಎಂ.ಎನ್.ರವಿ ಮಾತನಾಡಿದರು. ಡಾ.ಆನಂದ್ ಲಿಂಗನ್, ವ್ಯಾಸರಾಜ ಸೋಸಲೆ, ಅಂಶಿ ಪ್ರಸನ್ನಕುಮಾರ್, ಡಾ.ಪಿ.ಶ್ರೀನಿವಾಸ್, ಡಾ.ಕೆ.ಜಾವೀದ್ ನಯೀಮ್, ಡಾ.ವಿ. ಕೇಶವಮೂರ್ತಿ, ಬಿ.ಕೆ. ರಂಗನಾಥ್ ಅವರನ್ನು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಸೆ.23– ಜೀವನಶೈಲಿ ಬದಲಾವಣೆಯಿಂದ ಹೃದ್ರೋಗ ತಡೆಗಟ್ಟಬಹುದು ಎಂದು ನಾರಾಯಣ ಆಸ್ಪತ್ರೆಯ ಕ್ಲಿನಿಕಲ್ ಡೈರೆಕ್ಟರ್ ಡಾ.ಎಂ.ಎನ್.ರವಿ ಹೇಳಿದರು.

ವಿಶ್ವ ಹೃದಯ ದಿನಾಚರಣೆ ಅಂಗವಾಗಿ ನಾರಾಯಣ ಆಸ್ಪತ್ರೆಯು ನ್ಯೂ ಸಯ್ಯಾಜಿ ರಾವ್ ರಸ್ತೆಯ ರಿಯೋ ಮೆರಿಡಿಯನ್ ಸಭಾಂಗಣದಲ್ಲಿ ಏರ್ಪಡಿಸಿದ್ದ ಹೃದ್ರೋಗಿಗಳೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ದೇಶದಲ್ಲಿ 2021ರಲ್ಲಿ 28,000 ಮಂದಿ, 2022ರಲ್ಲಿ 33,000 ಮಂದಿ ಹೃದ್ರೋಗದಿಂದ ಸಾವಿಗೀಡಾಗಿದ್ದಾರೆ. ಇದಕ್ಕೆ ಅನುವಂಶೀಯತೆ ಒಂದು ಕಾರಣವಾದರೂ ಜೀವನಶೈಲಿ ಕೂಡ ಹೃದಯದ ಮೇಲೆ ಪರಿಣಾಮ ಬೀರುತ್ತದೆ ಎಂದರು.

ನಾವು ಆಹಾರದಲ್ಲಿ ಪ್ರೋಟಿನ್‌ಗಿಂತ ಕಾರ್ಬೋಹೈಡ್ರೇಟ್ಸ್ ಹೆಚ್ಚು ಉಪಯೋಗಿಸುತ್ತಿದ್ದೇವೆ. ಇದರಿಂದ ದೇಹದಲ್ಲಿ ಕೊಬ್ಬಿನಾಂಶ, ಸೊಂಟದ ಸುತ್ತಳತೆ ಹೆಚ್ಚಾಗುತ್ತದೆ. ಈ ಬಗ್ಗೆ ಪ್ರತಿಯೊಬ್ಬರೂ ಎಚ್ಚರ ವಹಿಸಬೇಕು ಎಂದು ಹೇಳಿದರು.

ಹೃದ್ರೋಗ ವಿಭಾಗದ ನಿರ್ದೇಶಕ ಡಾ.ವಿ.ಕೇಶವಮೂರ್ತಿ ಮಾತನಾಡಿ, ಹೃದಯ ಮಿಡಿದಷ್ಟು ಆರೋಗ್ಯ ಚೆನ್ನಾಗಿರುತ್ತದೆ. ರಕ್ತಸಂಚಲನ ಅದರ ಮುಖ್ಯ ಕಾರ್ಯ. ರಕ್ತಪೂರೈಕೆಯಲ್ಲಿ ಏನಾದರೂ ತೊಂದರೆಯಾಗಿದ್ದರೆ ಮಾತ್ರ ಹೃದ್ರೋಗಕ್ಕೆ ಕಾರಣವಾಗುತ್ತದೆ ಎಂದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಮಾತನಾಡಿ, ಜೀವನಕ್ಕೆ ಮನಸ್ಸು ಮತ್ತು ಹೃದಯ ಮುಖ್ಯ, ಆದ್ದರಿಂದ ಒತ್ತಡ ಕಡಿಮೆ ಮಾಡಿಕೊಳ್ಳಿ. ಚಿಂತನೆ ಮಾಡುವುದು, ಇನ್ನೊಬ್ಬರ ಬಗ್ಗೆ ದ್ವೇಷ, ಅಸೂಯೆ ಬಿಡಿ. ಅಹಂಕಾರ, ಅನುಮಾನವೂ ಬೇಡ. ಚೆನ್ನಾಗಿ ವ್ಯಾಯಾಮ, ನಡಿಗೆ, ಯೋಗ, ಧ್ಯಾನ ಮಾಡಿ. ಮೊಬೈಲ್, ಟಿವಿ ಬಳಕೆ ಕಡಿಮೆ ಮಾಡಿ. ಒಳ್ಳೆಯ ಸ್ನೇಹಿತರಿರಲಿ ಎಂದು ಸಲಹೆ ನೀಡಿದರು.

ಹಿನ್ನೆಲೆ ಗಾಯಕ ವ್ಯಾಸರಾಜ ಸೋಸಲೆ ಮಾತನಾಡಿ, ಚಲನಚಿತ್ರ ಗೀತೆಗಳು, ಶಾಸ್ತ್ರೀಯ ಸಂಗೀತ–ಹೀಗೆ ಯಾವುದೇ ಇರಲಿ ಆಲಿಸಿ. ಇದರಿಂದ ಮನಸ್ಸಿಗೆ ನೆಮ್ಮದಿ. ಒತ್ತಡವೂ ಕಡಿಮೆಯಾಗುತ್ತದೆ ಎಂದರು.

ಹೃದಯ ಕುರಿತು ಬಂದಿರುವ ಕನ್ನಡ ಹಾಗೂ ಹಿಂದಿ ಗೀತೆಗಳನ್ನು ಹಾಡಿದ ಅವರು, ಕನ್ನಡದ ಹೃದಯ, ಹಿಂದಿಯ ದಿಲ್ ಪದ ಇಲ್ಲದೇ ಪ್ರೇಮಗೀತೆಗಳೇ ಇರುವುದಿಲ್ಲ ಎಂದರು.

'ಸ್ಟಾರ್ ಆಫ್ ಮೈಸೂರ್' ಅಂಕಣಕಾರರೂ ಆದ ಡಾ.ಕೆ.ಜಾವೀದ್ ನಯೀಮ್ ಮಾತನಾಡಿ, ಒತ್ತಡ ಕಡಿಮೆ ಮಾಡಿಕೊಳ್ಳುವುದರಿಂದ ಹೃದ್ರೋಗ ನಿಯಂತ್ರಿಸಬಹುದು. ಜೊತೆಗೆ ಆಯಸ್ಸು, ಹಣೆಬರಹ, ಅದೃಷ್ಟ ಕೂಡ ಚೆನ್ನಾಗಿರಬೇಕು ಎಂದು ಹಾಸ್ಯಮಿಶ್ರಿತವಾಗಿ ಹೇಳಿದರು.

ಡಾ.ಆನಂದ್ ಲಿಂಗನ್, ಹೃದ್ರೋಗಿಗಳು ಯಾವ ರೀತಿ ಮುನ್ನೆಚ್ಚರಿಕೆ ವಹಿಸಬೇಕು ಎಂಬುದನ್ನು ವಿವರಿಸಿದರು. ನಂತರ ಹೃದ್ರೋಗದೊಂದಿಗೆ ಬದುಕುವುದು ಹೇಗೆ? ಕುರಿತು ಡಾ.ವಿ. ಕೇಶವಮೂರ್ತಿ, ಆಹಾರ ಸೇವನೆ ಯಾವ ರೀತಿ ಇರಬೇಕು ಕುರಿತು ಲತಾ ಉಪನ್ಯಾಸ ನೀಡಿದರು.

ಪ್ರಜಾಪಿತ ಬ್ರಹ್ಮ ಕುಮಾರೀಸ್‌ನ ಬಿ.ಕೆ. ರಂಗನಾಥ ಅವರು ಆಧ್ಯಾತ್ಮಿಕ ಭಾಷಣ ಮಾಡಿದರು. ಕೊನೆಯಲ್ಲಿ ಭಾಗವಹಿಸಿದ್ದವರ ಜೊತೆ ಸಂವಾದ, ಪ್ರಶ್ನೋತ್ತರ, ಅನಿಸಿಕೆ ಹಂಚಿಕೆ ನಡೆಯಿತು.

ಸಹಾಯ ಧನಕ್ಕೆ ಅರ್ಜಿ ಆಹ್ವಾನ


ಮೈಸೂರು,ಸೆ.23– ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮದ ವತಿಯಿಂದ 2024–25ನೇ ಸಾಲಿನ ಸಫಾಯಿ ಕರ್ಮಚಾರಿ ಮ್ಯಾನ್ಯುಯಲ್ ಸ್ಕಾವೆಂಜರ್ಸ್‌ನ ಹಾಗೂ ಅವರ ಅವಲಂಬಿತರಿಗಾಗಿ ಸ್ವಯಂ ಉದ್ಯೋಗ ಯೋಜನೆ, ಪ್ರೇರಣಾ (ಮೈಕ್ರೊ ಕ್ರೆಡಿಟ್ ಫೈನಾನ್ಸ್) ಯೋಜನೆ, ಸ್ವಾವಲಂಬಿ ಸಾರಥಿ ಯೋಜನೆ, ಪೌರಕಾರ್ಮಿಕ, ಸಫಾಯಿ ಕರ್ಮಚಾರಿ ಮಕ್ಕಳಿಗೆ ಲ್ಯಾಪ್‌ಟಾಪ್ ವಿತರಣೆ ಯೋಜನೆ, ಭೂ ಒಡೆತನ ಯೋಜನೆಗಳಡಿ ಸಹಾಯಧನಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು https://sevasindhuservices.karnataka.gov.in/ ಅಥವಾ ಕರ್ನಾಟಕ ಓನ್, ಗ್ರಾಮ ಓನ್ ಸೇವಾ ಕೇಂದ್ರಗಳಲ್ಲಿ ಅಕ್ಟೋಬರ್ 10 ರೊಳಗೆ ಅರ್ಜಿಯನ್ನು ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 0821–2332480 ಅನ್ನು ಸಂಪರ್ಕಿಸಬಹುದು.

ಸಂಧಿವಾತ, ಮಂಡಿ ನೋವು ಚಿಕಿತ್ಸಾ ಶಿಬಿರ

ಮೈಸೂರು: ಮೈಸೂರಿನ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಲ್ಲಿ ಸೆ.24ರಿಂದ 30ರವರೆಗೆ ಸಂಧಿವಾತ, ಮಂಡಿ ನೋವು, ಕೀಲು ನೋವು ಚಿಕಿತ್ಸಾ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗೆ ಮೊ. 8073028433, ದೂ.0821–2548231 ಸಂಪರ್ಕಿಸಬಹುದು.


ದೇಶ - ವಿದೇಶ

1951ರಲ್ಲಿ ಅಪಹರಣಗೊಂಡಿದ್ದ ಅಮೆರಿಕದ ಬಾಲಕ 73 ವರ್ಷಗಳ ಬಳಿಕ ವಾಪಸ್



ಕ್ಯಾಲಿಫೋರ್ನಿಯಾ: ಸುಮಾರು 70 ವರ್ಷಗಳ ಹಿಂದೆ ಅಪಹರಣಗೊಂಡಿದ್ದ ಆರು ವರ್ಷದ ಬಾಲಕ, ಈಗ ಜೀವಂತ ಪತ್ತೆಯಾಗಿದ್ದಾನೆ. ಆಗ ಬಾಲಕನಾಗಿದ್ದಾತ ಈಗ ಮುದುಕ. ಆದರೂ ಈತನನ್ನು ಅಮೆರಿಕದ ಪೂರ್ವ ಕರಾವಳಿಯಲ್ಲಿ ಪತ್ತೆ ಮಾಡುವಲ್ಲಿ ಕುಟುಂಬದವರು ಸಫಲರಾಗಿದ್ದಾರೆ. 1951ರ ಫೆಬ್ರವರಿ 21ರಂದು ಕ್ಯಾಲಿಫೋರ್ನಿಯಾದ ವೆಸ್ಟ್ ಓಕ್ಲಾಂಡ್‌ನ ಉದ್ಯಾನವೊಂದರಲ್ಲಿ 10 ವರ್ಷದ ಸಹೋದರ ರೋಜರ್ ಜತೆ ಆಟವಾಡುತ್ತಿದ್ದ ಲೂಯಿಸ್ ಅರ್ಮಾಂಡೊ ಆಲ್ಬಿನೊಗೆ ಸಿಹಿ ತಿನಿಸು ಕೊಡಿಸುವ ಆಮಿಷವೊಡ್ಡಿದ್ದ ಮಹಿಳೆಯೊಬ್ಬಳು ಅಪಹರಿಸಿದ್ದಳು. ಆಲ್ಬಿನೊ ಎಲ್ಲಿರಬಹುದು ಎನ್ನುವುದು ದಶಕಗಳ ಕಾಲ ನಿಗೂಢವಾಗಿಯೇ ಉಳಿದಿತ್ತು. ಆಲ್ಬಿನೋನ ಸೋದರ ಸೊಸೆ ಅಲಿಡಾ ಅಲೆಕ್ವಿನ್, ತನ್ನ ಮಾವನನ್ನು ಹೇಗಾದರೂ ಮಾಡಿ ಹುಡುಕಲೇಬೇಕು ಎಂದು ಪಣತೊಟ್ಟಿದ್ದರು. ಅದಕ್ಕಾಗಿ ಡಿಎನ್‌ಎ ಪರೀಕ್ಷೆಗಳು, ಪತ್ರಿಕಾ ವರದಿ ತುಣುಕುಗಳು ಹಾಗೂ ಓಕ್ಲಾಂಡ್ ಪೊಲೀಸ್ ಇಲಾಖೆ, ಎಫ್‌ಬಿಐ, ನ್ಯಾಯಾಂಗ ಇಲಾಖೆ ನೆರವಿನೊಂದಿಗೆ ಅಸಾಧ್ಯ ಎನಿಸಿದ್ದನ್ನು ಸಾಧಿಸಿದ್ದಾರೆ.

ಗುಜರಾತ್‌ನ ಕಛ್‌ನಲ್ಲಿ 3.3 ತೀವ್ರತೆಯ ಭೂಕಂಪನ



ಅಹಮದಾಬಾದ್: ಗುಜರಾತ್‌ನ ಕಛ್ ಜಿಲ್ಲೆಯಲ್ಲಿ ಸೋಮವಾರ ಬೆಳಗ್ಗೆ 3.3 ತೀವ್ರತೆಯ ಭೂ ಕಂಪನ ಸಂಭವಿಸಿದೆ ಎಂದು ಭೂ ಕಂಪನ ಸಂಶೋಧನಾ ಸಂಸ್ಥೆ (ಐಎಸ್‌ಆರ್) ತಿಳಿಸಿದೆ ಭೂಕಂಪನದಿಂದ ಜಿಲ್ಲೆಯಲ್ಲಿ ಯಾವುದೇ ಪ್ರಾಣ ಹಾನಿ ಅಥವಾ ಆಸ್ತಿಪಾಸ್ತಿ ನಷ್ಟ ಸಂಭವಿಸಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಬೆಳಗ್ಗೆ 10.05ರ ವೇಳೆಗೆ ಕಂಪನ ಸಂಭವಿಸಿದ್ದು, ರಾಪರ್‌ನ ಪಶ್ಚಿಮ ನೈರುತ್ಯಕ್ಕೆ 12 ಕಿಮೀ ದೂರದಲ್ಲಿ ಕೇಂದ್ರಬಿಂದು ಪತ್ತೆಯಾಗಿದೆ ಎಂದು ಗಾಂಧಿನಗರ ಮೂಲದ ಐಎಸ್‌ಆರ್ ತಿಳಿಸಿದೆ. ಇದು ಈ ತಿಂಗಳಿನಲ್ಲಿ ಸೌರಾಷ್ಟ್ರ–ಕಚ್ ಪ್ರದೇಶದಲ್ಲಿ ಇಲ್ಲಿಯವರೆಗೂ ದಾಖಲಾದ 3ಕ್ಕಿಂತ ಹೆಚ್ಚು ತೀವ್ರತೆಯ ನಾಲ್ಕನೇ ಕಂಪನವಾಗಿದೆ. ಗುಜರಾತ್‌ನಲ್ಲಿ ಭೂಕಂಪನದ ಅಪಾಯ ತುಂಬಾ ಹೆಚ್ಚಾಗಿದೆ. ಗುಜರಾತ್ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಒದಗಿಸಿದ ಮಾಹಿತಿ ಪ್ರಕಾರ, ಕಳೆದ 200 ವರ್ಷಗಳಲ್ಲಿ ಇಲ್ಲಿ 9 ಪ್ರಮುಖ ಭೂಕಂಪನ ಆಗಿದೆ. 2001ರ ಜನವರಿ 26ರಂದು ಗುಜರಾತ್ ಕಚ್‌ನ ಭಚಾವ್ ಬಳಿ 6.9 ತೀವ್ರತೆಯ ಭೂಕಂಪನ ಆಗಿತ್ತು. ಇದು ಇಡೀ ರಾಜ್ಯದ ಮೇಲೆ ಪರಿಣಾಮ ಬೀರಿತು.

ಟಿಕೆಟ್ ಇಲ್ಲದೆ ಟ್ರೈನ್ ಹತ್ತಿದ ಅಳಿಲು, ರೈಲು ಪ್ರಯಾಣ ರದ್ದು




ಲಂಡನ್: ಒಂದು ಅಳಿಲಿನ ಕಾರಣದಿಂದ ರೈಲು ರದ್ದಾದ ಘಟನೆ ನಡೆದಿದೆ. ಟಿಕೆಟ್ ಇಲ್ಲದೆ ಅಳಿಲು ರೈಲು ಹತ್ತಿದೆ. ಪರಿಣಾಮ ರೈಲು ರದ್ದುಗೊಳಿಸಲಾಗಿದೆ. ಸಣ್ಣ ಅಳಿಲು ರೈಲಿನ ಬೋಗಿ ಹತ್ತಿ ಅತ್ತಿದಿಂದಿತ್ತ ಓಡಾಡಿದೆ. ಇಷ್ಟೇ ನೋಡಿ. ಅಧಿಕಾರಿಗಳು ಬೇರೆ ದಾರಿ ಕಾಣದೆ ರೈಲು ಪ್ರಯಾಣ ರದ್ದು ಮಾಡಿದ್ದಾರೆ. ಬಳಿಕ ಈ ರೈಲಿನಲ್ಲಿ ಸೀಟು ಕಾಯ್ದಿರಿಸಿದ ಪ್ರಯಾಣಿಕರಿಗೆ ಬೇರೆ ವಿಶೇಷ ರೈಲು ನೀಡಿದ ಘಟನೆ ಬ್ರಿಟನ್‌ನ ಗೇಟ್‌ವಿಕ್‌ನಲ್ಲಿ ನಡೆದಿದೆ. ರೈಲು ಪ್ರಯಾಣಿಕರನ್ನು ಹೊತ್ತ ರೈಲು ರೆಡ್‌ಹಿಲ್ ನಿಲ್ದಾಣಕ್ಕೆ ಆಗಮಿಸಿತ್ತು. ಇನ್ನೇನು ರೈಲು ಹೊರಡಬೇಕು ಅನ್ನುವಷ್ಟರಲ್ಲಿ ರೈಲಿನ ಬೋಗಿಯೊಳಗೆ ಅಳಿಲು ಹತ್ತಿದೆ. ಪ್ರಯಾಣಿಕರನ್ನು ಹೊರಗೆ ಇಳಿಯಲು ಸೂಚಿಸಿದ ಅಧಿಕಾರಿಗಳು, ಅಳಿಲನ್ನು ಹೊರಗೆ ಓಡಿಸಲು ಪ್ರಯತ್ನಪಟ್ಟಿದ್ದಾರೆ. ಎಷ್ಟೇ ಪ್ರಯತ್ನಪಟ್ಟರೂ ಅಳಿಲು ಮಾತ್ರ ಹೊರಗೆ ಹೋಗಿಲ್ಲ. ರೈಲು ಹೊರಡಬೇಕಾದ ಸಮಯ ಕಳೆದಿದೆ. ಆದರೆ ಅಳಿಲು ಮಾತ್ರ ಬೋಗಿಯೊಳಗೆ ಸುತ್ತು ಹೊಡೆದಿದೆ. ವಿಳಂಬಗೊಂಡ ಕಾರಣ ಬೇರೆ ಅನಾಹುತಕ್ಕೆ ಕಾರಣವಾಗಲಿದೆ ಅನ್ನೋ ಕಾರಣಕ್ಕೆ ರೈಲನ್ನೇ ರದ್ದುಗೊಳಿಸಲಾಗಿದೆ. ಈ ಘಟನೆಯನ್ನು ರೈಲು ಅಧಿಕಾರಿ ತಮಾಷೆಯಾಗಿ ಹೇಳಿಕೊಂಡಿದ್ದಾರೆ.

ಶ್ರೀಮಂತ ಕುಟುಂಬದ ಮಹಿಳೆಯನ್ನು ಪ್ರೆಗ್ನೆಂಟ್ ಮಾಡಿದರೆ 5 ಲಕ್ಷ ರೂ. ಬಹುಮಾನ

ನವದೆಹಲಿ: ಕಂಪನಿಯೊಂದು ಪುರುಷರಿಗೆ ಆಫರ್ ನೀಡಿದ್ದು, ಮಹಿಳೆಯನ್ನು ಗರ್ಭಿಣಿಯನ್ನಾಗಿಸಿದರೆ 5 ಲಕ್ಷ ರೂ. ಹಣ ನೀಡುವುದಾಗಿ ಜಾಹೀರಾತು ನೀಡಿದೆ. ಪ್ರಯಾಗ್‌ರಾಜ್ ಪ್ರದೇಶದ ಮೌಯಿಮಾದ ಬಕ್ರಾಬಾದ್‌ನಲ್ಲಿ ಈ ವಿಚಿತ್ರ ಜಾಹೀರಾತು ಪ್ರಕರಣ ಬೆಳಕಿಗೆ ಬಂದಿದೆ. ಶ್ರೀಮಂತ ಕುಟುಂಬದ ಹೆಣ್ಣು ಮಕ್ಕಳನ್ನು ಗರ್ಭಿಣಿಯನ್ನಾಗಿಸಿದರೆ 5 ಲಕ್ಷ ರೂ. ನೀಡಲಾಗುವುದು ಎಂಬ ಜಾಹೀರಾತು ಸೋಶಿಯಲ್ ಮೀಡಿಯಾದಲ್ಲಿ ವೈರಲ್ ಆಗಿತ್ತು ಜಾಹೀರಾತು ನಂಬಿದ ಅಲ್ತಾಫ್, ಅಲ್ಲಿದ್ದ ನಂಬರ್‌ಗೆ ಕರೆ ಮಾಡಿದ್ದಾರೆ. ಕರೆ ಸ್ವೀಕರಿಸಿದವರು ನೋಂದಣಿ ಶುಲ್ಕವಾಗಿ 800 ರೂ. ಪಾವತಿಸುವಂತೆ ಹೇಳಿದ್ದಾರೆ. ನಂತರ ಜಾಹೀರಾತುದಾರರು ಹೇಳಿದಂತೆ ಕೊಂಚವೂ ಯೋಚನೆ ಮಾಡದೇ ಒಟ್ಟು 24,000 ರೂ. ವರ್ಗಾಯಿಸಿದ್ದಾನೆ. ಇದಾದ ಬಳಿಕ ಮತ್ತೆ ಅಲ್ತಾಫ್‌ಗೆ ಕರೆ ಮಾಡಿ 3 ಲಕ್ಷ ರೂ. ಜಮೆ ಮಾಡುವಂತೆ ಸೂಚಿಸಿದ್ದಾರೆ. ಹೆಚ್ಚುವರಿ ಹಣ ಕೇಳಲು ಆರಂಭಿಸುತ್ತಿದ್ದಂತೆ ತಾನು ಮೋಸ ಹೋಗುತ್ತಿರೋದಾಗಿ ಗೊತ್ತಾಗಿದೆ. ಹೆಚ್ಚುವರಿ ಹಣ ನೀಡಲು ಅಲ್ತಾಫ್ ನಿರಾಕರಿಸಿದಾಗ, ಅಧಿಕಾರಿಗಳು ಮತ್ತು ಪೊಲೀಸರ ಪ್ರೊಫೈಲ್ ಫೋಟೋ ಕಳುಹಿಸಿ ಬೆದರಿಕೆ ಹಾಕಿದ್ದಾರೆ. ಹಣ ವರ್ಗಾವಣೆ ಮಾಡದಿದ್ದರೆ ಮೊಕದ್ದಮೆ ಹೂಡಿ ಜೈಲಿಗೆ ಕಳುಹಿಸಲಾಗುವುದು ಎಂದು ಬೆದರಿಸಿದ್ದಾರೆ. ಸೈಬರ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ವೈಮಾನಿಕ ದಾಳಿಯಲ್ಲಿ ಹಮಾಸ್ ನಾಯಕ ಯಾಹ್ಯಾ ಸಾವು?



ಗಾಜಾಪಟ್ಟಿ/ಇಸ್ರೇಲ್: ಇತ್ತೀಚೆಗೆ ನಡೆದ ವೈಮಾನಿಕ ದಾಳಿಯಲ್ಲಿ ಹಮಾಸ್ ನಾಯಕ ಯಾಹ್ಯಾ ಸಿನ್ವಾರ್ ಹತ್ಯೆಗೀಡಾಗಿದ್ದಾರೆಂಬ ಊಹಾಪೋಹದ ಬಗ್ಗೆ ಇಸ್ರೇಲ್ ತನಿಖೆ ನಡೆಸುತ್ತಿರುವುದಾಗಿ ವರದಿ ತಿಳಿಸಿದೆ.

ಇಸ್ರೇಲ್ ಮಾಧ್ಯಮಗಳ ವರದಿ ಪ್ರಕಾರ, ಯಾಹ್ಯಾ ಸಿನ್ವಾರ್ ಸಾವಿಗೀಡಾಗಿರಬಹುದು ಎಂಬ ಸೇನಾ ಗುಪ್ತಚರ ಇಲಾಖೆಯ ಸಲಹೆ ಮೇರೆಗೆ ಇಸ್ರೇಲ್ ಅಧಿಕಾರಿಗಳು ತನಿಖೆ ನಡೆಸುತ್ತಿದ್ದಾರೆ. ಇತ್ತೀಚೆಗೆ ನಡೆದ ವೈಮಾನಿಕ ದಾಳಿಯ ನಂತರ ಹಮಾಸ್ ನಾಯಕ ಯಾಹ್ಯಾ ಕಣ್ಮರೆಯಾಗಿರುವುದಾಗಿ ಪತ್ರಕರ್ತ ಬೆನ್ ಕ್ಯಾಸ್ಪಿಟ್ ವರದಿಯಲ್ಲಿ ಉಲ್ಲೇಖಿಸಿದ ನಂತರ ಊಹಾಪೋಹಗಳು ದಟ್ಟವಾಗಿ ಹರಿದಾಡುತ್ತಿರುವುದಾಗಿ ವರದಿ ವಿವರಿಸಿದೆ. ಆದರೆ ಯಾಹ್ಯಾ ಸಿನ್ವಾರ್ ಸಾವಿನ ಬಗ್ಗೆ ಐಡಿಎಫ್ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಈ ಕುರಿತು ಜೆರುಸಲೇಂ ಪೋಸ್ಟ್ ಸಂದೇಹ ವ್ಯಕ್ತಪಡಿಸಿದೆ. ಮತ್ತೊಂದೆಡೆ ಉನ್ನತ ಮೂಲಗಳು ಊಹಾಪೋಹವನ್ನು ತಳ್ಳಿಹಾಕಿದ್ದು, ಇದು ಸೇನೆಯೊಳಗಿನ ಭಿನ್ನಾಭಿಪ್ರಾಯ ಇದ್ದಿರಬಹುದು ಎಂದು ತಿಳಿಸಿರುವುದಾಗಿ ವರದಿಯಾಗಿದೆ.

ಅಭಿವೃದ್ಧಿ ಕಾಮಗಾರಿಗಳಿಗೆ ಕಾಲಾವಕಾಶ ಬೇಕು

● ಶಾಸಕ ಎ.ಎಸ್.ಪೊನ್ನಣ್ಣ ಹೇಳಿಕೆ ● ಕೊಡವ ಸಮಾಜ ಒಕ್ಕೂಟದ ವಿವಿಧ ಕಾಮಗಾರಿಗೆ ಚಾಲನೆ



ಬಾಳುಗೋಡುವಿನ ಕೊಡವ ಸಮಾಜಗಳ ಒಕ್ಕೂಟದ ವಿವಿಧ ಕಾಮಗಾರಿಗೆ ಶಾಸಕ ಎ.ಎಸ್.ಪೊನ್ನಣ್ಣ ಚಾಲನೆ ನೀಡಿದರು.

ವಿರಾಜಪೇಟೆ, ಸೆ.23–ವಿರಾಜಪೇಟೆ ಕ್ಷೇತ್ರದಲ್ಲಿ ಕಳೆದ 20 ವರ್ಷಗಳಿಂದ ಆಗದ ಅಭಿವೃದ್ಧಿ ಕಾರ್ಯಗಳನ್ನು ತಕ್ಷಣಕ್ಕೆ ಮಾಡಲು ಸಾಧ್ಯವಿಲ್ಲ. ಕಾಮಗಾರಿಗಳಿಗೆ ಕಾಲಾವಕಾಶ ಬೇಕು ಎಂದು ಶಾಸಕ ಎ.ಎಸ್.ಪೊನ್ನಣ್ಣ ಹೇಳಿದರು.

ಸಮೀಪದ ಬಾಳುಗೋಡುವಿನ ಕೊಡವ ಸಮಾಜಗಳ ಒಕ್ಕೂಟದ 6 ಕೋಟಿ ರೂ. ವೆಚ್ಚದ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ಕ್ಷೇತ್ರದಲ್ಲಿ ಗ್ರಾಮ ಪಂಚಾಯಿತಿ ಮತ್ತು ಲೋಕೋಪಯೋಗಿ ಇಲಾಖೆ ರಸ್ತೆಗಳ ಅಭಿವೃದ್ಧಿಯಾಗಬೇಕಿದೆ. ಮಳೆ ಹಾನಿ ಅನುದಾನದಲ್ಲೇ ಶೀಘ್ರದಲ್ಲಿ ಅಗತ್ಯ ಕಾಮಗಾರಿಗಳನ್ನು ನಡೆಸಲಾಗುವುದು ಎಂದರು.

ಕಸ್ತೂರಿ ರಂಗನ್ ವರದಿ ಸಂಪೂರ್ಣವಾಗಿ ತಿರಸ್ಕರಿಸಲು ಸಾಧ್ಯವಿಲ್ಲ. ಅದರಲ್ಲಿ ಅವೈಜ್ಞಾನಿಕ ಮತ್ತು ವೈಜ್ಞಾನಿಕ ಅಂಶಗಳನ್ನು ಪರಿಗಣಿಸಬೇಕಿದೆ. ಈ ವರದಿಯನ್ನು ರೈತರು ಮತ್ತು ಅರಣ್ಯ ನೀತಿಗೆ ತೊಂದರೆ ಆಗದಂತೆ ರಾಷ್ಟ್ರೀಯ ಪರಿಸರ ಸಂರಕ್ಷಣೆಗೆ ಪೂರಕವಾಗಿ ಜಾರಿಗೊಳಿಸಬೇಕೆಂಬ ನಿಲುವನ್ನು ತಿರಸ್ಕರಿಸಲು ಕೆಲ ಜನಪ್ರತಿನಿಧಿಗಳು ವಾದಿಸುತ್ತಾರೆ. ಆದರೆ ಸರ್ಕಾರ ಹಾಗೂ ಜನಪ್ರತಿನಿಧಿಗಳನ್ನು ಸೇರಿಸಿ ವರದಿಯ ಪೂರಕ ಅಂಶಗಳನ್ನು ಪರಿಗಣಿಸಿ ರೈತರಿಗೆ ತೊಂದರೆ ಆಗದಂತೆ ನೋಡಿಕೊಳ್ಳಬೇಕು. ರೈತರ ಕೃಷಿ ಚಟುವಟಿಕೆಗೆ ತೊಂದರೆ ಆಗದಂತೆ ಸರ್ವೇ ಕಾರ್ಯ ನಡೆಸಬೇಕು. ವನ್ಯಜೀವಿ ಸಂಘರ್ಷ ಹಾಗೂ ಪ್ರಕೃತಿ ವಿಕೋಪ ತಡೆಯಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದರು.

ವಿಧಾನಪರಿಷತ್ ಸದಸ್ಯ ಮಂಡೇಪಂಡ ಸುಜಾ ಕುಶಾಲಪ್ಪ ಮಾತನಾಡಿ, ಬಾಳುಗೋಡು ಕೊಡವ ಸಮಾಜದಲ್ಲಿ ಮದುವೆ ಸಮಾರಂಭಕ್ಕೆ ಅಗತ್ಯ ಸೌಕರ್ಯ ಒದಗಿಸಲು ಹಾಗೂ ಹಾಕಿ ಪಂದ್ಯಾವಳಿಗೆ ಅನುಕೂಲವಾಗುವಂತೆ ಮೈದಾನದಲ್ಲಿ ಪೆವಲಿಯನ್ ಇತ್ಯಾದಿ ಕಾಮಗಾರಿಗಳಿಗೆ ಮಂಜೂರಾಗಿರುವ 6 ಕೋಟಿ ರೂ. ಅನ್ನು ಸಮಾಜ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಹೇಳಿದರು.

> ❝ ವಿವಿಧ ಕಾಮಗಾರಿಗಳಿಗೆ ಸರ್ಕಾರದಿಂದ ಬಿಡುಗಡೆಯಾದ 10 ಕೋಟಿ ರೂ.ನಲ್ಲಿ ಬಾಳಗೋಡು ಕೊಡವ ಸಮಾಜದ ಅಭಿವೃದ್ಧಿಗೆ 6 ಕೋಟಿ ರೂ. ವೆಚ್ಚ ಮಾಡಲಾಗುತ್ತಿದೆ. ಸಮಾಜದ ಆಡಳಿತ ಮಂಡಳಿ ಸೂಕ್ತ ಕ್ರಿಯಾ ಯೋಜನೆ ರೂಪಿಸಬೇಕು. ಜೊತೆಗೆ ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿ ನಡೆಸಬೇಕು. ಸಮಾರಂಭಗಳ ಅನುಕೂಲ, ಹಾಕಿ ಮೈದಾನದ ಅಭಿವೃದ್ಧಿ, ಮ್ಯೂಸಿಯಂ, ಪೆವಿಲಿಯನ್ ತಡೆಗೋಡೆ ಇತ್ಯಾದಿ ಕೆಲಸ ನಡೆಸಲಾಗುತ್ತಿದೆ. –ಎ.ಎಸ್.ಪೊನ್ನಣ್ಣ, ಶಾಸಕ.

ಕೊಡವ ಸಮಾಜಗಳ ಒಕ್ಕೂಟದ ಅಧ್ಯಕ್ಷ ಕಳ್ಳಿಚಂಡ ವಿಷ್ಣು ಕಾರ್ಯಪ್ಪ ಮಾತನಾಡಿ, ಹಿಂದಿನ ಜೆಡಿಎಸ್ ಮತ್ತು ಕಾಂಗ್ರೆಸ್ ಮೈತ್ರಿ ಸರ್ಕಾರದಲ್ಲಿ 15 ಕೋಟಿ ರೂ. ಮಂಜೂರಾಗಿದ್ದರೂ ಬಿಡುಗಡೆಯಾಗಿರಲಿಲ್ಲ. ನಂತರ ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಆದ ಸಂದರ್ಭ 10 ಕೋಟಿ ರೂ. ಮಂಜೂರಾಗಿತ್ತು. ಇದೀಗ ಸ್ಥಳೀಯ ಶಾಸಕರ ಒತ್ತಾಸೆಯಿಂದ ಹಣ ಬಿಡುಗಡೆಯಾಗಿದೆ. ಇದರಲ್ಲಿ ಭಾಗಮಂಡಲದಲ್ಲಿ 1 ಕೋಟಿ ರೂ. ವೆಚ್ಚದ ಕೊಡವ ಸಮುದಾಯಭವನ, ವಿವಿಧ ಮೂವತ್ತು ಕೊಡವ ಸಮಾಜಕ್ಕೆ ತಲಾ 10 ಲಕ್ಷ ರೂ. ಮತ್ತು ಫೆಡರೇಷನ್ ಆಫ್ ಕೊಡವ ಸಮಾಜಕ್ಕೆ 6 ಕೋಟಿ ರೂ. ನೀಡಲಾಗಿದೆ ಎಂದು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಕೊಡವ ಸಮಾಜಗಳ ಒಕ್ಕೂಟದ ಕಾರ್ಯದರ್ಶಿ ವಾಟೇರೀರ ಶಂಕರಿ ಪೂವಯ್ಯ, ಖಜಾಂಚಿ ಚೆರಿಯಪಂಡ ಕಾಶಿಯಪ್ಪ, ಕಟ್ಟಡ ಸಮಿತಿ ಉಸ್ತುವಾರಿಗಳಾದ ಕೋಲತಂಡ ಗಣೇಶ್, ಚೇಂದ್ರಿಮಾಡ ಗಣೇಶ್ ನಂಜಪ್ಪ, ಮಕ್ಕಂದೂರು ಕೊಡವ ಸಮಾಜದ ಅಧ್ಯಕ್ಷ ತಂಬುಕುತ್ತೀರ ಮಧು, ವಿರಾಜಪೇಟೆ ಕೊಡವ ಸಮಾಜದ ಕಾರ್ಯದರ್ಶಿ ಮಾಳೇಟಿರ ಶ್ರೀನಿವಾಸ್ ಮತ್ತು ಒಕ್ಕೂಟದ ಆಡಳಿತ ಮಂಡಳಿ ಸದಸ್ಯರು ಉಪಸ್ಥಿತರಿದ್ದರು.

ಲಾರಿ, ಬಸ್ ಡಿಕ್ಕಿ: ಪ್ರಯಾಣಿಕರಿಗೆ ಸಣ್ಣಪುಟ್ಟ ಗಾಯ



ಲಾರಿ ಮುಂಭಾಗ ಜಖಂಗೊಂಡಿರುವುದು.

ಮಡಿಕೇರಿ: ಲಾರಿ ಹಾಗೂ ಸಾರಿಗೆ ಬಸ್ ನಡುವೆ ಮುಖಾಮುಖಿ ಡಿಕ್ಕಿ ಸಂಭವಿಸಿ, ಪ್ರಯಾಣಿಕರಿಗೆ ಸಣ್ಣಪುಟ್ಟ ಗಾಯಗಳಾಗಿರುವ ಘಟನೆ ಗೋಣಿಕೊಪ್ಪಲಿನ ಅತ್ತೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸೀಗೆತೋಡುವಿನಲ್ಲಿ ಸೋಮವಾರ ನಡೆದಿದೆ.

ಮೈಸೂರುನಿಂದ ಗೋಣಿಕೊಪ್ಪಕ್ಕೆ ಬರುತ್ತಿದ್ದ ಸಾರಿಗೆ ಬಸ್ ಹಾಗೂ ಗೋಣಿಕೊಪ್ಪದಿಂದ ಹುಣಸೂರು ಕಡೆಗೆ ತೆರಳುತ್ತಿದ್ದ ಲಾರಿ ನಡುವೆ ಸೀಗೆತೋಡುವಿನಲ್ಲಿ ಡಿಕ್ಕಿ ಸಂಭವಿಸಿದೆ. ಪರಿಣಾಮ ಲಾರಿ ಹಾಗೂ ಬಸ್ ಚಾಲಕ ಸೇರಿದಂತೆ ಪ್ರಯಾಣಿಕರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಗೋಣಿಕೊಪ್ಪ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಗಾಯಗಳಿಗೆ ಚಿಕಿತ್ಸೆ ನೀಡಲಾಗಿದೆ. ಲಾರಿ ಮತ್ತು ಬಸ್‌ನ ಮುಂಭಾಗ ಜಖಂಗೊಂಡಿವೆ. ಗೋಣಿಕೊಪ್ಪ ಪೊಲೀಸ್ ಠಾಣಾಧಿಕಾರಿ ಪ್ರದೀಪ್ ಕುಮಾರ್ ಹಾಗೂ ಸಿಬ್ಬಂದಿ ಸ್ಥಳ ಪರಿಶೀಲಿಸಿದರು.

ಮನೆ ಅಂಗಳಕ್ಕೆ ಬಂದ ಕಾಡಾನೆ: ಹೆಚ್ಚಿದ ಆತಂಕ



ಕಾಡಾನೆ ಓಡಾಟದ ದೃಶ್ಯ ಸಿಸಿ ಕ್ಯಾಮರಾದಲ್ಲಿ ಸೆರೆ.

ಮಡಿಕೇರಿ: ವಿರಾಜಪೇಟೆ ತಾಲೂಕಿನ ಬೆಳ್ಳಿಮಾಡು ಗ್ರಾಮ ವ್ಯಾಪ್ತಿಯಲ್ಲಿ ಕಾಡಾನೆಗಳ ಹಾವಳಿ ಮಿತಿ ಮೀರಿದ್ದು, ತೋಟಗಳಿಗೆ ದಾಳಿ ಮಾಡಿ ಬೆಳೆ ನಾಶ ಮಾಡುತ್ತಿರುವ ಆನೆಗಳು ಮನೆಯ ಅಂಗಳಕ್ಕೂ ಬಂದು ಆತಂಕ ಸೃಷ್ಟಿಸುತ್ತಿವೆ.

ಗ್ರಾಮದ ಪುಟ್ಟಿಚಂಡ ಪದ್ಮಿನಿ ಮುದ್ದಪ್ಪ ಅವರ ಕಾಫಿ ತೋಟಕ್ಕೆ ಭಾನುವಾರ ತಡರಾತ್ರಿ 4 ಕಾಡಾನೆಗಳು ದಾಳಿ ನಡೆಸಿ ಬೆಳೆ ಹಾನಿ ಮಾಡಿದ್ದು, ಓಡಾಟದ ದೃಶ್ಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಅನೇಕ ದಿನಗಳಿಂದ ಈ ಭಾಗದಲ್ಲಿ ಕಾಡಾನೆಗಳ ಹಿಂಡು ಉಪಟಳ ನೀಡುತ್ತಿರುವ ಬಗ್ಗೆ ಅರಣ್ಯ ಇಲಾಖೆಗೆ ಮಾಹಿತಿ ಇದ್ದರೂ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

ಕಾಡಾನೆಗಳಿಂದ ಅಪಾರ ಬೆಳೆ ನಷ್ಟವಾಗುತ್ತಿದ್ದು, ಮನೆಯಿಂದ ಹೊರಗೆ ಬರಲು ಭಯವಾಗುತ್ತಿದೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ನಿವೇಶನ ಹಂಚಿಕೆಗೆ ಒತ್ತಾಯಿಸಿ ಪ್ರತಿಭಟನೆ

ಗೋಣಿಕೊಪ್ಪ: ಕೊಡಗು ಜಿಲ್ಲೆಯ ಬಡವರಿಗೆ ನಿವೇಶನ ಹಂಚಿಕೆಗೆ ಜಾಗ ನೀಡಬೇಕು ಎಂದು ಒತ್ತಾಯಿಸಿ ಭಾರತ್ ಕಮ್ಯುನಿಸ್ಟ್ ಪಕ್ಷದ ಕಾರ್ಯಕರ್ತರು ಪೊನ್ನಂಪೇಟೆ ತಾಲೂಕು ಪಂಚಾಯಿತಿ ಕಚೇರಿ ಎದುರು ಸೋಮವಾರ ಪ್ರತಿಭಟನೆ ನಡೆಸಿದರು.

ಸೂರಿಗಾಗಿ ಸಮರ ಘೋಷವಾಕ್ಯದೊಂದಿಗೆ ಧರಣಿ ನಡೆಸಿದ ಕಾರ್ಯಕರ್ತರು, ಸರ್ಕಾರಿ ಭೂಮಿಯನ್ನು ಬಡವರಿಗೆ ಹಂಚಬೇಕು ಎಂದು ಒತ್ತಾಯಿಸಿದರು. ನಂತರ ತಾಪಂ ವ್ಯವಸ್ಥಾಪಕಿ ಸ್ವರೂಪ ಅವರಿಗೆ ಮನವಿ ಸಲ್ಲಿಸಿದರು. ಪಕ್ಷ ರಾಜ್ಯ ಸಹ ಕಾರ್ಯದರ್ಶಿ ಬಿ.ಅಮ್ಜದ್ ಮಾತನಾಡಿ, ಸೂರಿಗಾಗಿ ಸಮರ ಘೋಷಣೆಯಡಿ ರಾಜ್ಯವ್ಯಾಪ್ತಿ 50 ಲಕ್ಷಕ್ಕೂ ಹೆಚ್ಚು ಕುಟುಂಬಗಳು ನಿವೇಶನಕ್ಕಾಗಿ ಹೋರಾಟ ನಡೆಸುತ್ತಿವೆ. ಗುಡಿಸಲು ಮುಕ್ತ ರಾಜ್ಯ ಎಂದು ಸರ್ಕಾರ ಹೇಳಿಕೊಳ್ಳುತ್ತಿದೆ ಆದರೆ, ಸರ್ಕಾರಿ ಭೂಮಿ ಒತ್ತುವರಿಯಾಗಿದ್ದು, ಬಡವರಿಗೆ ನಿವೇಶನ ಹಂಚಬೇಕು ಎಂದು ಒತ್ತಾಯಿಸಿದರು.

ಪಕ್ಷದ ರಾಜ್ಯ ಮಂಡಳಿ ಸದಸ್ಯ ಸಂತೋಷ್ ಮಾತನಾಡಿ, ಅಧಿಕಾರಿಗಳು ಬಡವರ ಅರ್ಜಿಗಳನ್ನು ವಿಲೇವಾರಿಗೆ ಮುಂದಾಗದೆ ದಿನ ದೂಡುತ್ತಿದೆ ಎಂದು ಆರೋಪಿಸಿದರು. ಪ್ರತಿಭಟನೆಯಲ್ಲಿ ಜಿಲ್ಲಾ ಕಾರ್ಯದರ್ಶಿ ಕೆ.ವಿ.ಸುನೀಲ್, ಸಹ ಕಾರ್ಯದರ್ಶಿಗಳಾದ ರಫೀಕ್ ನವಲಗುಂದ, ರಮೇಶ್ ಮಾಯಮುಡಿ, ಎಚ್.ಎಂ.ಸೋಮಪ್ಪ, ಸದಸ್ಯೆ ಶಾಂತಿ ಶಬಾನ, ರವಿ ಇದ್ದರು.



ಪೊನ್ನಂಪೇಟೆ ತಾಪಂ ಕಚೇರಿ ಎದುರು ಭಾರತ್ ಕಮ್ಯುನಿಸ್ಟ್ ಪಕ್ಷ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ತಿರುಪತಿ ಲಡ್ಡುವಿನಲ್ಲಿ ಕಲಬೆರಕೆ ಖಂಡಿಸಿ ಪ್ರತಿಭಟನೆ



ಕುಶಾಲನಗರದಲ್ಲಿ ದೇವಾಲಯಗಳ ಒಕ್ಕೂಟ ಹಾಗೂ ತಿರುಪತಿ ತಿಮ್ಮಪ್ಪನ ಭಕ್ತರು ಮೌನ ಪ್ರತಿಭಟನೆ ನಡೆಸಿದರು.

ಕುಶಾಲನಗರ, ಸೆ.23–ತಿರುಪತಿ ಲಡ್ಡು ಪ್ರಸಾದ ತಯಾರಿಕೆಗೆ ಬಳಸುತ್ತಿದ್ದ ತುಪ್ಪದಲ್ಲಿ ಕಲಬೆರಕೆ ಮಾಡಿರುವುದು ಹೇಯಕೃತ್ಯ ಎಂದು ಖಂಡಿಸಿ ತಿರುಪತಿ ತಿಮ್ಮಪ್ಪನ ಭಕ್ತರು ಪಟ್ಟಣದಲ್ಲಿ ಸೋಮವಾರ ಮೌನ ಪ್ರತಿಭಟನೆ ನಡೆಸಿದರು.

ಕುಶಾಲನಗರ ದೇವಾಲಯಗಳ ಒಕ್ಕೂಟ ಮತ್ತು ತಿರುಪತಿ ನೂರಾರು ಭಕ್ತರು ಇಲ್ಲಿನ ಬೈಚನಹಳ್ಳಿ ಮಾರಮ್ಮ ದೇವಾಲಯದಿಂದ ಪ್ರತಿಭಟನಾ ಮೆರವಣಿಗೆ ನಡೆಸಿದರು. ನಂತರ ಗಣಪತಿ ದೇವಾಲಯ ಬಳಿ ಸಮಾವೇಶಗೊಂಡ ಪ್ರತಿಭಟನಾಕಾರರು, ತಿರುಪತಿ ಮಹಾಪ್ರಸಾದ ಲಡ್ಡುವಿನಲ್ಲಿ ಪ್ರಾಣಿಗಳ ಕೊಬ್ಬು ಬೆರಕೆ ಮಾಡಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಗಣಪತಿ ದೇವಾಲಯ ಪ್ರಧಾನ ಅರ್ಚಕ ಆರ್.ಕೆ.ನಾಗೇಂದ್ರ ಬಾಬು ಮಾತನಾಡಿ, ಕೋಟ್ಯಾಂತರ ಭಕ್ತರ ಆರಾಧ್ಯದೈವ ಶ್ರೀ ವೆಂಕಟೇಶ್ವರಸ್ವಾಮಿ ಲಡ್ಡು ಪ್ರಸಾದದಲ್ಲಿ ಪ್ರಾಣಿಗಳ ಕೊಬ್ಬು ಬಳಕೆ ಮಾಡಿರುವುದು ಹೇಯಕೃತ್ಯವಾಗಿದೆ. ದೇವಾಲಯ ಎನ್ನುವುದು ಮೋಕ್ಷಾಪ್ರಾಪ್ತಿ ಹಾಗೂ ಕರ್ಮ ಸಾಧನೆಯ ಚೌಕಟ್ಟಿನ ವ್ಯವಸ್ಥೆಯಾಗಿದೆ. ದೇವಾಲಯ ಪಾವಿತ್ರ್ಯತೆಗೆ ಧಕ್ಕೆ ತರುವ ಕೆಲಸ ಯಾರು ಮಾಡಬಾರದು. ವಿಕೃತ ಸಂತೋಷ ಹಾಗೂ ಅಪವಿತ್ರ ಲಭ್ಯಗಳಿಸಬೇಕು ಎಂಬ ಹುನ್ನಾರದಿಂದ ಈ ಅಹಿತಕರ ಘಟನೆ ನಡೆದಿದೆ. ಇದು ಬಹಳ ಶೋಚನೀಯ ಹಾಗೂ ವಿಷಾದನೀಯ. ಇಂಥ ಘಟನೆಗಳು ನಡೆಯಬಾರದು ಇದರಿಂದ ಭಕ್ತರ ನಂಬಿಕೆಗೆ ದೊಡ್ಡ ಪೆಟ್ಟು ಬೀಳಲಿದೆ ಎಂದು ಬೇಸರ ವ್ಯಕ್ತಪಡಿಸಿದರು.

ದೇಶದ ಎಲ್ಲಾ ದೇವಾಲಯ ಹಾಗೂ ಶ್ರದ್ಧಾ ಕೇಂದ್ರಗಳಲ್ಲಿ ಇಂತಹ ಅನಾಹುತ ತಪ್ಪಿಸಲು ಹೊಸ ಕಾನೂನು ರೂಪಿಸಬೇಕು. ದೇವಾಲಯಗಳನ್ನು ಸರ್ಕಾರದ ಮುಷ್ಠಿಯಿಂದ ಮುಕ್ತಗೊಳಿಸಿ ಭಕ್ತರನ್ನು ಒಳಗೊಂಡಂತೆ ಆಡಳಿತ ಮಂಡಳಿ ರಚಿಸಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದರು.

ನಂತರ ರಥ ಬೀದಿಯಿಂದ ಮಾರುತಿ ಸರ್ಕಲ್ ಮೂಲಕ ತಹಸೀಲ್ದಾರ್ ಕಚೇರಿಗೆ ತೆರಳಿ ತಹಸೀಲ್ದಾರ್ ಕಿರಣ್ ಗೌರಯ್ಯ ಅವರಿಗೆ ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ತಿರುಪತಿ ಭಕ್ತ ಸಮೂಹದ ಸಂಚಾಲಕ ಬಿ.ಅಮೃತ್ ರಾಜ್, ಮುಖಂಡರಾದ ಎಂ.ವಿ.ನಾರಾಯಣ, ಜಿ.ಎಲ್.ನಾಗರಾಜು, ಬೋಸ್ ಮೊಣ್ಣಪ್ಪ, ಎಚ್.ಎಚ್.ಸುಂದರ್, ಎಚ್.ಎಂ.ಮಧುಸೂದನ್, ಡಿ.ವಿ.ರಾಜೇಶ್, ಗಣಪತಿ, ಜನಾರ್ದನ್, ಗೌತಮ್, ತಿರುಪತಿ ಭಜನಾ ಮಂಡಳಿ ಸದಸ್ಯರಾದ ಪದ್ಮ, ರಮಾವಿಜೇಂದ್ರ ಮತ್ತಿತರರು ಪಾಲ್ಗೊಂಡಿದ್ದರು.

ಜಾನಕಿ ನಿಧನ

ನಾಪೋಕ್ಲು, ಸೆ.23– ಬೇತು ಗ್ರಾಮದ ದಿ.ವೆಂಕಪ್ಪ ಪತ್ನಿ ಜಾನಕಿ (86) ಭಾನುವಾರ ನಿಧನರಾದರು.



ಮೃತರು ಪುತ್ರ, ಮೂರು ಪುತ್ರಿಯರನ್ನು ಅಗಲಿದ್ದಾರೆ.

ಪುತ್ತೂರಿನ ಸ್ವಗ್ರಹದಲ್ಲಿ ಸೋಮವಾರ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಅದ್ಧೂರಿ ದಸರಾ ಆಚರಣೆಗೆ ಸಿದ್ಧತೆ ಪೂರ್ಣಗೊಳಿಸಿ

ಸಭೆಯಲ್ಲಿ ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಸೂಚನೆ

ಚಾಮರಾಜನಗರ, ಸೆ.23–ವಿಶ್ವ ವಿಖ್ಯಾತ ನಾಡಹಬ್ಬ ಮೈಸೂರು ದಸರಾ ಭಾಗವಾಗಿ ಜಿಲ್ಲೆಯಲ್ಲೂ ಅ.7ರಿಂದ 9ರವರೆಗೆ ಚಾಮರಾಜನಗರ ದಸರಾ ಮಹೋತ್ಸವವನ್ನು ಅದ್ಧೂರಿಯಿಂದ ಆಚರಿಸಲು ಸಕಲ ಸಿದ್ಧತೆಗಳನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಅಧಿಕಾರಿಗಳಿಗೆ ಸೂಚಿಸಿದರು.

> ❝ ಈಗಾಗಲೇ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಅಗತ್ಯ ಸೂಚನೆ ನೀಡಲಾಗಿದೆ. ಯುವ ಸಂಭ್ರಮ, ದಸರಾ ಕ್ರಿಕೆಟ್ ಕಪ್, ಗ್ರಾಮೀಣ ಕ್ರೀಡಾಕೂಟದಂತಹ ವಿಶೇಷ ಕಾರ್ಯಕ್ರಮಗಳನ್ನು ಈ ಬಾರಿ ನಡೆಸಲಾಗುತ್ತಿದೆ. ವೈವಿಧ್ಯಮಯ ಕಾರ್ಯಕ್ರಮಗಳನ್ನು ಪ್ರಸುತ್ತ ಪಡಿಸಲು ರೂಪುರೇಷೆ ತಯಾರಿಸಿದ್ದು, ಸಮಿತಿಗಳು ಕಾರ್ಯೋನ್ಮುಖವಾಗಿವೆ. –ಶಿಲ್ಪನಾಗ್, ಜಿಲ್ಲಾಧಿಕಾರಿ

> ❝ ದಸರಾ ಹಿನ್ನೆಲೆಯಲ್ಲಿ ವಾಹನಗಳು ಮತ್ತು ಜನರ ಸಂಚಾರಕ್ಕೆ ಯಾವುದೇ ಅಡಚಣೆಯಾಗದಂತೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು. ಸಾಂಸ್ಕೃತಿಕ ಕಾರ್ಯಕ್ರಮ ನಡೆಯುವ ಸ್ಥಳಗಳಲ್ಲಿ ಪೊಲೀಸರನ್ನು ನಿಯೋಜಿಸಲಾಗುತ್ತಿದೆ. ಮೆರವಣಿಗೆ ಸಾಗುವ, ದೀಪಾಲಂಕಾರ ಮಾರ್ಗಗಳಲ್ಲಿ ಮುಂಜಾಗ್ರತಾ ಕ್ರಮ ವಹಿಸಲಾಗುವುದು. –ಡಾ.ಬಿ.ಟಿ.ಕವಿತಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ.

ನಗರದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಸೋಮವಾರ ನಡೆದ ದಸರಾ ಮಹೋತ್ಸವ ಆಚರಣೆ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾದ ದೀಪಾಲಂಕಾರವನ್ನು ಹೆಚ್ಚು ಜನರನ್ನು ಸೆಳೆಯುವ ರೀತಿ ಕೈಗೊಳ್ಳಬೇಕು. ಪ್ರಮುಖ ವೃತ್ತಗಳಲ್ಲಿ ವಿಶೇಷವಾಗಿ ದೀಪಾಲಂಕಾರ ವ್ಯವಸ್ಥೆಯಾಗಬೇಕು. ಇದಕ್ಕಾಗಿ ಹೆಚ್ಚಿನ ಅನುದಾನ ನಿಗದಿಮಾಡಿಕೊಳ್ಳಬೇಕು. ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ವಿಶೇಷ ಗಮನ ನೀಡುವಂತೆ ತಿಳಿಸಿದರು.

ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ವಿದ್ಯುತ್ ದೀಪಾಲಂಕಾರ ನಗರದ ಎಲ್ಲಾ ಕಡೆ ಇರಬೇಕು. ದಸರಾ ಹಬ್ಬದಲ್ಲಿ ವ್ಯಾಪಕವಾಗಿ ಎಲ್ಲಾ ಭಾಗಗಳಲ್ಲೂ ದೀಪಾಲಂಕಾರ ಇರುವಂತೆ ನೋಡಿಕೊಳ್ಳಬೇಕು ಎಂದರು.

ಸಂಸದ ಸುನೀಲ್ ಬೋಸ್ ಮಾತನಾಡಿ,



ಚಾಮರಾಜನಗರ ಜಿಪಂನಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಅಧ್ಯಕ್ಷತೆಯಲ್ಲಿ ದಸರಾ ಪೂರ್ವಭಾವಿ ಸಭೆ ನಡೆಯಿತು.

ರಾಜ್ಯ ಸರ್ಕಾರ ಜಾರಿಗೆ ತಂದಿರುವ ಪಂಚ ಗ್ಯಾರಂಟಿ ಯೋಜನೆಗಳ ಸಾಧನೆ ಬಗ್ಗೆ ದಸರಾ ಕಾರ್ಯಕ್ರಮದಲ್ಲಿ ತಿಳಿಸಬೇಕು. ಸರ್ಕಾರದ ಕಾರ್ಯಕ್ರಮಗಳು ಹೆಚ್ಚು ಜನರಿಗೆ ತಲುಪುತ್ತಿರುವ ಬಗ್ಗೆ ವೈವಿಧ್ಯಮಯ ಕಾರ್ಯಕ್ರಮ ಮೂಲಕ ಪ್ರಸ್ತುತ ಪಡಿಸಬೇಕು. ಇದಕ್ಕೆ ಹೆಚ್ಚಿನ ಮುತುವರ್ಜಿ ವಹಿಸಬೇಕು ಎಂದು ತಿಳಿಸಿದರು.

ನಂತರ ಸಚಿವ ಕೆ.ವೆಂಕಟೇಶ್ ಮಾತನಾಡಿ, ಮೂರು ದಿನಗಳ ದಸರಾದಲ್ಲಿ ವೈವಿಧ್ಯಮಯ ಕಾರ್ಯಕ್ರಮಗಳು ಮೂಡಿಬರಬೇಕು. ಸಾಂಸ್ಕೃತಿಕ ಕಾರ್ಯಕ್ರಮ, ಫಲಪುಷ್ಪ ಪ್ರದರ್ಶನ, ಮಹಿಳಾ ದಸರಾ, ರೈತ ದಸರಾ, ಯುವ ಸಂಭ್ರಮ, ಗ್ರಾಮೀಣ ಕ್ರೀಡಾಕೂಟ, ಮ್ಯಾರಾಥಾನ್, ಪಾರಂಪರಿಕ ನಡಿಗೆ ಹೀಗೆ ಎಲ್ಲಾ ಕಾರ್ಯಕ್ರಮ ಅಚ್ಚುಕಟ್ಟಾಗಿ ಆಯೋಜಿತವಾಗಬೇಕು. ಇದಕ್ಕೆ ನಿಯೋಜಿತರಾಗಿರುವ ವಿವಿಧ ಸಮಿತಿಗಳ ಅಧಿಕಾರಿಗಳು ಪರಿಪೂರ್ಣ ಸಿದ್ಧತೆ ಮಾಡಬೇಕೆಂದು ನಿರ್ದೇಶಿಸಿದರು.

ಸಭೆಯಲ್ಲಿ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ರಾಜ್ಯ ಉಗ್ರಾಣ ನಿಗಮದ ಅಧ್ಯಕ್ಷ ಎಸ್.ಜಯಣ್ಣ, ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನಾ, ನಗರಸಭೆ ಅಧ್ಯಕ್ಷ ಎಸ್.ಸುರೇಶ್, ಉಪಾಧ್ಯಕ್ಷೆ ಮಮತಾ ಬಾಲಸುಬ್ರಹ್ಮಣ್ಯಂ, ಜಿಪಂ ಸಿಇಓ ಮೋನಾ ರೋತ್, ಅಪರ ಜಿಲ್ಲಾಧಿಕಾರಿ ಗೀತಾ ಹುಡೇದ, ಬಿಆರ್‌ಟಿ ಅರಣ್ಯ ಸಂರಕ್ಷಿತ ಪ್ರದೇಶದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಪ್ರಭಾತ್ ಅಕ್ಷಯ್ ಅಶೋಕ್, ಉಪವಿಭಾಗಾಧಿಕಾರಿ ಮಹೇಶ್, ಜಿಲ್ಲಾಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ವಿದ್ಯಾರ್ಥಿಗಳ ಮನಸ್ಸಿನಲ್ಲಿ ಉಳಿಯುವ ವ್ಯಕ್ತಿ ಶಿಕ್ಷಕರು ಮಾತ್ರ



ಚಾಮರಾಜನಗರ ಅಂಬೇಡ್ಕರ್ ನಡೆದ ಶಿಕ್ಷಕರ ದಿನಾಚರಣೆಯಲ್ಲಿ ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಚಾಮರಾಜನಗರ, ಸೆ.23–ಇಡೀ ಸಮಾಜದಲ್ಲಿ ಹೆಚ್ಚು ಮಾತನಾಡುವ ಅವಕಾಶ ಶಿಕ್ಷಕರಿಗಿದೆ. ಪ್ರತಿಯೊಬ್ಬ ವಿದ್ಯಾರ್ಥಿಗಳ ಮನಸ್ಸಿನಲ್ಲಿ ಬಹಳ ಕಾಲ ಉಳಿಯುವ ವ್ಯಕ್ತಿ ಎಂದರೆ ಅದು ಶಿಕ್ಷಕರು ಮಾತ್ರ ಎಂದು ನಿವೃತ್ತ ಪ್ರಾಂಶುಪಾಲ ಪ್ರೊ.ಎಂ.ಕೃಷ್ಣೇಗೌಡ ತಿಳಿಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಶಾಲಾ ಶಿಕ್ಷಣ ಇಲಾಖೆ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾ ಮತ್ತು ತಾಲೂಕು ಮಟ್ಟದ ಶಿಕ್ಷಕರ ದಿನಾಚರಣೆ ಹಾಗೂ ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ನಮ್ಮ ನಂತರದ ಪೀಳಿಗೆಗೆ ಮಾರ್ಗದರ್ಶನ ಮಾಡುವ ಹಂತದಲ್ಲಿ ಶಿಕ್ಷಕರು ಆತ್ಮಾವಲೋಕನ ಮಾಡಿಕೊಳ್ಳುವ ಅಗತ್ಯವಿದೆ. ಶಿಕ್ಷಕರು ಶಿಕ್ಷಕ ವೃತ್ತಿಯನ್ನು ಪ್ರೀತಿಸಿ ಗೌರವಿಸಬೇಕು. ಈ ದೇಶದ ಭವಿಷ್ಯ ಅಡಗಿರುವುದು ಶಾಲಾ ತರಗತಿಗಳಲ್ಲಿ ಆಗಿರುವುದರಿಂದ ಶಿಕ್ಷಕರ ಜವಾಬ್ದಾರಿ ಅಧಿಕವಾಗಿದೆ. ಸಾತ್ವಿಕತೆಯಲ್ಲಿ ಶಕ್ತಿ ಇದೆ ಎಂಬುದನ್ನು ತೋರಿಸಬೇಕು ಎಂದರು.

ನಮ್ಮ ಗ್ರಹಿಕೆಗಿಂತ ವೇಗವಾಗಿ ಬೆಳೆಯುತ್ತಿರುವ ಈಗಿನ ಹೊಸ ಜಗತ್ತಿನ ವಿದ್ಯಮಾನಗಳನ್ನು ಗಮನಿಸಿದಾಗ ಶಿಕ್ಷಕರಿಗೆ ಅಳಿವು–ಉಳಿವಿನ ಸವಾಲು ಎದುರಾಗುತ್ತಿವೆ ಮುಂದಿನ ದಿನಗಳಲ್ಲಿ ಶಿಕ್ಷಕರ ಅಗತ್ಯವಿಲ್ಲದ ಪರಿಸ್ಥಿತಿ ಬಂದರೂ ಅತಿಶಯೋಕ್ತಿಯೇನಲ್ಲ. ಅಂಥ ಕಾಲ ಸಮೀಪಿಸುತ್ತಿದೆ. ಎಲ್ಲಾ ವಿಷಯ ಜ್ಞಾನ ಕಂಪ್ಯೂಟರ್, ಮೊಬೈಲ್‌ನಲ್ಲಿದೆ. ಆದರೂ ಯಾವುದೇ ತಾಂತ್ರಿಕತೆ ಮನುಷ್ಯನ (ರೀಪ್ಲೇಸ್) ಸ್ಥಾನ ತುಂಬುವಂತಾಗಬಾರದು. ಶಿಕ್ಷಕ ಎಂದರೇ ಬರೀ ವೃತ್ತಿಯಲ್ಲ. ಕಲಿಸುವ ಹಂತದಲ್ಲಿ ಶಿಕ್ಷಕರ ಎಲ್ಲಾ ಇಂದ್ರಿಯಗಳು ಕ್ರಿಯಾಶೀಲ ಚಟುವಟಿಕೆಯಿಂದ ಕೂಡಿರಬೇಕು. ನಮ್ಮೊಳಗಿನ ಆದರ್ಶಗಳನ್ನು ವಿದ್ಯಾರ್ಥಿಗಳಿಗೆ ಪಸರಿಸಿ ಸ್ಫೂರ್ತಿ ತುಂಬಬೇಕು ಎಂದು ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಮಾತನಾಡಿ, ವೇಗವಾಗಿ ಬೆಳೆಯುತ್ತಿರುವ ತಾಂತ್ರಿಕತೆಗೆ ಅನುಗುಣವಾಗಿ ಶಿಕ್ಷಣ ನೀಡಿ ಮಕ್ಕಳ ಭವಿಷ್ಯ ರೂಪಿಸುವ ಗುರುತರ ಜವಾಬ್ದಾರಿ ಶಿಕ್ಷಕರ ಮೇಲಿದೆ. ಇಂದು ಪುಸ್ತಕಗಳಿಗಿಂತ ಕಂಪ್ಯೂಟರ್, ಮೊಬೈಲ್‌ಗಳಲ್ಲಿ ಶಿಕ್ಷಣದ ಹೆಚ್ಚಿನ ಜ್ಞಾನ ದೊರೆಯುತ್ತಿದೆ. ಈಗ ಶಿಕ್ಷಣ ಕ್ಷೇತ್ರ ಸ್ಪರ್ಧಾತ್ಮಕವಾಗಿದ್ದು, ಕಲಿಕಾ ಪ್ರಕ್ರಿಯೆಯಲ್ಲಿ ಶಿಕ್ಷಕರಿಗೆ ಸಾಕಷ್ಟು ಸವಾಲುಗಳು ಎದುರಾಗಿವೆ. ಅವುಗಳನ್ನು ಚಾಣಾಕ್ಷತೆಯಿಂದ ನಿಭಾಯಿಸುವ ಜವಾಬ್ದಾರಿ ಶಿಕ್ಷಕರಿಗಿರಬೇಕು ಎಂದರು.

ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತನಾಡಿ, ಶಿಕ್ಷಣಕ್ಕೆ ತನ್ನದೇ ಮಹತ್ವವಿದ್ದು, ಅಂದಿನ ಗುರುಕುಲ ಶಿಕ್ಷಣಕ್ಕೂ ಇಂದಿನ ಬದಲಾದ ಶಿಕ್ಷಣಕ್ಕೂ ಅಜಗಜಾಂತರ ವ್ಯತ್ಯಾಸವಿದೆ. ಪ್ರತಿಯೊಬ್ಬರು ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಸಮಾಜದಲ್ಲಿ ಗೌರವ ಪಡೆಯಲು ಶಿಕ್ಷಣ ನೆರವಾಗಲಿದೆ ಎಂದರು.

ಇದೇ ವೇಳೆ ಶಿಕ್ಷಕ ವೃತ್ತಿಯಲ್ಲಿ ಸಾಧನೆಗೈದವರಿಗೆ ಕಿರಿಯ, ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿಭಾಗದಲ್ಲಿ ಜಿಲ್ಲಾ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪ್ರದಾನ ಮಾಡಲಾಯಿತು. ನಿವೃತ್ತ ಶಿಕ್ಷಕರನ್ನು ಸನ್ಮಾನಿಸಲಾಯಿತು. ಆರಂಭದಲ್ಲಿ ಕರಡಿಮೋಳೆಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲಾ ಮಕ್ಕಳು ಸಂವಿಧಾನದ ಪೀಠಿಕೆ ಬೋಧಿಸಿದರು. ವೇದಿಕೆ ಕಾರ್ಯಕ್ರಮಕ್ಕೂ ಮೊದಲು ಅಲಂಕೃತ ಬೆಳ್ಳಿರಥದಲ್ಲಿ ರಾಷ್ಟ್ರಪತಿ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಹಾಗೂ ಅಕ್ಷರದ ಅಮ್ಮ ಸಾವಿತ್ರಿಬಾಯಿ ಫುಲೆ ಅವರ ಭಾವಚಿತ್ರವನ್ನೊಳಗೊಂಡ ಮೆರವಣಿಗೆಗೆ ನಗರದ ಪೇಟೆ ಪ್ರೈಮರಿ ಶಾಲಾ ಆವರಣದಲ್ಲಿ ಚಾಲನೆ ನೀಡಲಾಯಿತು.

ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ನಗರಸಭೆ ಅಧ್ಯಕ್ಷ ಎಸ್.ಸುರೇಶ್ ನಾಯಕ, ಉಪಾಧ್ಯಕ್ಷೆ ಮಮತಾ ಬಾಲಸುಬ್ರಮಣ್ಯಂ, ಸದಸ್ಯರಾದ ಎಂ.ಮಹೇಶ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಎಚ್.ವಿ.ಚಂದ್ರು, ಜಿಲ್ಲಾಧಿಕಾರಿ ಶಿಲ್ಪನಾಗ್, ಜಿಪಂ ಸಿಇಓ ಮೋನಾ ರೋತ್, ಎಸ್ಪಿ ಡಾ.ಬಿ.ಟಿ.ಕವಿತಾ, ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ರಾಮಚಂದ್ರರಾಜೇ ಅರಸ್, ಡಯಟ್ ಪ್ರಾಂಶುಪಾಲ ಕಾಶಿನಾಥ್, ಕ್ಷೇತ್ರ ಶಿಕ್ಷಣಾಧಿಕಾರಿ ಹನುಮಶೆಟ್ಟಿ ಉಪಸ್ಥಿತರಿದ್ದರು.

ಸಂಗದೇವರು ನಿಧನ

ಚಾಮರಾಜನಗರ, ಸೆ.23–ತಾಲೂಕಿನ ಹೊನ್ನಹಳ್ಳಿ ಗ್ರಾಮದ ಸಂಗದೇವರು (85) ಸೋಮವಾರ ನಿಧನರಾದರು.



ಮೃತರು ಪತ್ನಿ, ಪುತ್ರಿ, ಇಬ್ಬರು ಪುತ್ರರನ್ನು ಅಗಲಿದ್ದಾರೆ. ಮಂಗಳವಾರ ಸ್ವಗ್ರಾಮ ಹೊನ್ನಹಳ್ಳಿಯಲ್ಲಿ ಅಂತ್ಯಕ್ರಿಯೆ ನೆರವೇರಲಿದೆ.

ಮಹದೇಶ್ವರ ಜಾತ್ರೆಯಲ್ಲಿ ಭಕ್ತರಿಗೆ ಅನುಕೂಲ ಕಲ್ಪಿಸಿ



ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಜಾತ್ರಾ ಪೂರ್ವಸಭೆಯಲ್ಲಿ ಸಚಿವ ಕೆ.ವೆಂಕಟೇಶ್ ಮಾತನಾಡಿದರು.

ಚಾಮರಾಜನಗರ, ಸೆ.23–ಮಲೆಮಹದೇಶ್ವರಬೆಟ್ಟದಲ್ಲಿ ಮಹಾಲಯ ಅಮಾವಾಸ್ಯೆ, ದಸರಾ ಹಾಗೂ ದೀಪಾವಳಿ ಜಾತ್ರಾ ಮಹೋತ್ಸವದಲ್ಲಿ ಭಕ್ತರ ಅನುಕೂಲಕ್ಕೆ ಎಲ್ಲಾ ಸಿದ್ಧತೆಗಳನ್ನು ಸಮರ್ಪಕವಾಗಿ ಕೈಗೊಳ್ಳುವಂತೆ ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ಜಾತ್ರಾ ಕಾರ್ಯಕ್ರಮಗಳ ಪೂರ್ವ ಸಿದ್ಧತಾ ಸಭೆಯಲ್ಲಿ ಮಾತನಾಡಿದ ಅವರು, ಜಾತ್ರೆಯಲ್ಲಿ ಭಕ್ತರಿಗೆ ಸಮರ್ಪಕವಾಗಿ ಕುಡಿಯುವ ನೀರು ಸರಬರಾಜು ಪೂರೈಸಬೇಕು. ಶುದ್ಧ ಕುಡಿಯುವ ನೀರು, ನೆರಳಿನ ವ್ಯವಸ್ಥೆ ಮಾಡಬೇಕು. ಸರತಿ ಸಾಲಿನಲ್ಲಿ ದೇವರ ದರ್ಶನ ಮಾಡುವ ಭಕ್ತರಿಗೆ ಶಾಮಿಯಾನ ಹಾಕುವ ಮೂಲಕ ನೆರಳಿನ ವ್ಯವಸ್ಥೆ ಕಲ್ಪಿಸಬೇಕು ಎಂದರು.

ಜಾತ್ರಾ ವೇಳೆ ಹೆಚ್ಚು ಭಕ್ತರು ಕ್ಷೇತ್ರಕ್ಕೆ ಆಗಮಿಸುವುದರಿಂದ ತಾತ್ಕಾಲಿಕ ಶೌಚಾಲಯಗಳನ್ನು ನಿರ್ಮಿಸಬೇಕು. ಸ್ನಾನಗೃಹ, ಶವರ್, ಲಗೇಜ್ ಕೌಂಟರ್ ತೆರೆಯಬೇಕು. ಅಂತರಗಂಗೆ ಸ್ನಾನಘಟ್ಟದಲ್ಲಿ ಶುಚಿತ್ವ ಕಾಪಾಡಲು ಕ್ರಮವಹಿಸಬೇಕು. ಜಾತ್ರಾ ದಿವಸಗಳಲ್ಲಿ ನಿರಂತರವಾಗಿ ದಾಸೋಹ ಇರಬೇಕು. ಪರ ಮಾಡುವ ಭಕ್ತರಿಗೆ ಅಗತ್ಯ ಸೌಲಭ್ಯ ಕಲ್ಪಿಸಬೇಕು. ನಿರಂತರ ದಾಸೋಹ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕು ಎಂದು ತಿಳಿಸಿದರು.

ಸ್ವಚ್ಛತೆಗೆ ಹೆಚ್ಚಿನ ಸಿಬ್ಬಂದಿ ನಿಯೋಜಿಸಿಕೊಳ್ಳಬೇಕು. ತಾಳಬೆಟ್ಟದಲ್ಲೂ ಸ್ವಚ್ಛತಾ ಕಾರ್ಯಕ್ಕಾಗಿ ಸಿಬ್ಬಂದಿ ನಿಯೋಜಿಸಬೇಕು. ಮಹದೇಶ್ವರಬೆಟ್ಟ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರದ ರಂಗಮಂದಿರದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಬೇಕು. ಸಾರಿಗೆ ನಿಗಮದಿಂದ ಹೆಚ್ಚು ಬಸ್‌ಗಳ ವ್ಯವಸ್ಥೆ ಕಲ್ಪಿಸಬೇಕು. ಆಹಾರ ಸುರಕ್ಷತೆ ಬಗ್ಗೆ ಗಮನಹರಿಸಬೇಕು ಎಂದರು.

ಸಭೆಯಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ, ಸಾಲೂರು ಮಠದ ಶ್ರೀ ಶಾಂತಮಲ್ಲಿಕಾರ್ಜುನ ಸ್ವಾಮೀಜಿ, ಡಿಸಿ ಶಿಲ್ಪನಾಗ್, ಜಿಪಂ ಸಿಇಓ ಮೋನಾ ರೋತ್, ಎಸ್‌ಪಿ ಡಾ. ಬಿ.ಟಿ.ಕವಿತಾ, ಮಹದೇಶ್ವರಸ್ವಾಮಿ ಕ್ಷೇತ್ರಾಭಿವೃದ್ಧಿ ಪ್ರಾಧಿಕಾರ ಕಾರ್ಯದರ್ಶಿ ರಘು, ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ಕೊಳ್ಳೇಗಾಲದಲ್ಲಿ ಉತ್ತಮ ಶಿಕ್ಷಕರಿಗೆ ಸನ್ಮಾನ...



ಕೊಳ್ಳೇಗಾಲದಲ್ಲಿ ಸೋಮವಾರ ನಡೆದ ಶಿಕ್ಷಕರ ದಿನಾಚರಣೆಯಲ್ಲಿ ಉತ್ತಮ ಶಿಕ್ಷಕರು ಹಾಗೂ ನಿವೃತ್ತ ಶಿಕ್ಷಕರನ್ನು ಸನ್ಮಾನಿಸಲಾಯಿತು. ಶಾಸಕ ಎ.ಆರ್.ಕೃಷ್ಣಮೂರ್ತಿ, ರಾಜ್ಯ ಉಗ್ರಾಣ ನಿಗಮದ ಅಧ್ಯಕ್ಷ ಎಸ್.ಜಯಣ್ಣ, ನಗರಸಭೆ ಅಧ್ಯಕ್ಷೆ ರೇಖಾ, ಉಪಾಧ್ಯಕ್ಷ ಶಂಕರ್, ಬಿಇಓ ಮಂಜುಳಾ, ತಾಪಂ ಇಓ ಗುರುಶಾಂತಪ್ಪ ಬೆಳ್ಳುಂಡಗಿ, ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ರಂಗಸ್ವಾಮಿ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಅಲೆಕ್ಸಾಂಡರ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಶ್ರೀಧರ್, ಕಾರ್ಯದರ್ಶಿ ನಂದೀಶ್, ಶಿವರಾಜು, ಅಕ್ಬರ್, ಉಮೇಶ್, ನಂಜುಂಡೇಗೌಡ, ಶಾಂತರಾಜು, ಪುಷ್ಪಲತಾ, ಸೋಮಶೇಖರ್, ಹರೀಶ್ ಇದ್ದರು.

ನೂರಾರು ಕೋಟಿ ಮೌಲ್ಯದ 10 ಎಕರೆ ಭೂಮಿಗೆ ತರಾತುರಿಯಲ್ಲಿ ಖಾತೆ

ಮೈಸೂರು ಪಾಲಿಕೆ ಸಹಾಯಕ ಕಂದಾಯ ಅಧಿಕಾರಿ ಸೇರಿ ಇಬ್ಬರು ಅಮಾನತು

ಮೈಸೂರು, ಸೆ.23(ಎಸ್‌ಬಿಡಿ)– ಮೈಸೂರಿನ ಜಯಲಕ್ಷ್ಮೀಪುರಂ ವ್ಯಾಪ್ತಿಯ ಕಾಳಿದಾಸ ರಸ್ತೆಯಲ್ಲಿ ಕುವೆಂಪು ಟ್ರಸ್ಟ್‌ಗೆ ಹೊಂದಿಕೊಂಡಂತಿರುವ ನೂರಾರು ಕೋಟಿ ಮೌಲ್ಯದ ಬರೋಬ್ಬರಿ 10 ಎಕರೆ ನಿವೇಶನವನ್ನು ಕುಟುಂಬವೊಂದಕ್ಕೆ ತರಾತುರಿಯಾಗಿ ಖಾತೆ ಮಾಡಿಕೊಟ್ಟು, ಈ ಬಗ್ಗೆ ಆಕ್ಷೇಪಣೆ ವ್ಯಕ್ತವಾದ ಒಂದೇ ದಿನದಲ್ಲಿ ಖಾತೆ ರದ್ದುಪಡಿಸುವ ತೀರ್ಮಾನ ಕೈಗೊಂಡಿರುವ ಸಂಬಂಧ ಮೈಸೂರು ಮಹಾನಗರ ಪಾಲಿಕೆಯ ಇಬ್ಬರು ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ.

ನಗರ ಪಾಲಿಕೆ ವಲಯ ಕಚೇರಿ-4ರ ಸಹಾಯಕ ಕಂದಾಯಾಧಿಕಾರಿ ಪಿ.ಬಾಬು ಹಾಗೂ ಕಂದಾಯ ನಿರೀಕ್ಷಕ ಆರ್.ರಕ್ಷಿತ್ ಅವರನ್ನು ಕರ್ತವ್ಯ ನಿರ್ಲಕ್ಷ್ಯತೆ ಹಾಗೂ ಕರ್ತವ್ಯ ಲೋಪದ ವಿರುದ್ಧ ಇಲಾಖಾ ವಿಚಾರಣೆ ಕಾಯ್ದಿರಿಸಿ, ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಯಿಂದ ಅಮಾನತುಗೊಳಿಸಿ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಅವರು ಸೋಮವಾರ ಆದೇಶಿಸಿದ್ದಾರೆ.

ಕುವೆಂಪು ಟ್ರಸ್ಟ್‌ಗೆ ಹೊಂದಿಕೊಂಡಂತಿರುವ ಹಿನಕಲ್ ಸರ್ವೆ ನಂ.155/ಎ ನಲ್ಲಿರುವ 10 ಎಕರೆ ಜಮೀನಿಗೆ ಅಕ್ರಮವಾಗಿ ಖಾತೆ ಮಾಡಿರುವ ಬಗ್ಗೆ 'ಮೈಸೂರು ಮಿತ್ರ' ಪತ್ರಿಕೆಯ ಸೆ.15ರ ಸಂಚಿಕೆಯಲ್ಲಿ **'ಮುಡಾ ಬ್ರಹ್ಮಾಂಡ ಭ್ರಷ್ಟಾಚಾರದ ಬೆನ್ನ ಹಿಂದೆಯೇ ಮೈಸೂರು ಮಹಾನಗರ ಪಾಲಿಕೆಯಲ್ಲೂ ನೂರಾರು ಕೋಟಿಯ 10 ಎಕರೆ ಭೂಮಿ ಕಬಳಿಕೆ ಯತ್ನ'** ಶೀರ್ಷಿಕೆಯಡಿ ಸುದ್ದಿ ಪ್ರಕಟವಾದ ಬೆನ್ನಲ್ಲೇ ಈ ಸಂಬಂಧ ಸೂಕ್ತ ಲಿಖಿತ ಸಮಜಾಯಿಷಿ ಸಲ್ಲಿಸಬೇಕು. ತಪ್ಪಿದಲ್ಲಿ ನಿಯಮಾನುಸಾರ ಕ್ರಮ ಜರುಗಿಸಲಾಗುವುದು ಎಂದು ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್ ಅವರಿಗೆ ಕಾರಣ ಕೇಳಿ ನೋಟಿಸ್ ಜಾರಿ ಮಾಡಿದ್ದರು. ಇದೀಗ ಪಾಲಿಕೆಯ ಸಮಜಾಯಿಷಿ ಪರಿಶೀಲಿಸಿ, ಈ ಕ್ರಮ ಕೈಗೊಂಡಿದ್ದಾರೆ.

ಡಿಸಿ ಆದೇಶದಲ್ಲೇನಿದೆ?: ಸೆ.15ರಂದು ದಾಖಲಾತಿಗಳೊಂದಿಗೆ ವರದಿ ಹಾಗೂ ಕಾರಣ ಕೇಳಿ ನೋಟಿಸ್ ನೀಡಲಾಗಿತ್ತು.



ಸದರಿ ನೋಟಿಸ್‌ಗೆ ನೀಡಿರುವ ಸಮಜಾಯಿಷಿಯನ್ನು ಪರಿಶೀಲಿಸಿದಾಗ ಅಧಿಕಾರಿಗಳ ಕರ್ತವ್ಯ ಲೋಪ ಕಂಡುಬಂದಿರುವುದಾಗಿ ಡಿಸಿ ಅವರು ಅಮಾನತು ಆದೇಶದಲ್ಲಿ ಹೀಗೆ ವಿವರಣೆ ನೀಡಿದ್ದಾರೆ.

ದಾಖಲಾತಿಗಳನ್ನು ಪರಿಶೀಲಿಸಲಾಗಿ, ತಮ್ಮ ಹೇಳಿಕೆಯಲ್ಲಿ ನೋಟರಿಯವರಿಂದ ದೃಢೀಕರಿಸಿರುವ ದಾಖಲಾತಿಗಳಾಗಿರುವುದರಿಂದ ವರದಿಗೆ ಕ್ರಮ ವಹಿಸಲಾಗಿದ್ದು, ಕಚೇರಿಯಲ್ಲಿರುವ ದಾಖಲೆಗಳಾದ ಅಸಸ್ಮೆಂಟ್ ವಹಿಗಳನ್ನು ಪರಿಶೀಲಿಸಲಾಗಿ 24-06-1988ರ ಉತ್ತರ ಪತ್ರದಲ್ಲಿ ಲೆಡ್ಜರ್ ನಂಬರ್, ಪೇಜ್ ನಂಬರ್ ಹಾಕಿರುವುದಿಲ್ಲವಾದ್ದರಿಂದ ಸದರಿಯವರ ಖಾತಾ ನೋಂದಣಿ ಯಾವ ಲೆಡ್ಜರ್‌ನಲ್ಲಿ ದಾಖಲಾಗಿದೆ ಎಂದು ತಿಳಿದುಬಂದಿರುವುದಿಲ್ಲ. ಆದಾಗ್ಯೂ ರಾಮಯ್ಯ ಹೆಸರಿನಲ್ಲಿ ಖಾತಾ ನೋಂದಣಿ ಇರುವುದನ್ನು ಖಾತರಿಪಡಿಸಿಕೊಳ್ಳದೇ ಕಚೇರಿ ಟಿಪ್ಪಣಿಯ ಕಂಡಿಕೆಯನ್ನು ಮೇಲಧಿಕಾರಿಗಳಿಗೆ ಕೇವಲ ನಿರ್ದೇಶನಕ್ಕೆ ಕೋರಿರುವುದು ಕಂಡು ಬಂದಿದೆ. ಕಂದಾಯ ನಿರೀಕ್ಷಕರಾದ ತಾವು ತಮ್ಮ ಕಚೇರಿಗೆ ಬರುವ ಖಾತಾ ಅರ್ಜಿಗಳ ಸಂಬಂಧ ಯಾವುದೇ ದಾಖಲಾತಿ ಇಲ್ಲದಿದ್ದ ಸಂದರ್ಭದಲ್ಲಿ ಅರ್ಜಿದಾರರಿಗೆ ಹಿಂಬರಹ ನೀಡಿ, ಮೂಲ ಹಂತದಲ್ಲಿಯೇ ಎಲ್ಲಾ ದಾಖಲಾತಿಗಳನ್ನು ಒದಗಿಸಲು ಕೋರಬಹುದಾಗಿತ್ತು. ಆದರೆ ಈ ರೀತಿ ಕ್ರಮವಹಿಸದೇ, ದಾಖಲಾತಿಗಳ ಬಗ್ಗೆ ಖಾತ್ರಿಪಡಿಸಿಕೊಳ್ಳದೇ ಮೇಲಧಿಕಾರಿಗಳಿಗೆ ನಿರ್ದೇಶನ ಕೋರುವುದು ಸೂಕ್ತ ಕ್ರಮವಾಗಿರುವುದಿಲ್ಲ.

ಕಂದಾಯ ನಿರೀಕ್ಷಕರಾದ ತಮ್ಮ ಕರ್ತವ್ಯವು ಯಾವುದೇ ಅರ್ಜಿ ಸ್ವೀಕೃತವಾದಾಗ, ಆಸ್ತಿ ಮೂಲ ವಹಿ ಹಾಗೂ ಇತರೆ ದಾಖಲಾತಿಗಳ ಸಕ್ಷಮ ಪ್ರಾಧಿಕಾರಿ ಇಲಾಖೆಗಳಿಂದ ನೈಜತೆ ಪರಿಶೀಲಿಸಿ ಇ-ಆಸ್ತಿ ನೀಡುವ ಎಲ್ಲಾ ಜವಾಬ್ದಾರಿ ಪೌರಾಡಳಿತ ನಿರ್ದೇಶನಾಲಯದ ಸುತ್ತೋಲೆ ಸಂಖ್ಯೆ 1058555/ಡಿಎಂಎ/ಡಿಇವಿ/ಕೆಹೆಚ್‌ಟಿಎ/20/2023 ದಿನಾಂಕ 01-08-2023ರಂತೆ ಕಂಡಿಕೆ(3)(5)(7)(8)ಗಳಲ್ಲಿ ಅನುಸರಿಸಲು ಹಾಗೂ ಇ-ಆಸ್ತಿ ತಂತ್ರಾಂಶದ ಮೂಲಕ ಅಗತ್ಯ ಕ್ರಮ ವಹಿಸಲು ಸೂಚಿಸಿ, ಆದೇಶಿಸಿರುವ ಸುತ್ತೋಲೆಯಂತೆ ಕ್ರಮ ವಹಿಸದಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

ಅರ್ಜಿದಾರರಾದ ಜಯಕುಮಾರ್ 05-09-2024ರಲ್ಲಿ ಅರ್ಜಿ ಸಲ್ಲಿಸಿ ಖಾತೆ ರದ್ದುಪಡಿಸಲು ಕೋರಿರುತ್ತಾರೆ. ನೈಜತೆ ಬಗ್ಗೆ ಸಂಬಂಧಪಟ್ಟ ಇಲಾಖೆ ಸಕ್ಷಮ ಪ್ರಾಧಿಕಾರದಿಂದ ದೃಢೀಕೃತ ಪ್ರತಿಗಳ ಪರಿಶೀಲನೆ ನಡೆಸುವವರೆಗೆ ಸದರಿ ಸ್ವತ್ತಿನ ಸಂಖ್ಯೆ 155/ಎ ಶ್ರೀಮತಿ ತುಳಸಮ್ಮ ಹಾಗೂ ಇತರರಿಗೆ ಪೌತಿ ಖಾತೆಯನ್ನು ಕೆಎಂಸಿ ಕಾಯ್ದೆ 1976 ನಿಯಮ 114(ಎ) ಪ್ರಕಾರ ರದ್ದುಪಡಿಸಲು ತಾವು ವರದಿ ಸಲ್ಲಿಸಿರುತ್ತೀರಿ. ಅರ್ಜಿದಾರರಿಗೆ ಪೂರ್ವ ನೋಟೀಸ್ ಜಾರಿ ಮಾಡಲು ನಿಯಮದಲ್ಲಿ ತಿಳಿಸಿದ್ದರೂ ತಾವು ಆ ರೀತಿ ವರದಿ ಮಂಡಿಸಿರುವುದಿಲ್ಲ. ಏಕಾಏಕಿ ಆಕ್ಷೇಪಣಾ ಅರ್ಜಿಯ ಮೇಲೆ ಕಡತ ಮಂಡಿಸಿರುವುದು ಈ ಎಲ್ಲಾ ಪ್ರಕ್ರಿಯೆಯನ್ನು ನಿಯಮ ಬಾಹಿರವಾಗಿ ಮಾಡಿರುವುದು ಮೇಲ್ನೋಟಕ್ಕೆ ಕಂಡು ಬಂದಿದೆ ಎಂದು ತಿಳಿಸಿದ್ದಾರೆ.

ಜಿಲ್ಲಾಧಿಕಾರಿಗಳು, ಪಾಲಿಕೆ ಆಯುಕ್ತರಿಗೆ ನೀಡಿದ್ದ ಶೋಕಾಸ್ ನೋಟಿಸ್ ಹಾಗೂ ಕಂದಾಯ ವಿಭಾಗದ ಇಬ್ಬರು ಅಧಿಕಾರಿಗಳ ಅಮಾನತು ಆದೇಶದಲ್ಲಿ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಂ ಹೇಳಿಕೆ ಹಾಗೂ ಅವರು ಒದಗಿಸಿದ ದಾಖಲೆ ಆಧಾರದಲ್ಲಿ 'ಮೈಸೂರು ಮಿತ್ರ'ದಲ್ಲಿ ಪ್ರಕಟವಾದ ವರದಿ ಪೂರ್ಣ ಸಾರಾಂಶವನ್ನು ದಾಖಲಿಸಿರುವುದು ಗಮನಾರ್ಹವಾಗಿದೆ.

ರಾಜಕಾರಣಿಗಳು ಅವಿರತ ದುಡಿದರೂ ನಮ್ಮ ದೇಶ ಉದ್ಧಾರ ಆಗಲ್ಲ

● ನಿವೃತ್ತ ಡಿಜಿಪಿ ಶಂಕರ್ ಮಹದೇವ ಬಿದರಿ ● ಶ್ರಮಿಕ ಸಮುದಾಯ ಬರೀ 4 ಗಂಟೆ ದುಡಿದರೆ ದೇಶ ಎಲ್ಲಾ ವಲಯದಲ್ಲೂ ಪ್ರಗತಿ ಸಾಧಿಸುತ್ತೆ ● ಡಾ.ಶಿವರಾತ್ರಿ ರಾಜೇಂದ್ರ ಸ್ವಾಮೀಜಿಗಳ 109ನೇ ಜಯಂತಿ ಕಾರ್ಯಕ್ರಮದಲ್ಲಿ ಭಾಗಿ

ಮೈಸೂರು,ಸೆ.23(ಎಸ್‌ಪಿಎನ್)– ರಾಜಕಾರಣಿಗಳು(ಸಿಎಂ-ಪಿಎಂ, ಸಚಿವ ಸಂಪುಟದ ಮಂತ್ರಿಗಳು, ಸರ್ಕಾರದ ಉನ್ನತ ಅಧಿಕಾರಿಗಳು) ದಿನಪೂರ್ತಿ ದುಡಿದರೂ ದೇಶ ಉದ್ಧಾರ ಆಗಲ್ಲ ಎಂದು ನಿವೃತ್ತ ಪೊಲೀಸ್ ಮಹಾ ನಿರ್ದೇಶಕ ಅಖಿಲ ಭಾರತ ವೀರಶೈವ-ಲಿಂಗಾಯತ ಮಹಾಸಭಾ ರಾಜ್ಯ ಘಟಕದ ಅಧ್ಯಕ್ಷ ಶಂಕರ ಮಹದೇವ ಬಿದರಿ ಅಭಿಪ್ರಾಯಪಟ್ಟರು.

ಮೈಸೂರು ಡಾ.ರಾಜಕುಮಾರ್ ರಸ್ತೆ ಜೆಎಸ್‌ಎಸ್ ಮೊದಲನೇ ಹಂತದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ನೌಕರರ ಗೃಹ ನಿರ್ಮಾಣ ಸಂಘದ ವತಿಯಿಂದ ನಡೆದ ಡಾ.ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರ 109ನೇ ಜಯಂತಿ ಮತ್ತು ಪ್ರತಿಭಾ ಪುರಸ್ಕಾರದಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಶ್ರಮಿಕರು, ಕಾರ್ಮಿಕರು, ರೈತರು, ನೌಕರರು ದಿನದಲ್ಲಿ 4 ಗಂಟೆ ಪ್ರಾಮಾಣಿಕವಾಗಿ ದುಡಿದರೆ, ನಮ್ಮ ದೇಶ, ಜಗತ್ತಿನ ಇತರೆ ದೇಶಗಳಿಗಿಂತ ಎಲ್ಲ ವಲಯದಲ್ಲೂ ಎತ್ತರ ಸ್ಥಾನದಲ್ಲಿರುತ್ತದೆ ಎಂದು ತಿಳಿಸಿದರು.



ಡಾ.ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರ 109ನೇ ಜಯಂತಿ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ನಿವೃತ್ತ ಡಿಜಿಪಿ ಶಂಕರ ಮಹದೇವ ಬಿದರಿ ಉದ್ಘಾಟಿಸಿದರು.

ರಾಜಕಾರಣಿಗಳು ದಿನದ 24 ಗಂಟೆ ಕೆಲಸ ಮಾಡುತ್ತಾರೆ ಎಂದು ಮಾಧ್ಯಮಗಳಲ್ಲಿ ಪ್ರಕಟವಾಗುತ್ತದೆ. ಹಾಗಾದರೆ, ಇಷ್ಟು ಕೆಲಸ ಮಾಡಿದರೂ ಇಷ್ಟು ವರ್ಷ ದೇಶದ ಪರಿಸ್ಥಿತಿ ಏಕೆ ಬದಲಾಗಿಲ್ಲ ಎಂದು ಪ್ರಶ್ನಿಸಿದ ಅವರು, ನೂರಾರು ಮಂದಿ ದಿನಪೂರ್ತಿ ಕೆಲಸ ಮಾಡಿದರೆ, ಸಾವಿರ ಸಾವಿರ ಗಂಟೆಗಳು ಕೆಲಸ ಮಾಡಿದಂತಾಗುತ್ತದೆ. ಬದಲಾಗಿ, ನಮ್ಮ ದೇಶದ 140 ಕೋಟಿ ಜನರಲ್ಲಿ 18 ವರ್ಷ ಮೇಲ್ಪಟ್ಟ ಯುವಕರು, ಮಧ್ಯಮ ವಯಸ್ಕರು ಹಾಗೂ ಆಯಾಯ ಕ್ಷೇತ್ರದ ತಜ್ಞರು ಸೇರಿದರೆ ಒಟ್ಟು 100 ಕೋಟಿ ಜನರು ತಮ್ಮ ಕ್ಷೇತ್ರದಲ್ಲಿ ಪ್ರಾಮಾಣಿಕವಾಗಿ 4 ಗಂಟೆ ದುಡಿದರೂ ಕೋಟಿ ಕೋಟಿ ಗಂಟೆಗಳು ಕೆಲಸ ಮಾಡಿದಂತಾಗುತ್ತದೆ. ಇದರಿಂದ ದೇಶದ ಆರ್ಥಿಕ, ಶೈಕ್ಷಣಿಕ, ಸಾಮಾಜಿಕವಾಗಿ ಪ್ರಗತಿ ಸಾಧಿಸಬಹುದು ಎಂದು ಅಭಿಪ್ರಾಯಪಟ್ಟರು.

ನಮ್ಮ ತಂದೆ-ತಾಯಿಗಳ ಮನನೋಯಿಸಿ, ಹೊಟ್ಟೆಗೆ ಅನ್ನ-ನೀರು ನೀಡದೇ ಜಗತ್ತಿನ ಪ್ರಸಿದ್ಧ ದೇವಸ್ಥಾನಗಳ ಯಾತ್ರೆ ಮಾಡಿದರೆ, ಖಂಡಿತ ಫಲ ಸಿಗುವುದಿಲ್ಲ. ಬದಲಾಗಿ, ಆ ಕುಟುಂಬಕ್ಕೆ ಮತ್ತಷ್ಟು ಸಂಕಷ್ಟ ಹೆಚ್ಚಾಗುತ್ತದೆ. ಹಾಗಾಗಿ ಯುವ ಪೀಳಿಗೆ ತಮ್ಮ ತಂದೆ-ತಾಯಿಯನ್ನು ದೇವರೆಂದು ಭಾವಿಸಿ, ಬದುಕಿರುವವರೆಗೂ ಚೆನ್ನಾಗಿ ನೋಡಿಕೊಂಡರೆ ಅದೇ ದೇವರ ಸೇವೆ. ಈ ಕಾಯಕ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಗೆ ಇಷ್ಟವಾಗುತ್ತದೆ ಎಂದು ಕಿವಿಮಾತು ಹೇಳಿದರು.

ಒಂದು ಸಮುದಾಯ ದೇಶದ ಪ್ರಗತಿ ಮತ್ತು ಸಮಾಜದ ಮುಖ್ಯವಾಹಿನಿಯಲ್ಲಿ ಗುರುತಿಸಿಕೊಳ್ಳಬೇಕಾದರೆ, ಕಾನೂನು ಸುವ್ಯವಸ್ಥೆ ಪಾಲಿಸಬೇಕು. ತಮ್ಮ ತಮ್ಮ ಕುಟುಂಬದ ಸದಸ್ಯರಿಗೆ ಉತ್ತಮ ಸಂಸ್ಕಾರ ಕೊಡಬೇಕು. ತಮ್ಮ ನೆರೆಹೊರೆಯವರೊಂದಿಗೆ ಶಾಂತಿ, ಸಹಬಾಳ್ವೆಯೊಂದಿಗೆ ಜೀವನ ನಡೆಸಿದರೆ ಅದೇ ನಾವು ದೇಶದ ಉನ್ನತಿ, ಪ್ರಗತಿಗೆ ನೀಡುವ ದೊಡ್ಡ ಕೊಡುಗೆ ಎಂದರು.

ಬದಲಾಗಿ ಕಾನೂನು ಸುವ್ಯವಸ್ಥೆ, ಶೈಕ್ಷಣಿಕ, ಆರ್ಥಿಕತೆ ಹಾಗೂ ಸಹೋದರತ್ವ, ಭ್ರಾತೃತ್ವಕ್ಕೆ ಒತ್ತು ನೀಡದ ಸಮುದಾಯಗಳು, ಉತ್ತಮ ಜೀವನ ರೂಪಿಸಿಕೊಳ್ಳಲು ಸಾಧ್ಯವೇ ಇಲ್ಲ. ಹಾಗಾಗಿ ದೇಶವನ್ನು ಬದಲಿಸುತ್ತೇವೆ, ಧರ್ಮವನ್ನು ಉಳಿಸುತ್ತೇವೆ ಎಂದು ರಾಜಕಾರಣಿಗಳ ದೊಡ್ಡ ದೊಡ್ಡ ಮಾತುಗಳಿಗೆ ತಲೆಕೆಡಿಸಿಕೊಳ್ಳದೆ, ತಮ್ಮ ತಮ್ಮ ಕುಟುಂಬಗಳ ನೆಮ್ಮದಿಗೆ ಸಮಯ ಮೀಸಲಿರಿಸುವಂತೆ ಕಿವಿಮಾತು ಹೇಳಿದರು.

ಈ ವೇಳೆ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತೀ ಹೆಚ್ಚು ಅಂಕಗಳಿಸಿದ ಬಿ.ಎಸ್.ಸಹನ, ವಿ.ಜೆ.ಹರ್ಷಿತ, ಎಂ.ಎಸ್.ಗುರು ಕಿರಣ್, ಎಲ್.ಸ್ನೇಹ, ಎಸ್.ಕಿರಣಬಾಬು, ಎಂ.ಶ್ರೇಯ ಅವರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು. ಈ ವೇಳೆ ಆಧ್ಯಾತ್ಮಿಕ ಚಿಂತಕ ಶಂಕರ್ ದೇವನೂರು ಅವರು, ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಕುರಿತು ಮಾತನಾಡಿ ದರು. ಕುಂದೂರು ಮಠದ ಡಾ.ಶರಚ್ಚಂದ್ರ ಸ್ವಾಮೀಜಿ, ಜೆಎಸ್‌ಎಸ್ ಮಹಾವಿದ್ಯಾಪೀಠದ ನೌಕರರ ಗೃಹ ನಿರ್ಮಾಣ ಸಂಘದ ಅಧ್ಯಕ್ಷ ಸರ್ಪಭೂಷಣ್ ಸೇರಿದಂತೆ ಸಂಘ ನಿರ್ದೇಶಕರು ಉಪಸ್ಥಿತರಿದ್ದರು.

ದೆಹಲಿಯ ಎಂಟನೇ ಮುಖ್ಯಮಂತ್ರಿಯಾಗಿ ಆತಿಶಿ ಕಾರ್ಯಾರಂಭ

ಕೇಜ್ರಿವಾಲ್ ಗಾಗಿ ಕುರ್ಚಿ ಖಾಲಿ ಬಿಟ್ಟ ಆಪ್ ನಾಯಕಿ!

ನವದೆಹಲಿ: ಮೊನ್ನೆ ಶನಿವಾರ ಪ್ರಮಾಣ ವಚನ ಸ್ವೀಕರಿಸಿದ ಆಮ್ ಆದ್ಮಿ ಪಕ್ಷದ ನಾಯಕಿ ಅತಿಶಿ ಇಂದು ಸೋಮವಾರ ದೆಹಲಿಯ ಎಂಟನೇ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿಕೊಂಡರು.

ದೆಹಲಿ ವಿಧಾನಸಭೆಯ ಅಧಿವೇಶನ ಇದೇ ಸೆಪ್ಟೆಂಬರ್ 26 ಮತ್ತು 27 ರಂದು ನಡೆಯಲಿದೆ. ಅತಿಶಿ ಅವರು ಸರ್ಕಾರದಲ್ಲಿ ಶಿಕ್ಷಣ, ಆದಾಯ, ಹಣಕಾಸು, ವಿದ್ಯುತ್ ಮತ್ತು ಲೋಕೋಪಯೋಗಿ ಇಲಾಖೆ ಸೇರಿದಂತೆ 13 ಖಾತೆಗಳನ್ನು ತಮ್ಮ ಬಳಿ ಉಳಿಸಿಕೊಂಡಿದ್ದಾರೆ.

ಭಗವಾನ್ ರಾಮನ ಖಾದೌನ್‌ನ್ನು ಸಿಂಹಾಸನದ ಮೇಲೆ ಕೂರಿಸಿ ಭಾರತ ಆಳಿದಂತೆ ದೆಹಲಿಯ ಮುಖ್ಯಮಂತ್ರಿಯಾಗಿ ನಾನು ಮುಂದಿನ ನಾಲ್ಕು ತಿಂಗಳು ಕೆಲಸ ಮಾಡುತ್ತೇನೆ. ಅರವಿಂದ್ ಕೇಜ್ರಿವಾಲ್ ಅವರು ಮುಖ್ಯಮಂತ್ರಿ ಪದವಿಯಿಂದ ಕೆಳಗಿಳಿಯುವ ಮೂಲಕ ರಾಜ ಕೀಯದಲ್ಲಿ ಘನತೆ ಉಳಿಸಿಕೊಂಡಿದ್ದಾರೆ. ಅವರ ವ್ಯಕ್ತಿತ್ವವನ್ನು ಹಾಳುಮಾಡಲು ಬಿಜೆಪಿಯವರಿಗೆ ಅವಕಾಶ ನೀಡುವುದಿಲ್ಲ ಎಂದು ಅಧಿಕಾರ ವಹಿಸಿಕೊಂಡ ಕೂಡಲೇ ಹೇಳಿದರು.

ಪಕ್ಕದಲ್ಲಿ ಕುರ್ಚಿ ಹಾಕಿ ಕುಳಿತ ಆತಿಶಿ: ಕೇಜ್ರಿವಾಲ್ ಅವರು ಮುಖ್ಯಮಂತ್ರಿಯಾಗಿ ಕುಳಿತುಕೊಂಡಿದ್ದ ಕುರ್ಚಿಯಲ್ಲಿ ಕೂರದೆ ಆತಿಶಿ ಅವರು ಪಕ್ಕದಲ್ಲಿ ಕುರ್ಚಿ ಹಾಕಿ ಕುಳಿತರು. ಕೇಜ್ರಿವಾಲ್ ಅವರು ಕುಳಿತುಕೊಂಡಿದ್ದ ಕುರ್ಚಿ ಹಾಗೆಯೇ ಖಾಲಿ ಇದೆ.

ಖಾತೆಗಳ ಹಂಚಿಕೆ: ಸೌರಭ್ ಭಾರದ್ವಾಜ್ ಅವರ ಅಡಿಯಲ್ಲಿ ಎಂಟು ಇಲಾಖೆಗಳನ್ನು ಹೊಂದಿದ್ದಾರೆ, ಆರೋಗ್ಯ, ಪ್ರವಾಸೋದ್ಯಮ, ಕಲೆ ಮತ್ತು ಸಂಸ್ಕೃತಿ ಸೇರಿದಂತೆ ಅತಿಶಿ ನಂತರ ಅತಿ ಹೆಚ್ಚು ಖಾತೆಗಳನ್ನು ಹೊಂದಿದ್ದಾರೆ. ಹೊಸದಾಗಿ ಸೇರ್ಪಡೆಗೊಂಡ ಮುಖೇಶ್ ಅಹ್ಲಾವತ್ ಅವರು ಕಾರ್ಮಿಕ, ಎಸ್‌ಸಿ ಮತ್ತು ಎಸ್‌ಟಿ, ಉದ್ಯೋಗ ಮತ್ತು ಭೂ ಮತ್ತು ಕಟ್ಟಡ ಇಲಾಖೆಗಳ ಖಾತೆಯನ್ನು ಪಡೆದುಕೊಂಡಿದ್ದಾರೆ.

ವಸ್ತುಪ್ರದರ್ಶನ ಪ್ರಾಧಿಕಾರದಿಂದ ಪೌರಕಾರ್ಮಿಕರಿಗೆ ಅಭಿನಂದನೆ

ಮೈಸೂರು,ಸೆ.23(ಜಿಎ)–ಪೌರಕಾರ್ಮಿಕರ ದಿನಾಚರಣೆ ಅಂಗವಾಗಿ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ವತಿಯಿಂದ ಪ್ರಾಧಿಕಾರದ ಆವರಣದಲ್ಲಿ ಪೌರ ಕಾರ್ಮಿಕರನ್ನು ಅಭಿನಂದಿಸಲಾಯಿತು.

ಈ ವೇಳೆ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್ ಮಾತನಾಡಿ, ಚಳಿ, ಗಾಳಿ, ಮಳೆ ಮತ್ತು ಬಿಸಿಲು ಲೆಕ್ಕಿಸದೇ ಮೈಸೂರನ್ನು ಸ್ವಚ್ಛ ಮಾಡಿ ನಮಗಾಗಿ ಆರೋಗ್ಯಕರ ಸಮಾಜ ನಿರ್ಮಾಣ ಮಾಡುವಲ್ಲಿ ಶ್ರಮಿಸುವ ಪೌರಕಾರ್ಮಿಕರ ಸೇವೆ ಶ್ಲಾಘನೀಯವಾದುದು ಎಂದರು.

ಮೈಸೂರು ದಸರಾ ವಸ್ತುಪ್ರದರ್ಶದಲ್ಲೂ ಸಹ ಪೌರಕಾರ್ಮಿಕರ ತಂಡದ ಮೂಲಕ ಈ ಭಾರಿ ವಿಶೇಷ ಸ್ವಚ್ಛತಾ



ಯೋಜನೆ, ಸ್ವಚ್ಛತೆಯ ಜಾಗೃತಿ ಕಾರ್ಯಕ್ರಮ ರೂಪಿಸಲಾಗಿದ್ದು, ಪ್ರಾಧಿಕಾರದ ಆವರಣದಲ್ಲಿ ಕಡ್ಡಾಯವಾಗಿ ಪ್ಲಾಸ್ಟಿಕ್ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಮೈಸೂರುನ್ನ ಸ್ವಚ್ಛ ನಗರಿಯಾಗಿ ಕಾಪಾಡಿಕೊಳ್ಳುವುದು ಪ್ರತಿಯೊಬ್ಬ ನಾಗರಿಕರ ಜವಾಬ್ದಾರಿಯಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಮಾಜಿ ಮೇಯರ್ ನಾರಾಯಣ್, ವಕ್ಫ್ ಬೋರ್ಡ್ ಅಧ್ಯಕ್ಷ ಅಕ್ರಮ್, ರವಿ ಮಂಚೇಗೌಡನಕೊಪ್ಪಲು, ಪಳನಿ ಸ್ವಾಮಿ, ಕೈಸರ್ ಅಹಮ್ಮದ್, ರಘುರಾಜೇ ಅರಸ್, ನಾಗೇಶ್, ಅಜಯ್ ಶಾಸ್ತ್ರಿ, ಕೃಷ್ಣ ಗೃಹಶೋಭೆ, ರಂಗಸ್ವಾಮಿ ಪಾಪು, ಒಂಟಿಕೊಪ್ಪಲ್ ಗುರುರಾಜ್, ರೋಹಿತ್, ಕೆ.ನಾಗರತ್ನ, ಮಂಜುನಾಥ್, ನಾಗರಾಜು, ದಾಸ್, ಶಿವಣ್ಣ ಉಪಸ್ಥಿತರಿದ್ದರು.

ಸೇವೆ, ಸ್ವಚ್ಛತಾ ಕಾರ್ಯದ ಮೂಲಕ ಸಾರ್ಥಕ ರೀತಿಯಲ್ಲಿ

ಪಾಲಿಕೆ ಮಾಜಿ ಸದಸ್ಯ ಕೆ.ವಿ.ಶ್ರೀಧರ್ ಜನ್ಮದಿನಾಚರಣೆ

ಸಾರ್ವಜನಿಕ ಸ್ಥಳದಲ್ಲಿ ಕಸ ಹಾಕುವುದನ್ನು ತಡೆಗಟ್ಟಲು ನವಭಾರತ್ ನಿರ್ಮಾಣ ಸೇವಾ ಟ್ರಸ್ಟ್‌ನಿಂದ ನೂತನ ತಂತ್ರಜ್ಞಾನದ ಸಿಸಿ ಕ್ಯಾಮರಾ ಅಳವಡಿಕೆ



ಹೆಬ್ಬಾಳು ಮಹದೇಶ್ವರ ಬಡಾವಣೆಯ ಚಾಮುಂಡೇಶ್ವರಿ ದೇವಸ್ಥಾನದ ಆವರಣದಲ್ಲಿ ಸೋಮವಾರ ಜನ್ಮದಿನದ ಪ್ರಯುಕ್ತ ಕೆ.ವಿ.ಶ್ರೀಧರ್ ಕೇಕ್ ಕತ್ತರಿಸಿ ಹಂಚಿದರು. ಇದೇ ವೇಳೆ ಅವರನ್ನು ಸ್ನೇಹಿತರು, ಅಭಿಮಾನಿಗಳು ಹಾಗೂ ಹಿತೈಷಿಗಳು ಸನ್ಮಾನಿಸಿ, ಅಭಿನಂದಿಸಿದರು.



ಸಾರ್ವಜನಿಕ ಸ್ಥಳದಲ್ಲಿ ಇರಿಸಿದ್ದ ದೇವರ ಫೋಟೋಗಳನ್ನು ವಿಲೇವಾರಿ ಮಾಡಲಾಯಿತು.

ಮೈಸೂರು,ಸೆ.23(ಪಿಎಂ)– ಸೇವಾ ಕಾರ್ಯಕ್ರಮ ಹಾಗೂ ಸ್ವಚ್ಛತಾ ಶ್ರಮದಾನ ನಡೆಸುವ ಮೂಲಕ ರಾಜ್ಯ ಒಕ್ಕಲಿಗರ ಸಂಘ, ಪಿಎಲ್‌ಡಿ ಬ್ಯಾಂಕ್ ನಿರ್ದೇಶಕರು, ಮೈಸೂರು ಮಹಾನಗರ ಪಾಲಿಕೆ ಮಾಜಿ ಸದಸ್ಯರೂ ಆದ ನವಭಾರತ್ ನಿರ್ಮಾಣ ಸೇವಾ ಟ್ರಸ್ಟ್ ಅಧ್ಯಕ್ಷ ಕೆ.ವಿ.ಶ್ರೀಧರ್ ತಮ್ಮ ಜನ್ಮದಿನವನ್ನು ಸೋಮವಾರ ಸಾರ್ಥಕ ರೀತಿಯಲ್ಲಿ ಆಚರಿಸಿಕೊಂಡರು.

ಹೆಬ್ಬಾಳು ಮಹದೇಶ್ವರ ಬಡಾವಣೆಯಲ್ಲಿ ತಮ್ಮ ಸ್ನೇಹಿತರು, ಅಭಿಮಾನಿಗಳು ಹಾಗೂ ಹಿತೈಷಿಗಳ ಜೊತೆಗೂಡಿ ಸ್ವಚ್ಛತಾ ಶ್ರಮದಾನ ಮಾಡಿದ್ದು ಮಾತ್ರವಲ್ಲದೆ, ಸಾರ್ವಜನಿಕ ಪ್ರದೇಶದಲ್ಲಿ ಕಸ ಹಾಕಿ ಅನೈರ್ಮಲ್ಯ ಉಂಟು ಮಾಡುವವರ ಮೇಲೆ ನಿಗಾ ವಹಿಸಲು ಮೂರು ಸ್ಥಳಗಳಲ್ಲಿ ಸಿಸಿಟಿವಿ ಕ್ಯಾಮರಾ ಅಳವಡಿಕೆಗೂ ನವಭಾರತ್ ನಿರ್ಮಾಣ ಸೇವಾ ಟ್ರಸ್ಟ್‌ನಿಂದ ಕ್ರಮ ವಹಿಸಲಾಯಿತು.

ಅಲ್ಲದೆ, ಇಲ್ಲಿನ ಚಾಮುಂಡೇಶ್ವರಿ ದೇವಸ್ಥಾನದ ಆವರಣದಲ್ಲಿ ಸಾರ್ವಜನಿಕರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು. ಅಗರ್ವಾಲ್ ಕಣ್ಣಿನ ಆಸ್ಪತ್ರೆಯಿಂದ ಕಣ್ಣಿನ ತಪಾಸಣೆ ಹಾಗೂ ಸ್ಪಂದನ ಹಾಸ್ಪಿಟಲ್‌ನಿಂದ ಬಿಪಿ, ಶುಗರ್ ಹಾಗೂ ಜನರಲ್ ಚೆಕಪ್ ನಡೆಸಲಾಯಿತು. 300ಕ್ಕೂ ಹೆಚ್ಚು ಮಂದಿ ಈ ಉಚಿತ ಆರೋಗ್ಯ ತಪಾಸಣೆ ಶಿಬಿರ ಪ್ರಯೋಜನ ಪಡೆದರು. ಕೆ.ವಿ.ಶ್ರೀಧರ್ ಅವರು ಖುದ್ದು ಸ್ಥಳದಲ್ಲಿದ್ದು ಶಿಬಿರದಲ್ಲಿ ಭಾಗವಹಿಸಿದ್ದವರ ಆರೋಗ್ಯ ವಿಚಾರಿಸಿದರು.

ಸಿಸಿಟಿವಿ ಕ್ಯಾಮರಾ ಅಳವಡಿಕೆ: ಬಡಾವಣೆಯ ಮೂರು ಸ್ಥಳಗಳಲ್ಲಿ ನವಭಾರತ್ ನಿರ್ಮಾಣ ಸೇವಾ ಟ್ರಸ್ಟ್‌ನಿಂದ ಮೂರು ಸಿಸಿಟಿವಿ ಕ್ಯಾಮರಾ ಅಳವಡಿಸಲಾಯಿತು. ಆ ಮೂಲಕ ಸಾರ್ವಜನಿಕ ಸ್ಥಳದಲ್ಲಿ ಕಸ ಎಸೆದು ಹೋಗುವವರ ವಿರುದ್ಧ ಕ್ರಮ ಕೈಗೊಳ್ಳಲು ವ್ಯವಸ್ಥೆ ಮಾಡಲಾಯಿತು.

ಪಾಲಿಕೆ ಸದಸ್ಯರಾಗಿದ್ದಾಗಲೇ ಕಸ ಮುಕ್ತ ವಾರ್ಡ್ ಮಾಡಲು ಪಣ ತೊಟ್ಟಿದ್ದ ಶ್ರೀಧರ್, ರಾತ್ರಿ ವೇಳೆ ಎಲ್ಲೆಂದರಲ್ಲಿ ಕಸ ಹಾಕುವ ಪ್ರವೃತ್ತಿಗೆ ಕಡಿವಾಣ ಹಾಕಲು ಸ್ಥಳದಲ್ಲಿ ಸೆಕ್ಯೂರಿಟಿ ಗಾರ್ಡ್‌ಗಳನ್ನು ಸಹ ನೇಮಿಸಿದ್ದರು. ಮಾತ್ರವಲ್ಲದೆ ಸ್ವತಃ ತಾವೇ ವಾರ್ಡ್ ಸುತ್ತಿ ಕಸ ಬೀಸಾಡುವವರಿಗೆ ಸ್ವಚ್ಛತೆ ಅರಿವು ಮೂಡಿಸುವ ಪ್ರಯತ್ನ ಮಾಡಿದ್ದರು. ಇದೀಗ ಸಿಸಿಟಿವಿ ಕ್ಯಾಮರಾ ಅಳವಡಿಸಿರುವುದು ಮಾತ್ರವಲ್ಲದೆ, ಪಾಲಿಕೆ ಅಧಿಕಾರಿಗಳಿಗೂ ಕ್ಯಾಮರಾದ ಲಿಂಕ್ ಒದಗಿಸುವ ವ್ಯವಸ್ಥೆ ಮಾಡಿ, ಕಸ ಎಸೆದು ಹೋಗುವವರನ್ನು ಪತ್ತೆಹಚ್ಚಿ ದಂಡ ವಿಧಿಸಲು ಅನುಕೂಲವಾಗುವಂತೆ ಮಾಡಿದ್ದಾರೆ. ಆ ಮೂಲಕ ಸ್ವಚ್ಛತೆ ಕಾಪಾಡಲು ಮುಂದಾಗಿದ್ದಾರೆ.

ಅಲ್ಲದೆ, ದೇವರ ಫೋಟೋಗಳನ್ನು ಎಲ್ಲೆಂದರಲ್ಲಿ ಇಟ್ಟು ಹೋಗಿರುವುದನ್ನು ಕಂಡು ಕೆ.ವಿ.ಶ್ರೀಧರ್ ಬೇಸರ ವ್ಯಕ್ತಪಡಿಸಿದರು. ಅಲ್ಲದೆ, ಅವುಗಳನ್ನು ಸಂಗ್ರಹಿಸಿ ವಿಧಿ ವಿಧಾನದಂತೆ ಭಕ್ತಿಪೂರ್ವಕವಾಗಿ ವಿಲೇವಾರಿ ಮಾಡಿದರು. ಸಿಸಿಟಿವಿ ಅಳವಡಿಸುವ ವೇಳೆ ಮಾತನಾಡಿದ ಕೆ.ವಿ.ಶ್ರೀಧರ್, ದೇವರ ಫೋಟೋ ಇರಿಸಿ ಕಸ ಹಾಕುವುದನ್ನು ತಪ್ಪಿಸಬಹುದು ಎಂಬುದು ಕೆಟ್ಟ ಆಲೋಚನೆ. ಇದು ಸರಿಯಲ್ಲ. ಈ ರೀತಿ ಯಾರೂ ಮಾಡಬಾರದು ಎಂದು ಮನವಿ ಮಾಡಿದರು.

ನಗರ ಪಾಲಿಕೆಯಿಂದ ಎಷ್ಟೇ ಶ್ರಮ ವಹಿಸಿ ಸ್ವಚ್ಛತಾ ಕೆಲಸ ನಿರ್ವಹಿಸುತ್ತಿದ್ದರೂ ಹಾಗೂ ಪೌರಕಾರ್ಮಿಕರು ಮನೆ ಮನೆ ಬಾಗಿಲಿಗೆ ಹೋಗುತ್ತಿದ್ದರೂ ಕಸ ಸಂಗ್ರಹಿಸುತ್ತಿದ್ದರೂ ಕೆಲವರು ಸಾರ್ವಜನಿಕ ಸ್ಥಳದಲ್ಲಿ ಕಸ ತಂದು ಹಾಕುವ ಕೆಟ್ಟ ಪ್ರವೃತ್ತಿ ಬೆಳೆಸಿಕೊಂಡಿದ್ದಾರೆ. ರಾತ್ರಿ ವೇಳೆ ಸ್ಕೂಟರ್‌ನಲ್ಲಿ ಕಸ ತಂದು ಬೀಸಾಡುತ್ತಾರೆ. ಈ ಹಿಂದೆ ಸೆಕ್ಯೂರಿಟಿ ಗಾರ್ಡ್ ನಿಯೋಜಿಸಿದ್ದೆವು. ಇದೀಗ ಕ್ಯಾಮರಾ ಹಾಕುವ ವ್ಯವಸ್ಥೆ ಮಾಡುತ್ತಿದ್ದೇವೆ. ಆ ಮೂಲಕ ಕಸ ಹಾಕದಂತೆ ನೋಡಿಕೊಳ್ಳಲು ಪ್ರಯತ್ನ ಮಾಡುತ್ತಿದ್ದೇವೆ. ವಾರ್ಡ್ ಅನ್ನು ಸ್ವಚ್ಛತೆಯಿಂದ ಇಟ್ಟುಕೊಳ್ಳಬೇಕೆಂಬುದು ನಮ್ಮ ಸದುದ್ದೇಶವಾಗಿದೆ ಎಂದು ಹೇಳಿದರು.



ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಸಲಾಯಿತು

ಚಿಪ್ ಹೊಂದಿರುವ ಸೋಲಾರ್ ಸಿಸಿಟಿವಿ ಕ್ಯಾಮರಾಗಳನ್ನು ಅಳವಡಿಕೆ ಮಾಡಿದ್ದು, ಕಸ ಹಾಕಿದರೆ ಸೈರನ್ ಸೌಂಡ್ ಬರಲಿದೆ. ಒಂದೇ ಸಿಸಿಟಿವಿ ಕ್ಯಾಮರಾದಲ್ಲಿ ಎರಡು ಲೆನ್ಸ್‌ಗಳಿದ್ದು, ದೃಶ್ಯಾವಳಿ ಮಾತ್ರವಲ್ಲದೆ ಆಡಿಯೋ ಸಹ ರೆಕಾರ್ಡ್ ಮಾಡಲಿದೆ. ಜೊತೆಗೆ ಇದರ ಲಿಂಕ್ ಅನ್ನು ಪಾಲಿಕೆ ಅಧಿಕಾರಿಗಳಿಗೂ ದೊರೆಯುವ ವ್ಯವಸ್ಥೆ ಮಾಡಿದ್ದು, ಇದರಿಂದ ಕಸ ಹಾಕಿದವರಿಗೆ ದಂಡ ಹಾಕಲು ಅನುಕೂಲವಾಗಲಿದೆ. ಇನ್ನು ಏಳು ಸ್ಥಳಗಳಲ್ಲಿ ಇದೇ ರೀತಿ ಕಸ ಹಾಕುತ್ತಿದ್ದು ಮುಂದಿನ ದಿನಗಳಲ್ಲಿ ಇಲ್ಲೂ ಕ್ಯಾಮರಾಗಳನ್ನು ಅಳವಡಿಸಲಾಗುವುದು ಎಂದರು.

ನಗರದ ಸ್ವಚ್ಛತೆ ಕಾಪಾಡಿಕೊಳ್ಳುವುದು ನಾಗರಿಕರ ಆದ್ಯ ಕರ್ತವ್ಯ. ಮೈಸೂರು ಮತ್ತೊಮ್ಮೆ ದೇಶದ ಸ್ವಚ್ಛ ನಗರವಾಗಿ ಹೊರಹೊಮ್ಮಬೇಕು ಎಂಬ ನಿಟ್ಟಿನಲ್ಲಿ ನಾವು ಪ್ರಯತ್ನ ಮಾಡುತ್ತಿದ್ದೇವೆ. ಸ್ವಚ್ಛ ಸರ್ವೇಕ್ಷಣದಲ್ಲಿ ಮತ್ತೆ ಮೈಸೂರು ನಂಬರ್ 1 ಆಗಬೇಕು. ಇದಕ್ಕೆ ನಾಗರಿಕರು ಪೂರ್ಣ ಪ್ರಮಾಣದ ಸಹಕಾರ ನೀಡಬೇಕು ಎಂದು ಕೋರಿದರು. ನಗರ ಪಾಲಿಕೆ ಮಾಜಿ ಸದಸ್ಯ ಕೆ.ವಿ.ಮಲ್ಲೇಶ್ ಸೇರಿದಂತೆ ಕೆ.ವಿ.ಶ್ರೀಧರ್ ಅವರ ಸ್ನೇಹಿತರು, ಅಭಿಮಾನಿಗಳು ಹಾಗೂ ಹಿತೈಷಿಗಳು ಹಾಜರಿದ್ದರು.

ರಾಷ್ಟ್ರೀಯ ಮಟ್ಟಕ್ಕೆ ಆಯ್ಕೆ



ಕೊಡಗು ಜಿಲ್ಲೆ, ಗೋಣಿಕೊಪ್ಪದ ಕೂರ್ಗ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿ, ಮೈಸೂರಿನ ಕುಂಬಾರಕೊಪ್ಪಲಿನ ಕೆ.ಸಿ.ಸುಖಾಂತ್ ಗೌಡ, ತೆಲಂಗಾಣ ರಾಜ್ಯ, ಹೈದರಾಬಾದ್‌ನ ಗಚ್ಚಿಬೌಲಿಯಲ್ಲಿ ಸಿಐಎಸ್‌ಸಿಇ ವತಿಯಿಂದ ನಡೆಯಲಿರುವ ರಾಷ್ಟ್ರೀಯ ಮಟ್ಟದ ಅಥ್ಲೆಟಿಕ್ ಪಂದ್ಯಾವಳಿಗೆ ಆಯ್ಕೆಯಾಗಿದ್ದಾನೆ. ಈತ ಶ್ರೀಮತಿ ಲಲಿತಮ್ಮ ವಿಷಕಂಠೇಗೌಡರ ಮೊಮ್ಮಗ ಹಾಗೂ ಕಾಂಗ್ರೆಸ್ ಮೈಸೂರು ನಗರ ಪ್ರಧಾನ ಕಾರ್ಯದರ್ಶಿ ಚೇತನ್ ವಿಷಕಂಠೇಗೌಡ ಅವರ ಪುತ್ರ

ಮಹಾಲಕ್ಷ್ಮಿಯ ಹಂತಕನ ಶೀಘ್ರವೇ ಬಂಧಿಸುತ್ತೇವೆ

ಬೆಂಗಳೂರು ಪೊಲೀಸ್ ಆಯುಕ್ತ ಬಿ.ದಯಾನಂದ್ ಮಾಹಿತಿ

ಬೆಂಗಳೂರು, ಸೆ. 23– ರಾಜಧಾನಿ ಬೆಂಗಳೂರನ್ನು ಬೆಚ್ಚಿ ಬೀಳಿಸಿರುವ ಮಹಾಲಕ್ಷ್ಮೀ ಹತ್ಯೆ ಪ್ರಕರಣದ ತನಿಖೆ ಚುರುಕು ಗೊಂಡಿದ್ದು, ಹಂತಕ ಹೊರ ರಾಜ್ಯದವನು ಎಂಬ ಮಾಹಿತಿ ಲಭ್ಯವಾಗಿದೆ. ಆತ ಬೆಂಗಳೂರಿನಲ್ಲಿ ವಾಸವಾಗಿದ್ದ ಎಂಬುದು ತಿಳಿದುಬಂದಿದ್ದು, ಶಂಕಿತನ ಬಗ್ಗೆ ಈ ಹಂತದಲ್ಲಿ ಹೆಚ್ಚಿನ ಮಾಹಿತಿ ನೀಡಲು ಸಾಧ್ಯವಿಲ್ಲ ಎಂದು ಬೆಂಗಳೂರು ನಗರ ಪೊಲೀಸ್ ಆಯುಕ್ತ ಬಿ.ದಯಾನಂದ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಬೆಂಗಳೂರು ವೈಯಾಲಿಕಾವಲ್ ನಿವಾಸಿ ಮಹಾಲಕ್ಷ್ಮೀ ಕೊಲೆ ಪ್ರಕರಣದ ಆರೋಪಿಯ ಗುರುತು ಪತ್ತೆಯಾಗಿದೆ. ಆರೋಪಿಗಾಗಿ ಹುಡುಕಾಟ ಮುಂದುವರೆದಿದ್ದು, ಶೀಘ್ರವೇ ಬಂಧಿಸುತ್ತೇವೆ.ಎಲ್ಲ ಕೋನಗಳಿಂದಲೂ ತನಿಖೆ ನಡೆಸಲಾಗುತ್ತಿದೆ ಎಂದರು.

ಸರಗೂರು ಪಿಎಸಿಎಸ್‌ಗೆ 2.92 ಲಕ್ಷ ನಿವ್ವಳ ಲಾಭ



ವಾರ್ಷಿಕ ಮಹಾಸಭೆಯಲ್ಲಿ ಸಂಘದ ಅಧ್ಯಕ್ಷ ನಾಗರಾಜರಾಮ ಮಾತನಾಡಿದರು.

ಸರಗೂರು, ಸೆ.23– ಸಹಕಾರ ಸಂಘದಿಂದ ಪಡೆದ ಸಾಲವನ್ನು ರೈತರು ಕಾಲಕಾಲಕ್ಕೆ ಮರುಪಾವತಿಸಬೇಕು ಎಂದು ಸರಗೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ನಾಗರಾಜರಾಮ ತಿಳಿಸಿದರು.

ಸಂಘದ ಆವರಣದಲ್ಲಿ ಸೋಮವಾರ ನಡೆದ ವಾರ್ಷಿಕ ಮಹಾಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, 2023–24ನೇ ಸಾಲಿನಲ್ಲಿ 351 ಸದಸ್ಯರಿಂದ 5.02 ಕೋಟಿ ರೂ. ವಸೂಲಿ ಮಾಡಲಾಗಿದೆ. 353 ಸದಸ್ಯರಿಗೆ 5.50 ಕೋಟಿ ರೂ. ಕೆಸಿಸಿ ಸಾಲ ವಿತರಿಸಲಾಗಿದೆ. ಅಲ್ಲದೆ ರೈತರನ್ನು ಸಬಲೀಕರಣಗೊಳಿಸುವ ನಿಟ್ಟಿನಲ್ಲಿ ಹೈನುಗಾರಿಕೆ ಸಾಲವಾಗಿ 31 ಸದಸ್ಯರಿಗೆ 8.68 ಲಕ್ಷ ರೂ. ಸಾಲ ವಿತರಿಸಲಾಗಿದೆ ಎಂದರು.

62 ಹೊಸ ಸದಸ್ಯರಿಗೆ 68.55 ಲಕ್ಷ ರೂ. ವಿತರಿಸಲಾಗಿದೆ. ಹೀಗಾಗಿ ಸಹಕಾರ ಸಂಘ ಅಭಿವೃದ್ಧಿಯಾಗಲು ಪಡೆದ ಸಾಲವನ್ನು ಮರುಪಾವತಿ ಮಾಡಬೇಕು. ಜೊತೆಗೆ ನಿಗದಿತ ವೇಳೆಗೆ ಸಾಲ ಮರುಪಾವತಿಸಿದರೆ ಸಂಘದ ಹೊಸ ಸದಸ್ಯರಿಗೆ ಸಾಲ ನೀಡಲು ಅನುಕೂಲವಾಗಲಿದೆ ಎಂದರು.

ಸಂಘದ ಸಿಇಒ ಪಿ.ಮಹದೇವ ವರದಿ ಮಂಡಿಸಿದರು. ಸಭೆಯಲ್ಲಿ ಸಂಘದ ಉಪಾಧ್ಯಕ್ಷ ಪಿ.ನೇಮಿಚಂದ್ರ, ನಿರ್ದೇಶಕರಾದ ಅಬ್ದುಲ್ ಜಲೀಲ್, ಹೆಚ್.ಸಿ.ರಾಮಲಿಂಗಪ್ಪ, ಶಿವರಂಕರನ್, ಹೆಚ್.ಎಂ.ಮಹದೇವನಾಯಕ, ಎಸ್.ಬಿ.ಪ್ರೇಮಕುಮಾರಿ, ಎಸ್.ಆರ್.ಸೋಮಶೇಖರ್, ಹೆಚ್.ಜಿ.ಚನ್ನನಾಯಕ, ಕುಸುಮ, ಜೆ.ನಾಗರಾಜು, ಸಹಕಾರ ಸಂಘದ ಮಾಜಿ ಅಧ್ಯಕ್ಷ ಎಸ್.ಕೆ.ಶಿವಣ್ಣ, ರೈತ ಮುಖಂಡರಾದ ನೇಮೀಶ್, ಶ್ರೀಕಂಠ, ಗೋಪಾಲಯ್ಯ, ಎಸ್.ಹೆಚ್.ರಮೇಶ್, ಸತೀಶ್ ಕದಂಬ, ಮೇಲ್ವಿಚಾರಕರಾದ ಅಕ್ಬರ್ ಪಾಷಾ ಇನ್ನಿತರರಿದ್ದರು.

ಒಳ ಮೀಸಲಾತಿ ಜಾರಿಗೆ ಒತ್ತಾಯಿಸಿ ಪ್ರತಿಭಟನೆ



ಪ್ರತಿಭಟನೆಯಲ್ಲಿ ಮಲಿಯೂರು ಡಿ.ಶಂಕರ್ ಮಾತನಾಡಿದರು.

ತಿ.ನರಸೀಪುರ, ಸೆ.23– ಸುಪ್ರೀಂ ಕೋರ್ಟ್ ಆದೇಶದಂತೆ ಮಾದಿಗ ಸಮುದಾಯಕ್ಕೆ ಒಳ ಮೀಸಲಾತಿ ಜಾರಿಗೊಳಿಸುವಂತೆ ಒತ್ತಾಯಿಸಿ ಪಟ್ಟಣದಲ್ಲಿ ವಿವಿಧ ದಲಿತಪರ ಸಂಘಟನೆಗಳ ಕಾರ್ಯಕರ್ತರು ಸೋಮವಾರ ಬೃಹತ್ ಪ್ರತಿಭಟನೆ ನಡೆಸಿದರು.

ತಾಲೂಕು ಬಾಬು ಜಗಜೀವನರಾಂ ಜನಕಲ್ಯಾಣ ಸಂಘದ ಆಶ್ರಯದಲ್ಲಿ ಕರ್ನಾಟಕ ದಸಂಸ, ಮಾದಿಗ ಸಭಾ, ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಬಾಬು ಜಗಜೀವನರಾಂ ಯುವ ಹವ್ಯಾಸಿ ಕಲಾ ಸಂಘ, ಡಾ.ಬಾಬು ಜಗಜೀವನರಾಂ ಯುವಕರ ಸಂಘ ಸೇರಿದಂತೆ ಸುತ್ತಮುತ್ತಲ 31 ಗ್ರಾಮಗಳ ಮುಖ್ಯಸ್ಥರು ತಿರುಮಕೂಡಲಿನ ಪಿಟೀಲು ಚೌಡಯ್ಯ ವೃತ್ತದಲ್ಲಿ ತಮ್ಮ ಹಕ್ಕಿಗಾಗಿ ಪ್ರತಿಭಟನೆ ನಡೆಸಿದರು. ಬಳಿಕ ಅಲ್ಲಿಂದ ಮೆರವಣಿಗೆಯಲ್ಲಿ ನೂತನ ಕಪಿಲಾ ಸೇತುವೆ, ಹೊಸ ತಿರುಮಕೂಡಲು ವೃತ್ತ ಕಾವೇರಿ–ಕಪಿಲಾ ಜೋಡಿ ರಸ್ತೆ ಹಾಗೂ ಕಾಲೇಜು ವೃತ್ತದ ಮೂಲಕ ತಹಸೀಲ್ದಾರ್ ಕಚೇರಿ ತಲುಪಿದರು.

ಡೋಲು, ತಮಟೆ ಸದ್ದಿನೊಂದಿಗೆ ಆರಂಭವಾದ ಮೆರವಣಿಗೆಯಲ್ಲಿ ಪ್ರತಿಭಟನಾಕಾರರು ಒಳ ಮೀಸಲಾತಿ ನಮ್ಮ ಹಕ್ಕು ನಮಗೆ ಕೊಡಿ, ನ್ಯಾಸದಾಶಿವ ಆಯೋಗದ ವರದಿ ಜಾರಿಯಾಗಲಿ, ನಮ್ಮ ಹಕ್ಕನ್ನು ಮೊಟಕು ಮಾಡಬೇಡಿ, ಎ.ಜೆ.ಸದಾಶಿವ ಆಯೋಗಕ್ಕೆ ಜಯವಾಗಲಿ ಎಂಬ ಭಿತ್ತಿ ಪತ್ರ ಹಿಡಿದು ಘೋಷಣೆ ಕೂಗಿ ರಾಜ್ಯ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ತಾಲೂಕು ಡಾ.ಬಾಬು ಜಗಜೀವನ ರಾಂ ಜನಕಲ್ಯಾಣ ಸಂಘದ ಅಧ್ಯಕ್ಷ ಮಲಿಯೂರು ಡಿ.ಶಂಕರ್ ಮಾತನಾಡಿ, ಮಾದಿಗ ಸಮಾಜ ಕಳೆದ 30 ವರ್ಷಗಳಿಂದ ಪ್ರತ್ಯೇಕ ಮೀಸಲಾತಿ, ಒಳ ಮೀಸಲಾತಿಗಾಗಿ ಹೋರಾಟ ನಡೆಸುತ್ತಾ ಬಂದಿದೆ. ಹೋರಾಟದ ಫಲವಾಗಿ ಎಸ್.ಎಂ.ಕೃಷ್ಣ ಮುಖ್ಯಮಂತ್ರಿಯಾಗಿದ್ದ ವೇಳೆ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಸದಾಶಿವ ಆಯೋಗ ರಚಿಸಿದ್ದರು. ಜನಸಂಖ್ಯೆಗೆ ಅನುಗುಣವಾಗಿ ರಾಜ್ಯಾದ್ಯಂತ ಅಧ್ಯಯನ ಮಾಡಿದ ವೇಳೆ ಮಾದಿಗ ಸಮಾಜಕ್ಕೆ ಯಾವುದೇ ಅನುಕೂಲ ಕಲ್ಪಿಸಲಾಗಿಲ್ಲ. ಹಿಂದುಳಿದ ವರ್ಗಗಳಲ್ಲಿ ಮಾದಿಗ ಸಮಾಜ ಅತೀ ಹಿಂದುಳಿದ ಸಮಾಜ ಎಂದು ವರದಿಯಲ್ಲಿ ಸ್ಪಷ್ಟವಾಗಿ ಸದಾಶಿವ ಆಯೋಗ ವರದಿ ಜಾರಿ ಮಾಡಿತ್ತು.

ರಾಜ್ಯಾದ್ಯಂತ ಉತ್ತರ ಹಾಗೂ ದಕ್ಷಿಣ ಕರ್ನಾಟಕ ಸೇರಿದಂತೆ ಎಲ್ಲಾ ಮಾದಿಗ ಸಮುದಾಯ ಹೋರಾಡಿದ್ದರ ಫಲವಾಗಿ ಆ.1ರಂದು ಸುಪ್ರೀಂ ಕೋರ್ಟ್, ಒಳ ಮೀಸಲಾತಿಯಲ್ಲಿ ಎಬಿಸಿಡಿ ಎಂದು ವರ್ಗೀಕರಣ ಮಾಡಿ ಹಿಂದುಳಿದ ಸಮುದಾಯಗಳಿಗೆ ಶೇ.ವಾರು ಆಧಾರದಲ್ಲಿ ಮೀಸಲಾತಿ ಇಂತಿಷ್ಟು ಎಂದು ಹಂಚಿಕೆ ಮಾಡಿತ್ತು ಅಂತೆಯೇ ಮಾದಿಗ ಮತ್ತು ಮಾದಿಗ ಸಂಬಂಧಿತ ಜಾತಿಗಳಿಗೆ ಶೇ.6 ರಷ್ಟು ಮೀಸಲಾತಿಯನ್ನು ನೀಡಿ ಸುಪ್ರೀಂ ಕೋರ್ಟ್ ಆದೇಶಿಸಿತ್ತು ಅದನ್ನು ಅನುಷ್ಠಾನ ಮಾಡುವ ಅಧಿಕಾರವನ್ನು ಆಯಾಯ ರಾಜ್ಯ ಸರ್ಕಾರಗಳ ನಿರ್ಧಾರಕ್ಕೆ ಬಿಡಲಾಗಿತ್ತು. ಆದೇಶ ಹೊರಬಿದ್ದ ಕೆಲವೇ ಗಂಟೆಗಳಲ್ಲಿ ನೆರೆಯ ತೆಲಂಗಾಣ ಮುಖ್ಯಮಂತ್ರಿ ರೇವಂತ್ ರೆಡ್ಡಿ ಸಚಿವ ಸಂಪುಟ ಸಭೆ ಕರೆದು ಒಳ ಮೀಸಲಾತಿ ಜಾರಿ ಮಾಡಿ ಆದೇಶ ಹೊರಡಿಸಿದರು.

ಅದೇ ರೀತಿ ರಾಜ್ಯದ ಸಿಎಂ ಸಿದ್ದರಾಮಯ್ಯ ವರದಿ ಜಾರಿ ಮಾಡುತ್ತಾರೆಂಬ ಭರವಸೆ ಇತ್ತಾದರೂ, ಒಂದೂವರೆ ತಿಂಗಳಾದರೂ ಆದೇಶ ಜಾರಿಗೊಳಿಸುವ ಬಗ್ಗೆ ಯಾವುದೇ ಭರವಸೆ, ಹೇಳಿಕೆಯಾಗಲಿ ನೀಡಿಲ್ಲ. ಅವರು ಯಾವ ಕಾರಣಕ್ಕೆ ವರದಿ ಜಾರಿಮಾಡಲು ಹಿಂದೇಟು ಹಾಕುತ್ತಿದ್ದಾರೋ ತಿಳಿದಿಲ್ಲ. ಮಾದಿಗ ಸಮುದಾಯ ಸಿದ್ದರಾಮಯ್ಯ ಅವರನ್ನು ಸತತವಾಗಿ ಬೆಂಬಲಿಸುತ್ತಾ ಬಂದಿದ್ದೇವೆ ಆದರೂ ಮಾದಿಗರ ಹಿತ ಕಾಯಬೇಕಾದ ಮುಖ್ಯಮಂತ್ರಿಗಳು ಆದೇಶ ಜಾರಿ ವಿಷಯದಲ್ಲಿ ಮೌನ ವಹಿಸಿದ್ದಾರೆ ಎಂದು ಆರೋಪಿಸಿದರು.

ಇದೇ ವೇಳೆ ಶಿರಸ್ತೇದಾರ್ ಮಂಜುಳಾ ಅವರಿಗೆ ಪ್ರತಿಭಟನಾಕಾರರು ಮನವಿ ಸಲ್ಲಿಸಿದರು. ಪ್ರತಿಭಟನೆಯಲ್ಲಿ ಬನ್ನೂರು ಪುರಸಭೆ ಸದಸ್ಯ ಶಿವಣ್ಣ, ದಸಂಸ ಅಧ್ಯಕ್ಷ ಬಲ್ಲಯ್ಯ, ಉಪಾಧ್ಯಕ್ಷ ಗೋವಿಂದರಾಜು, ಪ್ರಧಾನ ಕಾರ್ಯದರ್ಶಿ ಪುಟ್ಟಸ್ವಾಮಿ, ಸಹಖಜಾಂಚಿ ಹೆಚ್.ನಾಗರಾಜು, ಬೆಳ್ಳಯ್ಯ, ಬಿ.ಎಸ್.ಮಹದೇವ ಪ್ರಸಾದ್, ಚೇತನ್, ಮಹೇಶ್, ದಸಂಸ ಜಿಲ್ಲಾಧ್ಯಕ್ಷ ಶಂಕರ್, ನುಗ್ಗಹಳ್ಳಿ, ಸಿದ್ದರಾಜು, ವೇಲು ದಾಸಯ್ಯ, ಡಾ.ರವಿಕುಮಾರ್, ವೆಂಕಟೇಶ್, ಎಂ.ಸುರೇಶ್, ರಜನೀರಾಜ್, ಬಾಲು, ಎಂ.ಮೂರ್ತಿ, ಎಂ.ಸಿದ್ದರಾಜು, ಮಹದೇವು, ರಮೇಶ್, ಸಿದ್ದಯ್ಯ, ದೊಳ್ಳಯ್ಯ, ಲಿಂಗರಾಜು ಸೇರಿದಂತೆ ಅನೇಕ ದಲಿತ ಸಂಘಟನೆಯ ಮುಖಂಡರು ಹಾಜರಿದ್ದರು.

ಯುವಕರಿಗೆ ಭವಿಷ್ಯದ ಸ್ಪಷ್ಟ ಚಿತ್ರಣದ ಗುರಿ ಇರಬೇಕು

ಶಾಸಕ ಜಿ.ಡಿ.ಹರೀಶ್‌ಗೌಡ



ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಹುಣಸೂರು, ಸೆ.23– ಕಾಲೇಜು ಶಿಕ್ಷಣ ಹಂತದಲ್ಲೇ ಯುವ ಜನರಿಗೆ ಭವಿಷ್ಯದ ಸ್ಪಷ್ಟ ಚಿತ್ರಣದ ಗುರಿ ಇರಬೇಕು ಎಂದು ಶಾಸಕ ಜಿ.ಡಿ.ಹರೀಶ್‌ಗೌಡ ತಿಳಿಸಿದರು.

ನಗರದ ಜ್ಞಾನಧಾರ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪದವಿ ವ್ಯಾಸಂಗ ಮಾಡುವ ಹಂತದಲ್ಲೇ ವೃತ್ತಿಪರ ಕೌಶಲ್ಯ ತರಬೇತಿ ಹೊಂದಿದ್ದರೆ ಸ್ವಉದ್ಯೋಗ ಆರಂಭಿಸಿ ಭವಿಷ್ಯ ರೂಪಿಸಿಕೊಳ್ಳಬಹುದು. ಕೇಂದ್ರ ಮತ್ತು ರಾಜ್ಯ ಸರ್ಕಾರ ಪದವಿಯಲ್ಲಿ ಅನೇಕ ಕೌಶಲ್ಯಾಧಾರಿತ ತರಗತಿಗಳನ್ನು ಆರಂಭಿಸಿದೆ. ಅದನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದ ಅವರು ಓದಿನೊಂದಿಗೆ ಕೌಶಲ್ಯಾಧಾರಿತ ಶಿಕ್ಷಣ ಪಡೆಯುವತ್ತ ಗಮನಹರಿಸಿ ಎಂದರು.

ಪದವಿ ಪಡೆದ ಪ್ರತಿಯೊಬ್ಬರಿಗೂ ಸರ್ಕಾರ ಉದ್ಯೋಗ ಕಲ್ಪಿಸಲು ಅಸಾಧ್ಯ. ಪೋಷಕರು ನಿಮ್ಮ ಭವಿಷ್ಯದ ಕನಸು ಕಟ್ಟಿಕೊಳ್ಳಲು ಸರ್ಕಾರಿ ಉದ್ಯೋಗದ ಹಂಬಲದಲ್ಲಿರುವರು. ಇತ್ತೀಚೆಗೆ ಸರ್ಕಾರಿ ಉದ್ಯೋಗ ನೇಮಕಾತಿ ಇಲ್ಲವಾಗಿದ್ದು, ಸ್ವಯಂ ಉದ್ಯೋಗ ಆರಂಭಿಸಿ ಮೇಕ್ ಇನ್ ಇಂಡಿಯಾ ಯೋಜನೆಯಲ್ಲಿ ಉದ್ಯಮಿಯಾಗಬೇಕು ಎಂದರು.

ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಪದವಿ ಪೂರೈಸಿ ವಿವಿಧ ವಿಭಾಗದಲ್ಲಿ ಶೇ.100 ಅಂಕ ಪಡೆದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು. ಈ ವೇಳೆ ಉಕ್ಕಿನಕಂತೆ ಮಠದ ಸಾಂಬ ಸದಾಶಿವ ಸ್ವಾಮೀಜಿ ಆಶೀರ್ವಚನ ನೀಡಿದರು. ಆರ್.ಕೆ.ಬಾಲಚಂದ್ರ ವೃತ್ತಿ ಮಾರ್ಗದರ್ಶನ ಕೌಶಲ ತರಬೇತಿ ಮಾಹಿತಿ ನೀಡಿದರು. ಜ್ಞಾನಧಾರ ಎಜುಕೇಶನ್ ಫೌಂಡೇಶನ್ ಅಧ್ಯಕ್ಷೆ ಯಮುನಾ ಸಿ. ಅಧ್ಯಕ್ಷತೆ ವಹಿಸಿದ್ದರು.

ನಗರಸಭೆ ಅಧ್ಯಕ್ಷ ಶರವಣ, ನಾರಾಯಣ್, ಬಾಬು ಹೆಚ್.ಟಿ. ಸೋಮಶೇಖರ್, ಮೋಕ್ಷಪ್ರಸಾದ್, ಗಣೇಶ್ ಕುಮಾರ ಸ್ವಾಮಿ, ಗುರುಸ್ವಾಮಿ, ಜೆ.ಸಿ.ನಾಗೇಂದ್ರ, ಪರಶಿವ, ಪ್ರಾಂಶುಪಾಲ ಕಾರ್ತಿಕ್ ಉಪಸ್ಥಿತರಿದ್ದರು.

ಹೊಮ್ಮರಗಳ್ಳಿ ಪಿಎಸಿಎಸ್ ವಾರ್ಷಿಕ ಮಹಾಸಭೆ



ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ಹಂಪಾಪುರ, ಸೆ.23– ಹೆಚ್.ಡಿ.ಕೋಟೆ ತಾಲೂಕಿನ ಹೊಮ್ಮರಗಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2023–24ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಆವರಣದಲ್ಲಿ ನಡೆಯಿತು.

ಸಂಘದ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಎನ್. ಮಧು ಮಾತನಾಡಿ, ಸಂಘದಲ್ಲಿ ಒಟ್ಟು 972 ಸದಸ್ಯರಿದ್ದು, 84,50,371 ರೂ. ಷೇರು ಸಂಗ್ರಹವಾಗಿದೆ. ಸಂಘದ ಸದಸ್ಯತ್ವ ಮತ್ತು ಷೇರು ಬಂಡವಾಳ ಸಂಗ್ರಹಣೆಯಲ್ಲಿ ವರ್ಷದಿಂದ ವರ್ಷಕ್ಕೆ ಪ್ರಗತಿ ಸಾಧಿಸುತ್ತಿದ್ದೇವೆ ಎಂದರು.

ನಮ್ಮ ಸಹಕಾರ ಸಂಘ ಮೈಸೂರು ಮತ್ತು ಚಾಮರಾಜನಗರ ಸಹಕಾರ ಬ್ಯಾಂಕ್‌ನಿಂದ ಕೆಸಿಸಿ ಬೆಳೆ ಸಾಲ ಪಡೆದಿದ್ದು, 405 ಸದಸ್ಯರಿಗೆ 8,44,54000 ರೂ. ಬೆಳೆ ಸಾಲ ನೀಡಲಾಗಿದೆ ಎಂದರು. ಪ್ರಸಕ್ತ ಸಾಲಿನಲ್ಲಿ ಸಹಕಾರ ಸಂಘ 2,22,676 ರೂ. ನಿವ್ವಳ ಲಾಭ ಗಳಿಸಿದೆ ಎಂದು ತಿಳಿಸಿದರು.

ಈ ವೇಳೆ ಅಧ್ಯಕ್ಷ ಪರಮೇಶ್ವರ್, ಉಪಾಧ್ಯಕ್ಷ ಮಹದೇವಪ್ಪ, ನಿರ್ದೇಶಕರಾದ ಗೋಪಾಲಗೌಡ, ಜಗದೀಶ್, ನಾಗರಾಜು, ಸಿದ್ದಾಚಾರಿ, ಗ್ರಾಮಸ್ಥರು ಮತ್ತು ಇತರರಿದ್ದರು.

ಪ್ರತ್ಯೇಕ ಪ್ರಕರಣ: ಇಬ್ಬರು ಯುವಕರು ಆತ್ಮಹತ್ಯೆ

ತಿ.ನರಸೀಪುರ, ಸೆ.23– ಪ್ರತ್ಯೇಕ ಪ್ರಕರಣಗಳಲ್ಲಿ ಇಬ್ಬರು ಯುವಕರು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ತಾಲೂಕಿನಲ್ಲಿ ನಡೆದಿದೆ.

ಮಹದೇವಸ್ವಾಮಿ: ಪದೇ ಪದೇ ಬರುತ್ತಿದ್ದ ಎದೆನೋವು ತಾಳಲಾರದೇ ಯುವಕನೋರ್ವ ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಹೆಳವರಹುಂಡಿ ಗ್ರಾಮದಲ್ಲಿ ನಡೆದಿದೆ.



ಗ್ರಾಮದ ನಿವಾಸಿ ನಾಗಣ್ಣ ಎಂಬುವರ ಪುತ್ರ ಮಹದೇವಸ್ವಾಮಿ(25) ಆತ್ಮಹತ್ಯೆ ಮಾಡಿಕೊಂಡವರು. ಪಟ್ಟಣದ ಶಾಮಿಯಾನ ಅಂಗಡಿಯಲ್ಲಿ ಕೆಲಸ ಮಾಡಿಕೊಂಡಿದ್ದ ಮಹದೇವಸ್ವಾಮಿ ಈ ಹಿಂದೆ ಹೃದಯಾಘಾತಕ್ಕೊಳಗಾಗಿ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದ ಎನ್ನಲಾಗಿದೆ. ನಂತರದ ದಿನಗಳಲ್ಲಿ ಪದೇ ಪದೆ ಬರುತ್ತಿದ್ದ ಎದೆನೋವಿಂದ ಬೇಸತ್ತು ಆತ ಜಮೀನೊಂದರಲ್ಲಿ ಕ್ರಿಮಿನಾಶಕ ಸೇವಿಸಿ ಆತ್ಮಹತ್ಯೆಗೆ ಶರಣಾಗಿದ್ದಾನೆ ಎಂದು ಮೃತನ ತಂದೆ ನಾಗಣ್ಣ ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಈ ಸಂಬಂಧ ಪಟ್ಟಣ ಠಾಣೆ ಎಸ್‌ಐ ಜಗದೀಶ್ ಧೂಳ್‌ಶೆಟ್ಟಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಮಲ್ಲಿಕಾರ್ಜುನ: ಮೂರ್ಛೆ ರೋಗದಿಂದ ಬಳಲುತ್ತಿದ್ದ ಯುವಕನೋರ್ವ ಬೇಸತ್ತು ಕಪಿಲಾ ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಪಟ್ಟಣ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.



ತಾಲೂಕಿನ ಕೇತಹಳ್ಳಿ ಗ್ರಾಮದ ನಿವಾಸಿ ಮಲ್ಲೇಶ್ ಅವರ ಪುತ್ರ ಮಲ್ಲಿಕಾರ್ಜುನ (22) ಆತ್ಮಹತ್ಯೆ ಮಾಡಿಕೊಂಡವರು. ತಾಯೂರು ಗ್ರಾಮದ ಗ್ಲೂಕೋ ಬಯೋಟೆಕ್ ಫ್ಯಾಕ್ಟರಿ ಉದ್ಯೋಗಿಯಾಗಿದ್ದ ಈತ ಮೂರ್ಛೆ ರೋಗದಿಂದ ಬಳಲುತ್ತಿದ್ದ ಅಲ್ಲದೇ ನಿತ್ಯ ಮಾತ್ರೆ ಸೇವಿಸಿದ್ದರು ಎನ್ನಲಾಗಿದೆ. ಆದರೆ ಮೂರ್ಛೆ ರೋಗ ವಾಸಿಯಾಗದ ಹಿನ್ನೆಲೆಯಲ್ಲಿ ಬೇಸತ್ತು ಸೋಮವಾರ ಬೆಳಗ್ಗೆ ಗದ್ದೆಗೆ ಹೋಗಿ ಬರುವುದಾಗಿ ತಿಳಿಸಿ ಮಲ್ಲಿಕಾರ್ಜುನ ಪಟ್ಟಣದ ಕಪಿಲಾ ಸೇತುವೆ ಮೇಲೆ, ಮೊಬೈಲ್ ಹಾಗೂ ಬಟ್ಟೆ ಬಿಚ್ಚಿಟ್ಟು ನದಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಅಗ್ನಿ ಶಾಮಕ ಸಿಬ್ಬಂದಿ ಹಾಗೂ ಈಜುಗಾರರು ನದಿಯಿಂದ ಶವವನ್ನು ಹೊರ ತೆಗೆದಿದ್ದಾರೆ. ಈ ಸಂಬಂಧ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಕಂಪಲಾಪುರ ಪಿಎಸಿಎಸ್‌ಗೆ 27.5 ಲಕ್ಷ ನಿವ್ವಳ ಲಾಭ



ಸಭೆಯಲ್ಲಿ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ಷೇರುದಾರರ ಮಕ್ಕಳನ್ನು ಸನ್ಮಾನಿಸಲಾಯಿತು.

ಕಂಪಲಾಪುರ, ಸೆ.23– ಕಳೆದ ಬಾರಿ ಸಹಕಾರ ಸಂಘ 25 ಲಕ್ಷ ರೂ. ಲಾಭ ಗಳಿಸಿತ್ತು. ಈ ಬಾರಿ 27.5 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ ಎಂದು ಗ್ರಾಮದ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಕೆ.ಆರ್.ಸಂತೋಷ್ ತಿಳಿಸಿದರು.

ಸಂಘದ ಆವರಣದಲ್ಲಿ ನಡೆದ ವಾರ್ಷಿಕ ಮಹಾಸಭೆಯಲ್ಲಿ ಮಾತನಾಡಿದ ಅವರು, ನನ್ನ ಅಧಿಕಾರವಧಿಯಲ್ಲಿ ಸಂಘವನ್ನು ಲಾಭದತ್ತ ಕೊಂಡೊಯ್ಯುವ ಧ್ಯೇಯ ನಮ್ಮದಾಗಿದ್ದು, ಅದಕ್ಕೆ ಷೇರುದಾರರು ಸಹಕರಿಸಬೇಕು. ಸಂಘದ ಕಟ್ಟಡದ ಪಕ್ಕದಲ್ಲಿ ಖಾಲಿ ನಿವೇಶನವಿದ್ದು, ಅಲ್ಲಿ ರೈತ ಭವನ ಕಟ್ಟಬೇಕೆಂದು ಈಗಾಗಲೇ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಅಲ್ಲಿಂದ ಅನುಮೋದನೆ ಯಾದ ನಂತರ ಗುದ್ದಲಿ ಪೂಜೆ ನೆರವೇರಿಸಿ ಕಟ್ಟಡ ಕಾಮಗಾರಿ ಪ್ರಾರಂಭಿಸಲಾಗುವುದು ಎಂದರು.

ಸಂಘದ ಸಿಇಓ ಕೆ.ಎನ್.ಹರ್ಷ ವಾರ್ಷಿಕ ವರದಿ ಮಂಡಿಸಿ ಸಂಘದಲ್ಲಿ ಒಟ್ಟು 1402 ಷೇರುದಾರರಿದ್ದು, 1.54 ಲಕ್ಷ ಷೇರು ಧನವಿದೆ. ಜಿಲ್ಲಾ ಬ್ಯಾಂಕ್‌ನಿಂದ 8.58 ಕೋಟಿ ಸಾಲ ಪಡೆದಿದ್ದು ರೈತರಿಗೆ ವಿತರಿಸಲಾಗಿದೆ. ಹಾಗೆಯೇ ಸುಸ್ತಿದಾರರ ಮೇಲೆ ಈಗಾಗಲೇ ಕೋರ್ಟ್‌ನಲ್ಲಿ ದಾವೆ ಹೂಡಿದ್ದು ಕೋರ್ಟ್ ಫೀಸ್ ಅನ್ನು ಸುಸ್ತಿದಾರರಿಂದಲೇ ವಸೂಲು ಮಾಡಲಾಗಿದೆ. ಆದ್ದರಿಂದ ಸಾಲ ಪಡೆದುಕೊಂಡ ರೈತರು ಸಕಾಲಕ್ಕೆ ಮರುಪಾವತಿ ಮಾಡಿದಾಗ ಕೋರ್ಟ್ ಅಲೆಯುವುದು ತಪ್ಪುತ್ತದೆ ಎಂದರು.

ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ಷೇರುದಾರರ ಮಕ್ಕಳಿಗೆ ನಗದು ಪುರಸ್ಕಾರ ನೀಡಿ ಗೌರವಿಸಲಾಯಿತು. ಈ ವೇಳೆ ನೌಕರ ಸಂತೋಷ್ ಸಂಘದ ಆಡಳಿತ ವರದಿ ಓದಿದರು. ಕಾರ್ಯಕ್ರಮದಲ್ಲಿ ಉಪಾಧ್ಯಕ್ಷ ಬಿ.ಕೆ.ತಮ್ಮಯ್ಯ, ನಿರ್ದೇಶಕರಾದ ಕುಮಾರ್, ಪ್ರಕಾಶ್, ಲಕ್ಷ್ಮಣ್, ನಾಗೇಗೌಡ, ರವಿ, ಮಹದೇವ್, ಮಣಿ, ಭಾಗ್ಯ, ಮಾದೇವ್, ಗಿರೀಶ್ ಸೇರಿದಂತೆ ಸಿಬ್ಬಂದಿ ಹಾಗೂ 300ಕ್ಕೂ ಹೆಚ್ಚು ಷೇರುದಾರರು ಹಾಜರಿದ್ದರು.

ಸಂಘದಿಂದ ರೈತರಿಗೆ ಉತ್ತಮ ಸಾಲ ಸೌಲಭ್ಯ



ಸಭೆಯಲ್ಲಿ ಸಂಘದ ಅಧ್ಯಕ್ಷ ಮಂಜುನಾಥ್ ಮಾತನಾಡಿದರು.

ಮಲ್ಕುಂಡಿ, ಸೆ.23– ರೈತರಿಂದ ರೈತರಿಗಾಗಿ ಆರಂಭಗೊಂಡಿರುವ ಸಹಕಾರ ಸಂಘ ರೈತರಿಗೆ ಉತ್ತಮ ಸಾಲ ಸೌಲಭ್ಯ ನೀಡುತ್ತಿದೆ ಎಂದು ಸಂಘದ ಅಧ್ಯಕ್ಷ ಮಂಜುನಾಥ್ ತಿಳಿಸಿದರು.

ಇಲ್ಲಿಗೆ ಸಮೀಪದ ಹೆಡಿಯಾಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2023–24ನೇ ಸಾಲಿನ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಸಾಲ ಪಡೆದ ರೈತರು ಸಕಾಲಕ್ಕೆ ಸಾಲ ಮರು ಪಾವತಿಸಿದರೆ ಸಂಘ ಲಾಭ ಕಾಣಲು ಸಾಧ್ಯ. ಇಲ್ಲದಿದ್ದರೇ ನಷ್ಟವಾಗುತ್ತದೆ. ರೈತರು ಪಡೆದಿರುವ ಸಾಲ ಮರು ಪಾವತಿಸದ ಕಾರಣ ಸಂಘ ನಷ್ಟದಲ್ಲಿತ್ತು. ಆದರೆ ಈ ಬಾರಿ 2,73,388 ರೂ. ಲಾಭ ಗಳಿಸಿದೆ. ಇನ್ನೂ ಹೆಚ್ಚಿನ ಲಾಭ ಗಳಿಸಲು ರೈತರು ಸಕಾಲಕ್ಕೆ ಸಾಲ ಮರುಪಾವತಿಸಬೇಕು. ಆ ಮೂಲಕ ಸಂಘವನ್ನು ಅಭಿವೃದ್ಧಿಯತ್ತ ಕೊಂಡೊಯ್ಯಲು ಸಹಕರಿಸಬೇಕು ಎಂದರು.

ಈ ವೇಳೆ ಸಂಘದ ಉಪಾಧ್ಯಕ್ಷ ಶಿವರುದ್ರಪ್ಪ, ನಿರ್ದೇಶಕರಾದ ಬಸವಣ್ಣ, ಅನ್ವರ್, ಶಿವರುದ್ರಪ್ಪ, ಶಿವಮ್ಮ, ಕೆಂಪಾಲಮ್ಮ, ರಂಗನಾಯಕ, ಶಿವಯ್ಯ, ಗ್ರಾಪಂ ಸದಸ್ಯ ಅಶ್ರಫ್ ಅಲಿ, ಮುಖಂಡರಾದ ಸುಬ್ರಹ್ಮಣ್ಯ, ನಾಗರಾಜೇಗೌಡ, ಪ್ರಭುಸ್ವಾಮಿ, ಗ್ರಾಪಂ ಉಪಾಧ್ಯಕ್ಷ ನಾಗೇಶ್, ಪ್ರಭಾರ ಸಿಇಓ ಶಿವಕುಮಾರ್, ಗುಮಾಸ್ತ ತಾಜುದ್ದೀನ್ ಸೇರಿದಂತೆ ಇತರರಿದ್ದರು.

ಹೊಸಹಳ್ಳಿ ಡೈರಿಗೆ ಪ್ರಸಕ್ತ ವರ್ಷ 2.11 ಲಕ್ಷ ಲಾಭ

ವಾರ್ಷಿಕ ಮಹಾಸಭೆಯಲ್ಲಿ ಸಂಘದ ಅಧ್ಯಕ್ಷೆ ಎಂ.ಜೆ.ಗೀತಾ ಮಂಜುಗೌಡ ಮಾಹಿತಿ



ಕೆ.ಆರ್.ನಗರ ತಾಲೂಕಿನ ಹೊಸಹಳ್ಳಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಸರ್ವ ಸದಸ್ಯರ ಮಹಾ ಸಭೆಯನ್ನು ಅಧ್ಯಕ್ಷೆ ಎಂ.ಜೆ.ಗೀತಾ ಮಂಜುಗೌಡ ಉದ್ಘಾಟಿಸಿದರು.

ಕೆ.ಆರ್.ನಗರ, ಸೆ.23– ತಾಲೂಕಿನ ಹೊಸಹಳ್ಳಿ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ಪ್ರಸಕ್ತ ಆರ್ಥಿಕ ವರ್ಷದಲ್ಲಿ 2.11 ಲಕ್ಷ ಲಾಭ ಗಳಿಸಿ, ಉತ್ತಮವಾಗಿ ಕೆಲಸ ನಿರ್ವಹಿಸುತ್ತಿದೆ ಎಂದು ಸಂಘದ ಅಧ್ಯಕ್ಷೆ ಎಂ.ಜೆ.ಗೀತಾ ಮಂಜುಗೌಡ ಹೇಳಿದರು.

ಸಂಘದ ಆವರಣದಲ್ಲಿ ಶನಿವಾರ ನಡೆದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಈ ಸಾಲಿನಿಂದ ಮರಣ ನಿಧಿ ಆರಂಭಿಸಿ ಸಂಘದ ಸದಸ್ಯರಾಗಿದ್ದವರು ಆಕಸ್ಮಿಕವಾಗಿ ನಿಧನರಾದರೆ ಅವರ ಕುಟುಂಬಕ್ಕೆ 5 ಸಾವಿರ ನೀಡಲಾಗುತ್ತದೆ ಎಂದರು.

ಇದರ ಜತೆಗೆ ಸಂಘದ ವತಿಯಿಂದ ಮೈಮುಲ್ ಸಹಕಾರದೊಂದಿಗೆ ಬಿಎಂಸಿ ಕೇಂದ್ರ ನಿರ್ಮಾಣ ಮಾಡಲು ತೀರ್ಮಾನಿಸಲಾಗಿದ್ದು ಇದಕ್ಕೆ ಎಲ್ಲರೂ ಸಹಕಾರ ನೀಡಬೇಕೆಂದು ಕೋರಿದರು. ಸಂಘದ ಹೆಚ್ಚುವರಿ ಕಟ್ಟಡ ನಿರ್ಮಾಣಕ್ಕೆ 5 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಶೀಘ್ರದಲ್ಲಿಯೇ ಕಟ್ಟಡ ಕಾಮಗಾರಿ ಆರಂಭಿಸಲಾಗುತ್ತದೆ ಎಂದು ಪ್ರಕಟಿಸಿದ ಅಧ್ಯಕ್ಷರು ಸರ್ವ ಸದಸ್ಯರು ಅಭಿವೃದ್ಧಿ ವಿಚಾರದಲ್ಲಿ ಆಡಳಿತ ಮಂಡಳಿಗೆ ಸಲಹೆ ಮತ್ತು ಮಾರ್ಗದರ್ಶನ ನೀಡಬೇಕೆಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಗ್ರಾಮದ ಬೋವಿ ಸಮಾಜದ ಬಾಂಧವರು ನಿರ್ಮಾಣ ಮಾಡುತ್ತಿರುವ ದುರ್ಗಮ್ಮ ತಾಯಿ ದೇವಾಲಯದ ನಿರ್ಮಾಣ ಕಾಮಗಾರಿಗೆ ಅಧ್ಯಕ್ಷರು 25 ಸಾವಿರ ರೂಪಾಯಿಗಳ ವೈಯಕ್ತಿಕ ಧನ ಸಹಾಯ ನೀಡಿದರು.

ಸಂಘದ ಉಪಾಧ್ಯಕ್ಷೆ ಮೀನಾಕ್ಷಿ, ಮರಿಸಿದ್ದಮ್ಮ, ನಾಗಮ್ಮ, ಶಾಂತಮ್ಮ, ಪ್ರೇಮ, ಕೋಮಲಾಕ್ಷಿ, ಮೀನಾಕ್ಷಿ, ಸರೋಜ, ಕೋಮಲ, ಸಿಇಓ ಎ.ಎಚ್.ಮಮತ, ಸಿಬ್ಬಂದಿಗಳಾದ ನಾಗಮಣಿ, ಮಂಗಳ, ಮುಖಂಡರಾದ ಮಂಜುಗೌಡ, ಪ್ರಭಾಕರ, ಲೋಕೇಶ್, ವಿಷಕಂಠಪ್ಪ, ವಿಜಯ್ ಮತ್ತಿತರರು ಉಪಸ್ಥಿತರಿದ್ದರು.

ಸೋಸಲೆ ಪಿಎಸಿಎಸ್ ಯಶಸ್ವಿ ಮುನ್ನಡೆ

ಸಂಘದ ಅಧ್ಯಕ್ಷ ಎಂ.ಪರಶಿವಮೂರ್ತಿ



ವಾರ್ಷಿಕ ಮಹಾಸಭೆಯಲ್ಲಿ ಸಂಘದ ಅಧ್ಯಕ್ಷ ಪರಶಿವಮೂರ್ತಿ ಮಾತನಾಡಿದರು.

ತಿ.ನರಸೀಪುರ, ಸೆ.23– ಸೋಸಲೆ ಸಹಕಾರ ಸಂಘವು ಸದಸ್ಯರ ಸಹಕಾರದೊಂದಿಗೆ ಯಶಸ್ವಿಯಾಗಿ ಮುನ್ನಡೆಯುತ್ತಿದ್ದು, ರೈತರು ಸುಸ್ತಿದಾರರಾಗದೇ ಸಕಾಲಕ್ಕೆ ಸಾಲ ಮರುಪಾವತಿ ಮಾಡಬೇಕೆಂದು ಸಂಘದ ಅಧ್ಯಕ್ಷ ಎಂ.ಪರಶಿವಮೂರ್ತಿ ತಿಳಿಸಿದರು.

ತಾಲೂಕಿನ ಸೋಸಲೆ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆವರಣದಲ್ಲಿ ಸೋಮವಾರ ನಡೆದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸಂಘವು ಪ್ರಸಕ್ತ ಸಾಲಿನಲ್ಲಿ 62,749 ರೂ. ನಿವ್ವಳ ಲಾಭ ಗಳಿಸಿದೆ. ಸಾಲ ಪಡೆದ ರೈತರು ಸುಸ್ತಿದಾರರಾಗದೇ ಸಾಲ ಮರುಪಾವತಿ ಮಾಡಿದಲ್ಲಿ ಮುಂದಿನ ವರ್ಷ ಲಾಭಾಂಶ ಏರಿಕೆಯಾಗಲಿದೆ ಎಂದರು.


ರೈತರಿಗೆ ರಸಗೊಬ್ಬರ, ಕೃಷಿ ಸಂಬಂಧಿತ ವಸ್ತುಗಳನ್ನು ದೊರಕಿಸಿಕೊಡುವ ಉದ್ದೇಶ ಸಂಘಕ್ಕಿದೆ. ಪೆಟ್ರೋಲ್ ಬಂಕ್ ತೆರೆಯುವ ಉದ್ದೇಶ ಸಹ ಹೊಂದಿದ್ದೇವೆ. ಜನೌಷಧ ಕೇಂದ್ರ ತೆರೆದು ರೈತರಿಗೆ ಅನುಕೂಲ ಕಲ್ಪಿಸುವ ಯೋಜನೆ ಹೊಂದಲಾಗಿದ್ದು, ಇದಕ್ಕಾಗಿ ಕೇಂದ್ರ ಸರ್ಕಾರದ ಒಪ್ಪಿಗೆ ಕಾಯಲಾಗುತ್ತಿದೆ ಎಂದರು.

ಸಂಘದ ಆಸ್ತಿಯನ್ನು ಹಲವು ವರ್ಷಗಳಿಂದ ಕಾಪಾಡಿಕೊಂಡು ಬರಲಾಗಿದೆ. ಈಗ ಆಸ್ತಿಯನ್ನು ಮತ್ತಷ್ಟು ಭದ್ರಪಡಿಸಲು ಸಂಬಂಧಿಸಿದ ಸಚಿವರನ್ನು ಭೇಟಿ ಮಾಡಿ 30 ಲಕ್ಷ ರೂ. ಮಂಜೂರು ಮಾಡಿಸಲಾಗಿದ್ದು, ಈ ಅನುದಾನವನ್ನು ಕಾಂಪೌಂಡ್ ನಿರ್ಮಾಣಕ್ಕೆ ಬಳಸಿಕೊಳ್ಳಲು ತೀರ್ಮಾನಿಸಲಾಗಿದೆ. ಮುಂಬರುವ ದಿನಗಳಲ್ಲಿ ಸಂಘದಿಂದ ಆಹಾರ ಪದಾರ್ಥ, ದಿನಬಳಕೆ ವಸ್ತುಗಳು ಒಂದೇ ಸೂರಿನಡಿ ದೊರಕಿಸಿ ರೈತರಿಗೆ ಅನುಕೂಲ ಕಲ್ಪಿಸಲು ಮಾಲ್ ರೀತಿ ಅಂಗಡಿ ತೆರೆಯಲು ಉದ್ದೇಶಿಸಲಾಗಿದೆ ಎಂದರು.

ಸಭೆಯಲ್ಲಿ ಆಕಸ್ಮಿಕ ಮರಣ ಹೊಂದಿದ ರೈತರ ಕುಟುಂಬಕ್ಕೆ ಸಹಾಯ ಧನ ನೀಡುವ ಹಾಗೂ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದ ರೈತರ ಮಕ್ಕಳನ್ನು ಗೌರವಿಸುವ ಕುರಿತಂತೆ ಚರ್ಚೆ ನಡೆದು ಆಡಳಿತ ಮಂಡಳಿ ಸಭೆಯಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು ಎಂದು ಅಧ್ಯಕ್ಷರು ತಿಳಿಸಿದರು.

ಈ ವೇಳೆ ಸಂಘದ ನಿರ್ದೇಶಕರಾದ ಬಿ.ಎಸ್.ಪ್ರಭುಸ್ವಾಮಿ, ಎಸ್.ಎನ್.ಧರ್ಮರತ್ನ ಕುಮಾರ್, ಬಿ.ಎಸ್.ಬಸಪ್ಪ, ಸೈಯದ್ ಮುಸ್ತಾಕ್, ಎಸ್.ಕುಮಾರ್, ಎಂ.ನಾಗರಾಜು, ಹೊನ್ನನಾಯಕ, ಜಯಮ್ಮ, ನೀಲಮ್ಮ, ಸಂಘದ ಸಿಇಓ ಬಿ.ಎಸ್.ಜಗದೀಶ್, ಎಸ್.ಸಿದ್ದಮಲ್ಲಯ್ಯ, ಶಿವಕುಮಾರ್ ಸೇರಿದಂತೆ ಗ್ರಾಮಸ್ಥರು, ಯಜಮಾನರು ಹಾಜರಿದ್ದರು.

ಮಲ್ಲಯ್ಯ ನಿಧನ



ಸರಗೂರು, ಸೆ.23– ತಾಲೂಕು ಆದಿಕರ್ನಾಟಕ ಮಹಾಸಭಾ ಪ್ರಧಾನ ಕಾರ್ಯದರ್ಶಿ ಮಲ್ಲೇಶ್ ಅವರ ತಂದೆ ಮಲ್ಲಯ್ಯ (73) ಭಾನುವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೃತರ ಜಮೀನಿನಲ್ಲಿ ಸೋಮವಾರ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಭಿವೃದ್ಧಿಯತ್ತ ನಂಜನಗೂಡು ಟಿಎಪಿಸಿಎಂಎಸ್ ಕೊಂಡೊಯ್ಯುವೆ

ಸಂಘದ ಅಧ್ಯಕ್ಷ ಮಹೇಶ್



ಟಿಎಪಿಸಿಎಂಎಸ್ ವಾರ್ಷಿಕ ಮಹಾಸಭೆಯನ್ನು ಅಧ್ಯಕ್ಷ ಮಹೇಶ್ ಉದ್ಘಾಟಿಸಿದರು.

ನಂಜನಗೂಡು, ಸೆ.23– ಮುಂದಿನ ದಿನಗಳಲ್ಲಿ ಲಾಭದಾಯಕ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಲು ಸರ್ವ ಸದಸ್ಯರ ಒತ್ತಾಯವಿದ್ದು, ಆ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಿ ಸಂಘವನ್ನು ಸದಸ್ಯರ ಸಹಕಾರದೊಂದಿಗೆ ಅಭಿವೃದ್ಧಿಯತ್ತ ಕೊಂಡೊಯ್ಯುವುದಾಗಿ ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘದ ಅಧ್ಯಕ್ಷ ಕುರಹಟ್ಟಿ ಮಹೇಶ್ ತಿಳಿಸಿದರು.

ನಗರದ ಶ್ರಾವಣ ಕಲ್ಯಾಣ ಮಂಟಪದಲ್ಲಿ ಸೋಮವಾರ ನಡೆದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ತಾಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ ಮೊದಲ ಸ್ಥಾನದಲ್ಲಿದೆ. ಕಳೆದ ಬಾರಿ 16 ಸಾವಿರ ಕ್ವಿಂಟಾಲ್ ಪಡಿತರ ಅಕ್ಕಿ ವ್ಯಾಪಾರದಿಂದ 50 ಲಕ್ಷ ಲಾಭ ದೊರೆತಿತ್ತು. ಸರ್ಕಾರ ಪಡಿತರ ವ್ಯವಸ್ಥೆಯಲ್ಲಿ 5 ಕೆಜಿ ಅಕ್ಕಿ ವಿತರಿಸುತ್ತಿರುವುದರಿಂದ 9 ಸಾವಿರ ಕ್ವಿಂಟಾಲ್ ಅಕ್ಕಿ ಮಾತ್ರ ದಾಸ್ತಾನಾಗುತ್ತಿದ್ದು, ಇದರಿಂದ ಈ ಬಾರಿ 33 ಲಕ್ಷ ಲಾಭ ಸಿಗುತ್ತಿದೆ. ಯಾವುದೇ ರೀತಿಯ ದುಂದು ವೆಚ್ಚ, ವ್ಯತ್ಯಾಸ ಇರುವುದಿಲ್ಲ. ಸದಸ್ಯರು ಯಾವುದೇ ಸಮಯದಲ್ಲಿ ಸೊಸೈಟಿಗೆ ಆಗಮಿಸಿ ಇಲ್ಲಿನ ಕಾರ್ಯ ಚಟುವಟಿಕೆಗಳ ಬಗ್ಗೆ ತಿಳಿದುಕೊಳ್ಳಬಹುದು. ಸದಸ್ಯರುಗಳ ನಿರೀಕ್ಷೆಯಂತೆ ಕಾರ್ಯ ನಿರ್ವಹಿಸುವುದಾಗಿ ಹೇಳಿದರು. ಕಾರ್ಯಕ್ರಮದಲ್ಲಿ ಸಂಘದ ಸದಸ್ಯರ ಮಕ್ಕಳಿಗೆ ನಗದು ಪುರಸ್ಕಾರ ನೀಡಿ ಸನ್ಮಾನಿಸಲಾಯಿತು. ಮುಖಂಡರಾದ ಬಿ.ಎಸ್.ಮಹದೇವಪ್ಪ, ನಂಜಪ್ಪ, ಶಿವಕುಮಾರ್, ಮುದ್ದುಮಾದಶೆಟ್ಟಿ, ಉಪಾಧ್ಯಕ್ಷ ಕೆ.ರಾಜು, ನಿರ್ದೇಶಕರಾದ ಎಸ್.ಎಂ.ಕೆಂಪಣ್ಣ, ವಿ.ಆರ್.ವಿಜಯಕುಮಾರ್, ಎನ್.ಎಂ.ಮಂಜುನಾಥ್, ಆರ್.ಸರ್ವೇಶ್, ಶಿವಕುಮಾರ್, ಹೆಚ್.ಜಿ.ಪರಶಿವಮೂರ್ತಿ, ಜಿಡಿಮಹೇಶ್, ಕೆಂಪಶಿವಮೂರ್ತಿ, ಹೆಚ್.ಎಂ.ಮಂಜುಳಾ, ಸುನಂದ, ವಿಶ್ವಾಸ್, ಬಿ.ಸಿ.ಚಿನ್ನಸ್ವಾಮಿ, ಸಿ.ಮಲ್ಲು ಆರ್.ಲೋಕೇಶ್, ರೇಣುಕಾ, ಹೇಮ, ಸಿ.ಷಣ್ಮುಖಸ್ವಾಮಿ, ಇತರರಿದ್ದರು.

ಮೈಸೂರು ಮಿತ್ರ

ಜನಸ್ಪಂದನ ಕಾರ್ಯಕ್ರಮದಲ್ಲಿ ಹರಿದು ಬಂದ ಸಮಸ್ಯೆಗಳ ಮಹಾಪೂರ

● ದೃಷ್ಟಿಹೀನ ಕುಟುಂಬಕ್ಕೆ 4ನೇ ಮಹಡಿಯಲ್ಲಿ ಮನೆ ● ಕಾನೂನುಬಾಹಿರವಾಗಿ ನಿವೇಶನ
● ಇನ್ನೂ ಬಂದಿಲ್ಲ ಕೊರೊನಾ ಕಾಲದ ವೇತನ ● ಹೌಸ್‌ಕೀಪರ್ ಬಿಪಿಎಲ್ ಕಾರ್ಡ್ ರದ್ದು

ಮೈಸೂರು,ಸೆ.23(ಎಂಟಿವೈ)– ಮೈಸೂರಿನ ಜಿ.ಪಂ. ಸಭಾಂಗಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್. ಸಿ.ಮಹದೇವಪ್ಪ ಸೋಮವಾರ ನಡೆಸಿದ ಜಿಲ್ಲಾಮಟ್ಟದ ಜನಸ್ಪಂದನ ಕಾರ್ಯಕ್ರಮದಲ್ಲಿ ಸಮಸ್ಯೆಗಳ ಮಹಾಪೂರವೇ ಹರಿದುಬಂತು.

ಜಿಲ್ಲಾಡಳಿತದ ವತಿಯಿಂದ ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ ಆಯೋಜಿಸಿದ್ದ ಜನಸ್ಪಂದನ ಕಾರ್ಯಕ್ರಮದಲ್ಲಿ ಜಿಲ್ಲೆಯ ವಿವಿಧೆಡೆಗಳಿಂದ ಸಾರ್ವಜನಿಕರು ಆಗಮಿಸಿ ಅಹವಾಲು ಸಲ್ಲಿಸಿದರು. ಸಚಿವರೊಂದಿಗೆ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ್ ರೆಡ್ಡಿ ಅರ್ಜಿಯನ್ನು ಪಡೆದು ಪರಿಹಾರಕ್ಕೆ ಕ್ರಮ ಕೈಗೊಳ್ಳಲು ಸೂಚಿಸಿದರು. ಕಂದಾಯ ಭೂಮಿ ಪ್ರಕರಣಗಳಿಗೆ ಸಂಬಂಧಿಸಿದ್ದೇ ಹೆಚ್ಚಾಗಿತ್ತು. ಅಲ್ಲದೆ, ಕೆಲಸದ ಬೇಡಿಕೆ, ಬಾಕಿ ವೇತನ, ಬಿಪಿಎಲ್ ಕಾರ್ಡ್ ಕೊಡಿಸುವುದೂ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ವೈಯಕ್ತಿಕ ಸಮಸ್ಯೆಗಳಿಗೆ ಕುರಿತಂತೆ ಅರ್ಜಿಗಳು ಸಲ್ಲಿಕೆಯಾದವು.

ಆಶ್ರಯ ಮನೆ ನಿರ್ಮಾಣದ ಹಣ ಕೊಡಿಸಿ: ಹೆಚ್.ಡಿ.ಕೋಟೆಯ ಕೆಂಪಶೆಟ್ಟಿ ಎಂಬುವರು ಮಂಜೂರಾಗಿರುವ ಮನೆ ನಿರ್ಮಿಸಿ ಒಂದು ವರ್ಷವಾದರೂ ಹಣ ಬಿಡುಗಡೆ ಮಾಡಿಲ್ಲ. ಹಣ ಬಿಡುಗಡೆ ಮಾಡಿಸಿಕೊಡುವಂತೆ ಮನವಿ ಮಾಡಿದರು.

ದೃಷ್ಟಿಹೀನ ವ್ಯಕ್ತಿಯಿಂದ ಅಳಲು: ಮೈಸೂರಿನ ಏಕಲವ್ಯನಗರದ ನಿವಾಸಿ ದೃಷ್ಟಿಹೀನರಾದ ಶಿವಶೆಟ್ಟಿ ಎಂಬುವರು ಏಕಲವ್ಯನಗರದಲ್ಲಿ ನನಗೆ 4ನೇ ಮಹಡಿಯಲ್ಲಿ ಮನೆ ಕೊಟ್ಟಿದ್ದಾರೆ. ಅಂಧರಾಗಿರುವ ಇಡೀ ಕುಟುಂಬ ಅಲ್ಲಿಗೆ ತೆರಳಲು ತೊಂದರೆಯಾಗುತ್ತಿದೆ. ನೆಲಮಹಡಿಯಲ್ಲಿ ಮನೆ ಕೊಡಿಸಿ, ಬೇರೆ ಕಡೆಯಾದರೂ ಕೊಡಿಸಿ ಎಂದು ಕಣ್ಣೀರು ಹಾಕಿದರು. ಈ ವಿಷಯದಲ್ಲಿ ಮಾನವೀಯ ದೃಷ್ಟಿಯಲ್ಲಿ ಸಹಾಯ ಮಾಡಲಾಗುವುದು ಎಂದು ಸಚಿವರು ಭರವಸೆ ನೀಡಿದರು.

ಅಕ್ರಮ ಖಾತೆ ರದ್ದು, ಅಧಿಕಾರಿ ವಿರುದ್ಧ ಕ್ರಮ: ಮೈಸೂರು ತಾಲೂಕು ಇಲವಾಲ ಹೋಬಳಿ ಮಾದಗಳ್ಳಿ ಬಳಿ ಕನಕ ಗೃಹ ನಿರ್ಮಾಣ ಸಹಕಾರ ಸಂಘದಿಂದ 32 ಎಕರೆ ಪ್ರದೇಶದಲ್ಲಿ ನಿರ್ಮಿಸಿರುವ ಬಡಾವಣೆಯಲ್ಲಿ ಸಿಎ ನಿವೇಶನ, ಉದ್ಯಾನ, ರಸ್ತೆ ಜಾಗದಲ್ಲಿ ಕಾನೂನುಬಾಹಿರವಾಗಿ ನಿವೇಶನ ರೂಪಿಸಿ ಮಾರಾಟ ಮಾಡಿದ್ದು, ಈ ಸರ್ಕಾರಿ ಜಾಗವನ್ನು ಉಳಿಸಿ ಅಕ್ರಮ ಖಾತೆಯನ್ನು ರದ್ದುಪಡಿಸಬೇಕು ಎಂದು ಅಲ್ಲಿಯ ನಿವಾಸಿಗಳು ಆಗ್ರಹಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ಸಂಬಂಧಪಟ್ಟವರಿಗೆ ನೋಟಿಸ್ ನೀಡಿ ಖಾತೆಗಳು ರದ್ದು ಪಡಿಸಿ. ಜತೆಗೆ ಅಕ್ರಮವಾಗಿ ಖಾತೆ ಮಾಡಿಕೊಟ್ಟ ಅಧಿಕಾರಿಗಳ ವಿರುದ್ಧವೂ ಶಿಸ್ತು ಕ್ರಮ ತೆಗೆದುಕೊಳ್ಳಬೇಕು ಎಂದು ಡಿಸಿಗೆ ನಿರ್ದೇಶಿಸಿದರು.

ಪರಿಹಾರ ಕೊಡಿಸಿ: ಇಲವಾಲ ಗ್ರಾಪಂ ವ್ಯಾಪ್ತಿಯ ಕರಕನಹಳ್ಳಿ ಬಳಿ ಹೆದ್ದಾರಿಗಾಗಿ ಜಮೀನು ಸ್ವಾಧೀನ ಪಡೆಸಿಕೊಂಡಿದ್ದು, ಭೂಮಿ ಕಳೆದುಕೊಂಡ 32 ಜನರಿಗೆ ಪರಿಹಾರ ಕೊಟ್ಟಿಲ್ಲ ಎಂದು ರೈತರು ದೂರಿದರು. ಈ ಕುರಿತು ದಾಖಲೆ ಪರಿಶೀಲನೆ ಮಾಡಲಾಗುತ್ತಿದ್ದು, ಅರ್ಹ ಭೂಮಾಲೀಕರಿಗೆ ಪರಿಹಾರ ಕಲ್ಪಿಸಿಕೊಡಲಾಗುವುದು ಎಂದು ಡಿಸಿ ತಿಳಿಸಿದರು

ಬೆದರಿಸುತ್ತಾರೆ: ವೃದ್ಧ ರೈತ ಶಿವಲಿಂಗೇಗೌಡ ಅವರು, ನನ್ನ ಜಮೀನು ಒತ್ತುವರಿ ಮಾಡಿಕೊಂಡು ನನಗೆ ಧಮ್ಕಿ ಹಾಕುತ್ತಾರೆ. ಎಲ್ಲಿ ಹೋದರೂ ಕೆಲ್ಸ ಆಗಲ್ಲ, ಏನು ಮಾಡಿಕೊಳ್ಳಲು ಆಗಲ್ಲ ಎಂದು ಹೆದರಿಸುತ್ತಾರೆ. ಸರ್ವೇ ಮಾಡಿಸಿ ಜಮೀನಿನಲ್ಲಿ ಹಾಕಿರುವ ಕಲ್ಲುಗಳನ್ನು ಸಹ ಕಿತ್ತು ಹಾಕಿದ್ದಾರೆ. ಜಯಪುರ ಪೊಲೀಸರು ಸಹ ಅವರ ಪರ ಕೆಲಸ ಮಾಡುತ್ತಿದ್ದಾರೆ ಎಂದು ದೂರಿದರು. ಇದಕ್ಕೆ ಸ್ಪಂದಿಸಿದ ಸಚಿವರು, ಇವರಿಗೆ ರಕ್ಷಣೆ ಕೊಡಿ, ಎರಡು ಕಡೆಯವರನ್ನು ಕರೆಸಿಕೊಂಡು ದಾಖಲೆ ಪರಿಶೀಲಿಸಿ ಕಾನೂನಿನ ರೀತಿ ಕ್ರಮ ವಹಿಸಬೇಕು ಎಂದು ಎಸ್‌ಪಿ ವಿಷ್ಣುವರ್ಧನ್‌ಗೆ ಸೂಚಿಸಿದರು.

ಪರಿಹಾರವೂ ಇಲ್ಲ, ಭೂಮಿಯೂ ಇಲ್ಲ: ತಾಂಡವಪುರದಲ್ಲಿ ನಮ್ಮ ಜಮೀನನ್ನು 12 ವರ್ಷದ ಹಿಂದೆ ಕೆಐಎಡಿಬಿ ಜಮೀನು ಸ್ವಾಧೀನ ಪಡಿಸಿಕೊಂಡಿದೆ. ಆದರೆ, ಇದುವರೆಗೂ ಪರಿಹಾರ ಕೊಟ್ಟಿಲ್ಲ ಇತ್ತ ಜಮೀನು ಸಹ ಇಲ್ಲದಂತಾಗಿದೆ ಎಂದು ರೈತರು ದೂರಿದರು. ಈ ಕುರಿತು ಪರಿಶೀಲನೆ ಮಾಡುವುದಾಗಿ ಡಿಸಿ ಭರವಸೆ ನೀಡಿದರು.

ಹೊಸ ಬಿಪಿಎಲ್ ಕಾರ್ಡ್ ವಿತರಣೆ: ಅ.1ರಿಂದ ಹೊಸ ಬಿಪಿಎಲ್ ಕಾರ್ಡ್ ವಿತರಣೆ ಮಾಡಲಾಗುವುದು ಎಂದು ಡಿಸಿ ಲಕ್ಷ್ಮೀಕಾಂತ್ ರೆಡ್ಡಿ ತಿಳಿಸಿದರು. ಬಿಪಿಎಲ್ ಕಾರ್ಡ್‌ಗೆ ಅರ್ಜಿ ಸಲ್ಲಿಸಿ 2 ವರ್ಷವಾದರೂ ಕೊಟ್ಟಿಲ್ಲ ಎಂದು ಕೃಷ್ಣ ಎಂಬ ವ್ಯಕ್ತಿ ಅಹವಾಲು ಸಲ್ಲಿಸಿದಾಗ ಪ್ರತಿಕ್ರಿಯಿಸಿದ ಡಿಸಿ, ಇಷ್ಟು ದಿನ ಹೊಸದಾಗಿ ಬಿಪಿಎಲ್ ಕಾರ್ಡ್ ನೀಡುತ್ತಿರಲಿಲ್ಲ. ಅ.1ರಿಂದ ಈ ಪ್ರಕ್ರಿಯೆ ಆರಂಭವಾಗಲಿದೆ. ಅರ್ಜಿ ಸಲ್ಲಿಸಿದ ಅರ್ಹರಿಗೆ ದೊರೆಯಲಿದೆ ಎಂದು ತಿಳಿಸಿದರು.

ವೀಳ್ಯದೆಲೆ ಬೆಳೆಗಾರರಿಗೆ ಹಕ್ಕುಪತ್ರ ವಿತರಣೆ: ಸೆ.29ರಂದು ವೀಳ್ಯದೆಲೆ ಬೆಳೆಗಾರರಿಗೆ ಹಕ್ಕುಪತ್ರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ವಿತರಿಸಲಿದ್ದಾರೆ. 245 ಬೆಳೆಗಾರರಿದ್ದಾರೆ. ಈ ಪೈಕಿ 85 ಜನರನ್ನು ಗುರುತಿಸಲಾಗಿದೆ. ಈ ಸಂಖ್ಯೆ 100 ದಾಟಬಹುದು. ಇವರಿಗೆಲ್ಲ ಹಕ್ಕುಪತ್ರವನ್ನು ಕೊಡಲಾಗುವುದು ಎಂದು ಈ ಕುರಿತು ಅರ್ಜಿ ಸ್ವೀಕರಿಸಿದ ಬಳಿಕ ಸಚಿವರು ತಿಳಿಸಿದರು.

ದಸರಾದಲ್ಲಿ ಅವಕಾಶ ಕೊಡಿಸಿ: ನಿಗಮ–ಮಂಡಳಿಯಲ್ಲಿ ಸ್ಥಾನ ಕಲ್ಪಿಸಿಕೊಡಿ ಎಂದು ಒಬ್ಬರು ಹೇಳಿದರೆ, ಕಲಾವಿದರೊಬ್ಬರು ದಸರಾ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಅವಕಾಶ ಕಲ್ಪಿಸಿಕೊಡಿ ಎಂದು ಕೋರಿಕೊಂಡರು. ಸಿದ್ದರಾಮನಹುಂಡಿ ಮಹಿಳೆಯೊಬ್ಬರು 'ಕೆಲಸ ಕೊಡಿಸಿ' ಎಂದು ಕೋರಿದರು

ಹೌಸ್‌ಕೀಪಿಂಗ್ ಮಾಡುವ ಮಹಿಳೆಗೆ ಎಪಿಲ್ ಕಾರ್ಡ್: ಇದುವರೆಗೂ ನಮಗೆ ಬಿಪಿಎಲ್ ಪಡಿತರ ಚೀಟಿ ಇತ್ತು. ಆದರೆ, ತೆರಿಗೆ ಪಾವತಿಸುತ್ತೀರಿ ಎಂದು ಎಪಿಎಲ್ ಕಾರ್ಡ್ ನೀಡಿದ್ದಾರೆ. ನಾವು ಯಾವುದೇ ತೆರಿಗೆ ಪಾವತಿಸುವುದಿಲ್ಲ. ಖಾಸಗಿ ಸಂಸ್ಥೆಯಲ್ಲಿ ಹೌಸ್‌ಕೀಪಿಂಗ್ ಕೆಲಸ ಮಾಡುತ್ತೇನೆ. ಪತಿ ಕೂಲಿ ಕಾರ್ಮಿಕರಾಗಿದ್ದಾರೆ. ಆದರೂ ಬಿಪಿಎಲ್ ಕಾರ್ಡ್ ರದ್ದು ಮಾಡಲಾಗಿದೆ ಎಂದು ಅಳಲು ತೋಡಿಕೊಂಡರು.

ಇದಕ್ಕೆ ಸ್ಪಂದಿಸಿದ ಸಚಿವ ಡಾ.ಮಹದೇವಪ್ಪ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಉಪನಿರ್ದೇಶಕರಾದ ಕುಮುದಾ ಅವರಿಗೆ ಸೂಚನೆ ನೀಡಿ, ಸದರಿ ಮಹಿಳೆಗೆ ಬಿಪಿಎಲ್ ಕಾರ್ಡ್ ನೀಡುವಂತೆ ಹಾಗೂ ಬಿಪಿಎಲ್ ಕಾರ್ಡ್‌ನಿಂದ ಎಪಿಎಲ್ ಕಾರ್ಡ್ ಆಗಿ ಬದಲಾಗಿದ್ದು ಹೇಗೆ ಎಂದು ಪರಿಶೀಲಿಸುವಂತೆ ಸೂಚಿಸಿದರು.

ವೇತನ ಮಂಜೂರು ಮಾಡಿಸಿಕೊಡಿ: ಅನುದಾನಿತ ಶಿಕ್ಷಣ ಸಂಸ್ಥೆಯೊಂದರ ಸಿಬ್ಬಂದಿ ಕುಮಾರಿ ಎಂಬುವರು, ಮೈಸೂರಿನ ಅನುದಾನಿತ ಶಿಕ್ಷಣ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದು, ಕಳೆದ ಮೂರು ತಿಂಗಳಿಂದ ಉದ್ದೇಶಪೂರ್ವಕವಾಗಿ ವೇತನ ನೀಡದೇ ಸತಾಯಿಸುತ್ತಿದ್ದಾರೆ. ಇದರಿಂದ ಜೀವನ ನಿರ್ವಹಣೆಗೆ ಕಷ್ಟವಾಗುತ್ತಿದೆ ಎಂದು ಅಳಲು ತೋಡಿಕೊಂಡರು. ಇದಕ್ಕೆ ಸಂಬಂಧಪಟ್ಟವರನ್ನು ಸಂಪರ್ಕಿಸಿ ವೇತನ ಬಿಡುಗಡೆ ಮಾಡಿಸುವಂತೆ ಸಚಿವರು ಸಲಹೆ ನೀಡಿದರು.

ವಿವಿಧ ಬೇಡಿಕೆ: 120 ಮಹಿಳೆಯರನ್ನು ಒಳಗೊಂಡ ಸ್ತ್ರೀಶಕ್ತಿ ಸಂಘಕ್ಕೆ ಆರ್ಥಿಕ ಸಹಾಯ ಮಾಡಬೇಕು ಎಂದು ಶಕ್ತಿನಗರದ ತುಳಸಿ ಮನವಿ ಮಾಡಿದರು. ತಿ.ನರಸೀಪುರ ತಾಲೂಕಿನ ಎಂ.ಸಿ.ಹುಂಡಿಯಲ್ಲಿ ಸ್ಮಶಾನ ಇಲ್ಲ. ಇದಕ್ಕಾಗಿ ಭೂಮಿ ಕಲ್ಪಿಸಿಕೊಡಬೇಕು ಎಂದು ಸಿ.ರಾಜೇಶ್ ಒತ್ತಾಯಿಸಿದರು. ದಡದಳ್ಳಿ ಬಳಿ ಪೆಟ್ರೋಲ್ ಬಂಕ್ ನಿರ್ಮಾಣಕ್ಕೆ 9 ಇಲಾಖೆಗಳು ಎನ್‌ಒಸಿ ಕೊಟ್ಟಿವೆ. ಆದರೆ, ಮುಡಾ ಮಾತ್ರ ಕೊಡುತ್ತಿಲ್ಲ. 9 ತಿಂಗಳಿಂದ ಸತಾಯಿಸಲಾಗುತ್ತಿದೆ ಎಂದು ವ್ಯಕ್ತಿಯೊಬ್ಬರು ಅರ್ಜಿ ಸಲ್ಲಿಸಿದರು. ಮುಡಾದ ಹೊರಗುತ್ತಿಗೆ ಸಿಬ್ಬಂದಿಗೆ ಬಾಕಿ ಇರುವ 10 ತಿಂಗಳ ವೇತನ ಕೊಡಿಸಬೇಕು ಎಂದು ಆ ಸಿಬ್ಬಂದಿ ವಿನಂತಿ ಮಾಡಿದರು. ಅನೈರ್ಮಲ್ಯಕ್ಕೆ ಕಾರಣವಾಗಿರುವ ಕೆಸರೆಯ ಕುರಿ ಮಂಡಿಯನ್ನು ಸ್ಥಳಾಂತರಿಸಬೇಕು ಎಂದು ಮಂಚೇಲಿಂಗಯ್ಯ ಕೋರಿದರು. ಡಿಸಿ ಕಚೇರಿ ಆವರಣದಲ್ಲಿ ವಾಲ್ಮೀಕಿ ಪ್ರತಿಮೆ ನಿರ್ಮಾಣ, ಎಸ್‌ಟಿ ವಿದ್ಯಾರ್ಥಿಗಳಿಗೆ 10 ಹಾಸ್ಟೆಲ್ ನಿರ್ಮಾಣಕ್ಕೆ ಮನವಿ ಸಲ್ಲಿಕೆ.

ಸಭೆಯಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಮುಡಾ ಅಧ್ಯಕ್ಷ ಕೆ.ಮರೀಗೌಡ ಜಿ.ಪಂ ಸಿಇಓ ಕೆ.ಎಂ.ಗಾಯತ್ರಿ, ಡಿಸಿಎಫ್ ಡಾ.ಕೆ.ಎನ್.ಬಸವರಾಜು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



ಜಿ.ಪಂ ಸಭಾಂಗಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಸಾರ್ವಜನಿಕರಿಂದ ಅಹವಾಲು ಸ್ವೀಕರಿಸಿದರು.

ಕಾದು ಕಾದು ಸುಸ್ತಾದ ಜನ

ಸಚಿವರಿಗಾಗಿ ಸಾರ್ವಜನಿಕರು ಕಾಯ್ದು ಹೈರಾಣರಾದರು. ಬೆಳಗ್ಗೆ 10.30ಕ್ಕೆ ಕಾರ್ಯಕ್ರಮ ಶುರುವಾಗಬೇಕಿತ್ತು. ಆದರೆ, ಸಚಿವರು ಬರುವುದು ಬರೋಬರಿ ಎರಡು ತಾಸು ತಡವಾಯಿತು. ಬಂದ ಜನರು ಕುಳಿತುಕೊಳ್ಳಲು ಜಿಪಂ ಕಚೇರಿ ಎದುರು ಪೆಂಡಾಲ್ ಹಾಕಿ, ಕುರ್ಚಿ ವ್ಯವಸ್ಥೆ ಏನೋ ಮಾಡಲಾಗಿತ್ತು. ಆದರೆ, ಕಾಯ್ದು ಕಾಯ್ದು ಬಸವಳಿದರು. ಮಧ್ಯಾಹ್ನ 12.30ಕ್ಕೆ ಸಚಿವರ ಆಗಮನದ ಬಳಿಕ ಅಹವಾಲು ಆಲಿಸಲು ಶುರು ಮಾಡಿದರು. ಜನರ ಸರದಿ ಸಾಲು ಮಾತ್ರ ಕಡಿಮೆಯಾಗಲಿಲ್ಲ. ಮಧ್ಯಾಹ್ನ 3ರವರೆಗೆ ಜನರೂ ಇದ್ದರು. ಮೊದಲೇ ನೋಂದಣಿ ಮಾಡಿಸಿಕೊಂಡವರನ್ನು ಒಬ್ಬೊಬ್ಬರಾಗಿ ಸಭಾಂಗಣದೊಳಗೆ ಬಿಡಲಾಯಿತು. ಸರದಿ ಬರುವ ಹೊತ್ತಿಗೆ ಅಹವಾಲುದಾರರು ಸುಸ್ತಾಗಿ ಹೋಗಿದ್ದರು.

ಎಂಜಿ ರಸ್ತೆ, ಸಿಟಿ ಬಸ್‌ಸ್ಟಾಂಡ್ ರಸ್ತೆಗೆ ಡಾಂಬರೀಕರಣ ಮಾಡಿ

ಕಾಂಗ್ರೆಸ್ ಮುಖಂಡ ಮೈಸೂರು ಬಸವಣ್ಣ ಜನಸ್ಪಂಧನಾ ಸಭೆಯಲ್ಲಿ ಅರ್ಜಿ ಸಲ್ಲಿಸಿ, ಮೈಸೂರಿನ ಎಂಜಿ ರಸ್ತೆಯಲ್ಲಿ ಪ್ರತಿದಿನ ಸಾವಿರಾರು ವಾಹನಗಳು ಸಂಚರಿಸುತ್ತಿರುತ್ತವೆ. ಆದರೆ, ಎಂ.ಜಿ. ರಸ್ತೆ ಹಳ್ಳ-ಕೊಳ್ಳಗಳಿಂದ ತುಂಬಿದೆ. ನಗರ ಬಸ್ ನಿಲ್ದಾಣದ ರಸ್ತೆಯಲ್ಲೂ ಗುಂಡಿಗಳಿವೆ. ದಸರಾ ಮಹೋತ್ಸವ ಈ ಹಿನ್ನೆಲೆಯಲ್ಲಿ ಮೈಸೂರಿಗೆ ಬರುವ ಪ್ರವಾಸಿಗರ ಸಂಖ್ಯೆ ಹೆಚ್ಚಾಗುತ್ತಿದೆ. ಕೂಡಲೇ ಡಾಂಬರೀಕರಣಕ್ಕೆ ಕ್ರಮ ಕೈಗೊಳ್ಳುವಂತೆ ಮನವಿ ಮಾಡಿದರು. ಇದಕ್ಕೆ ಸಚಿವರು ಸಮ್ಮತಿಸಿದರು.

ಕೊರೊನಾ ವೇತನ ಬಿಡುಗಡೆಗೆ ಸೂಚನೆ

ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ಹಾಸ್ಟೆಲ್‌ಗಳ ಸಿಬ್ಬಂದಿಗಳಿಗೆ ಕೊರೊನಾ ಕಾಲದ ವೇತನ ನೀಡಿಲ್ಲ. ಕಾರ್ಮಿಕ ನ್ಯಾಯಾಲಯ ಈ ಕುರಿತು ಆದೇಶಿಸಿದೆ. 93 ಲಕ್ಷ ರೂ.ಗಳಲ್ಲಿ 53 ಲಕ್ಷ ರೂ. ಬಂದಿದೆ. ಇದರಲ್ಲಿ ವೇತನ ನೀಡಿದರೆ ದಾಖಲಾಗಿರುವ 7 ಪ್ರಕರಣದಲ್ಲಿ 3 ಇತ್ಯರ್ಥವಾಗುತ್ತದೆ. 4 ಪ್ರಕರಣಗಳು ಬಾಕಿ ಇವೆ. ಉಳಿಕೆ ಪ್ರಕರಣಗಳ ವೇತನ ಕೊಡಿಸಬೇಕು ಎಂದು ಎಐಡಿಎಸ್‌ಒ ಸಂಘಟನೆಯ ಮುದ್ದುಕೃಷ್ಣ ಆಗ್ರಹಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು, ಬಾಕಿ ವೇತನ ನೀಡುವಂತೆ ಅಧಿಕಾರಿಗಳಿಗೆ ನಿರ್ದೇಶಿಸಿದರು.

ಪಾಲಿಕೆಯಿಂದ ಪೌರಕಾರ್ಮಿಕರಿಗೆ ಸನ್ಮಾನ

ಮೈಸೂರು, ಸೆ. 23(ಆರ್‌ಕೆ)– ಮೈಸೂರಿನ ಕಲಾಮಂದಿರದಲ್ಲಿ ಇಂದು ಮಹಾನಗರ ಪಾಲಿಕೆಯಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 66 ಮಂದಿ ಪೌರಕಾರ್ಮಿಕರನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು.

ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಕಾರ್ಯಕ್ರಮ ಉದ್ಘಾಟಿಸಿ ವಾರ್ಡ್‌ಗೊಬ್ಬರಂತೆ ಆಯ್ದ 66 ಮಂದಿ ಪೌರಕಾರ್ಮಿಕರನ್ನು ಸನ್ಮಾನಿಸಿದರು. ಅದೇ ವೇಳೆ ಕ್ರೀಡೆ ಮತ್ತು ವಿವಿಧ ಸ್ಪರ್ಧೆಗಳ ವಿಜೇತರಿಗೆ ಬಹುಮಾನಗಳನ್ನು ಪ್ರದಾನ ಮಾಡಲಾಯಿತು.

ಈ ಸಂದರ್ಭ ಪೌರಕಾರ್ಮಿಕರನ್ನುದ್ದೇಶಿಸಿ ಮಾತನಾಡಿದ ಯದುವೀರ್, ಮೈಸೂರು ಸ್ವಚ್ಛತೆಯಲ್ಲಿ ಪ್ರಮುಖ ಪಾತ್ರ ವಹಿಸಿರುವ ಪೌರಕಾರ್ಮಿಕರು ಇನ್ನೂ ಉತ್ತಮವಾಗಿ ಕೆಲಸ ಮಾಡುವ ಮೂಲಕ ನಗರವನ್ನು ಅಂದವಾಗಿರಿಸುವುದರ ಜೊತೆಗೆ ಪ್ಲಾಸ್ಟಿಕ್ ಮುಕ್ತ ನಗರವಾಗಿಸಲು ಪ್ರಯತ್ನಶೀಲರಾಗಬೇಕು ಎಂದು ಸಲಹೆ ನೀಡಿದರು.

ಶಾಸಕ ಟಿ.ಎಸ್. ಶ್ರೀವತ್ಸ, ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಷರೀಫ್, ಕೌನ್ಸಿಲ್ ಕಾರ್ಯದರ್ಶಿ ರಂಗಸ್ವಾಮಿ, ಮುಖ್ಯ ಆರೋಗ್ಯಾಧಿಕಾರಿ ಡಾ. ವೆಂಕಟೇಶ್, ಆರೋಗ್ಯಾಧಿಕಾರಿ ಡಾ. ಹರ್ಷ, ಪರಿಸರ ಇಂಜಿನಿಯರ್‌ಗಳಾದ ಮೀನಾಕ್ಷಿ, ವಲಯಾಧಿಕಾರಿಗಳು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.



ಅರ್ಜಿ ಆಹ್ವಾನ

ಮೈಸೂರು,ಸೆ.23– ಹೂಟಗಳ್ಳಿ ನಗರಸಭೆ ನಗರಸಭಾ ಸಾಮಾನ್ಯ ನಿಧಿಯಡಿಯಲ್ಲಿ 2024–25 ನೇ ಸಾಲಿನ ಶೇ.24.10 ರ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಶೇ.7.25ರ ಇತರೆ ಹಿಂದುಳಿದ ವರ್ಗದ ಬಡಜನರ ಕಾರ್ಯಕ್ರಮದಡಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಇತರ ಹಿಂದುಳಿದ ವರ್ಗದ ಬಡಜನರ ಮನೆಗಳಿಗೆ ವೈಯಕ್ತಿಕ ಯುಜಿಡಿ ಸಂಪರ್ಕ ಕಲ್ಪಿಸುವ ಸಹಾಯಧನಕ್ಕಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿಯನ್ನು ಹೂಟಗಳ್ಳಿ ನಗರಸಭಾ ಪೌರಾಯುಕ್ತರ ಕಚೇರಿಗೆ ಸೆ.30 ರೊಳಗೆ ಸಲ್ಲಿಸಬೇಕಾಗಿದ್ದು, ಹೆಚ್ಚಿನ ಮಾಹಿತಿಗಾಗಿ 0821–2001737 ಅನ್ನು ಸಂಪರ್ಕಿಸಬಹುದು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಗೋಟ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕೃಷ್ಣಂ ಪ್ರಣಯ ಸಖಿ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಯುದ್ಧ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಲಂಗೋಟಿ ಮ್ಯಾನ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲಂಗೋಟಿ ಮ್ಯಾನ್ (ಕ)	4 ಪ್ರದರ್ಶನಗಳು
ರಾಜಕಮಲ್	
ಯುದ್ಧ (ಹಿಂ)	4 ಪ್ರದರ್ಶನಗಳು
ಸಂಗಂ	
ಹಗ್ಗ (ಕ)	4 ಪ್ರದರ್ಶನಗಳು
ಲಿಡೋ	
ಉಪೇಂದ್ರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಗೋಟ್ (ತ)	4 ಪ್ರದರ್ಶನಗಳು
ಪ್ರಭಾ	
ಖೈದಿ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಟ್ರಾನ್ಸ್‌ಫಾರ್ಮರ್ಸ್ ಒನ್ (3ಡಿ) (ಇಂ): ಬೆ.11.20ಕ್ಕೆ, ರಾ.7.40ಕ್ಕೆ, ರಾ.9.55ಕ್ಕೆ, ಹಗ್ಗ (ಕ): ಮ.1.35ಕ್ಕೆ, ದಿ ಗ್ರೇಟೆಸ್ಟ್ ಆಫ್ ಆಲ್ ಟೈಂ (ತ): ಸಂ.4.15ಕ್ಕೆ.
ಸ್ಕ್ರೀನ್ 2	ಲಂಗೋಟಿ ಮ್ಯಾನ್ (ಕ): ಬೆ.10.30ಕ್ಕೆ, ಲಬ್ಬರ್ ಪಾಂಡು (ತ): ಮ.1.40ಕ್ಕೆ, ನಂದನ್ (ತ): ಸಂ.4.35ಕ್ಕೆ, ಕಹಾನ್ ಶುರು ಕಹಾನ್ ಕಥಂ (ಹಿಂ): ರಾ.7.15ಕ್ಕೆ, ತುಂಬ್ಬಾಡ್ (ಹಿಂ): ರಾ.9.55ಕ್ಕೆ.
ಸ್ಕ್ರೀನ್ 3	ಉಪೇಂದ್ರ (ಕ): ಬೆ.10.50ಕ್ಕೆ, ಕರ್ಕಿ ನಾನು ಬಿಎ ಎಲ್‌ಎಲ್‌ಬಿ (ಕ): ಮ.1.35ಕ್ಕೆ, ಅನ್ನ (ಕ): ಸಂ.4.35ಕ್ಕೆ, ಯುದ್ರ (ಹಿಂ): ರಾ.7.15ಕ್ಕೆ, ಕಿಷ್ಕಿಂಧಾ ಖಂಡಂ (ಮ): ರಾ.10.10ಕ್ಕೆ.
ಸ್ಕ್ರೀನ್ 4	ಸ್ತ್ರೀ 2 (ಹಿಂ): ಬೆ.10.05ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1ಕ್ಕೆ, ರಾ.7.10ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಸಂ.4.05ಕ್ಕೆ, ಯುದ್ರ (ಹಿಂ): ರಾ.10.15ಕ್ಕೆ.

ಐನಾಕ್ಸ್ ಮೂವೀಸ್
LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಧ್ರುವತಾರೆ (ಕ): ಮ.1.05ಕ್ಕೆ, ಕರ್ಕಿ ನಾನು ಬಿಎ ಎಲ್‌ಎಲ್‌ಬಿ (ಕ): ಸಂ.4.10ಕ್ಕೆ, ಹಗ್ಗ (ಕ): ರಾ.7.05ಕ್ಕೆ, ದಿ ಗ್ರೇಟೆಸ್ಟ್ ಆಫ್ ಆಲ್ ಟೈಂ (ತ): ರಾ.9.35ಕ್ಕೆ.
ಸ್ಕ್ರೀನ್ 2	ಕೃಷ್ಣಂ ಪ್ರಣಯ ಸಖಿ (ಕ): ಮ.1.10ಕ್ಕೆ, ಲಂಗೋಟಿ ಮ್ಯಾನ್ (ಕ): ಸಂ.4.10ಕ್ಕೆ, ಇಬ್ಬನಿ ತಬ್ಬಿದ ಇಳೆಯಲಿ (ಕ): ರಾ.7.15ಕ್ಕೆ.
ಸ್ಕ್ರೀನ್ 3	ದಿ ಗ್ರೇಟೆಸ್ಟ್ ಆಫ್ ಆಲ್ ಟೈಂ (ತ): ಸಂ.6.15ಕ್ಕೆ, ಕೋಳಿಪಣ್ಣೈ ಚೆಲ್ಲದುರೈ (ತ): ರಾ.9.40ಕ್ಕೆ.
ಸ್ಕ್ರೀನ್ 4	ಇಬ್ಬನಿ ತಬ್ಬಿದ ಇಳೆಯಲಿ (ಕ): ಮ.1.15ಕ್ಕೆ, ರಾ.9.30ಕ್ಕೆ, ನಂದನ್ (ತ): ಸಂ.4.20ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಸಂ.6.30ಕ್ಕೆ

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಜನಪದ ಕಲಾ ಪ್ರಕಾರಗಳ ಉಚಿತ ತರಬೇತಿ ಶಿಬಿರದ ಸಮಾರೋಪ

ಶರಣ ಪರಂಪರೆ ಮತ್ತೆ ಚಿಗುರೊಡೆದರೆ ಜನಪದಕ್ಕೆ ಜೀವ

ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್

ಮೈಸೂರು,ಸೆ.23(ಪಿಎಂ)– ಶರಣರ ಸತ್ವಗಳನ್ನು ನಮ್ಮ ಭೂಮಿಯಲ್ಲಿ ಮತ್ತೆ ಬಿತ್ತಬೇಕಿದೆ. ವಚನಗಳು ನಮ್ಮ ಸಮಾಜದಲ್ಲಿ ಮತ್ತೊಮ್ಮೆ ಮುನ್ನೆಲೆಗೆ ಬರಬೇಕು. ಶರಣ ಪರಂಪರೆ ಮತ್ತೆ ಚಿಗುರೊಡೆದರೆ ಜನಪದಕ್ಕೆ ಜೀವ ಬರಲಿದೆ ಎಂದು ಕರ್ನಾಟಕ ಜಾನಪದ ಅಕಾಡೆಮಿ ಅಧ್ಯಕ್ಷ ಗೊಲ್ಲಹಳ್ಳಿ ಶಿವಪ್ರಸಾದ್ ಹೇಳಿದರು.

ಮೈಸೂರಿನ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಗೌತಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವಾ ಟ್ರಸ್ಟ್ ವತಿಯಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕರ್ನಾಟಕ ಜಾನಪದ ಅಕಾಡೆಮಿ ಸಹಯೋಗದಲ್ಲಿ ಸೋಮವಾರ ಹಮ್ಮಿಕೊಂಡಿದ್ದ ಜನಪದ ಕಲಾ ಪ್ರಕಾರಗಳ ಉಚಿತ ತರಬೇತಿ ಶಿಬಿರದ ಸಮಾರೋಪ ಸಮಾರಂಭವನ್ನು ಡೊಳ್ಳು ಬಾರಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮ ಜನಪದರು ಯಾವತ್ತೂ ಒಲ್ಲದ ಲೋಕದಲ್ಲಿ ಇರಲಿಲ್ಲ. ಬದಲಿಗೆ ಅವರು ನಿತ್ಯಸತ್ಯಗಳ ಜೊತೆ ನಿಯಮಾನುಸಾರವಾಗಿ ಬದುಕು ಮಾಡಿದವರು. ಹಾಗಾಗಿ ಜನಪದರ ಪರಂಪರೆಯನ್ನು ನಾವು ಮತ್ತೆ ಮೈಗೂಡಿಸಿಕೊಳ್ಳಬೇಕು. ಇದೇ ನಾಳೆಗೆ ಬೇಕಿರುವುದು. ಆದರೆ ನಾವಿಂದು ಭ್ರಮಾಲೋಕದಲ್ಲಿದ್ದು, ನಮ್ಮದಲ್ಲದ್ದರ ಅನುಕರಣೀಯ ವ್ಯಾಧಿಗೆ ಒಳಗಾಗಿದ್ದೇವೆ. ಈ ವ್ಯಾಧಿ ಹೋದರೆ ನಮ್ಮ ಜನಪದಿಯರ ಜಗತ್ತು ಕಟ್ಟಿಕೊಳ್ಳಲು ಸಾಧ್ಯವಾಗಲಿದೆ. ನಮ್ಮ ಜನಪದರು ಯಾವುದೇ ಧರ್ಮಗ್ರಂಥದಲ್ಲಿ ಇಲ್ಲದ ಆದರ್ಶಗಳನ್ನು ಕಟ್ಟಿಕೊಟ್ಟಿದ್ದಾರೆ ಎಂದು ತಿಳಿಸಿದರು.

ಹಿಂಸೆ–ಕ್ರೌರ್ಯ ಆರಾಧಿಸುವತ್ತ ಜಗತ್ತು: ಜನಪದರ ಜೀವನ ಮತ್ತು ನಡೆ ಯಾರಿಗೂ ಘಾಸಿ ಮಾಡಿಲ್ಲ. ಅವರು ಮಹಾನ್ ಸುಸಂಸ್ಕೃತರು. ಹಾಗಾಗಿ ಅವರಂತಹ ಬದುಕು ಹಾಗೂ ನಾಳೆಗೆ ಬೇಕಾದ ಬದುಕು ಎರಡನ್ನೂ ಸಮಪ್ರಮಾಣದಲ್ಲಿ ಆಲೋಚಿಸಿ ಮುಂದೆ ಸಾಗಬೇಕಿದೆ. ಬುದ್ಧ, ಬಸವ, ಶರಣರು, ಬಾಬಾ ಸಾಹೇಬರ ಹಾದಿಯಲ್ಲಿ ನಾವು ಮುನ್ನಡೆಯಬೇಕು. ಕರ್ನಾಟಕ ಶಾಂತಿಯ ತೋಟ. ಇದನ್ನು ಕಾಪಾಡಿಕೊಳ್ಳಬೇಕು. ಈ ಶಾಂತಿಯ ತೋಟಕ್ಕೆ ಕೀಟಗಳ ಕಾಟ ಈಗ ಪ್ರಾರಂಭವಾಗಿದೆ. ಹಿಂಸೆ–ಕ್ರೌರ್ಯ ರಾರಾಜಿಸುವಂತಾಗಿದ್ದು, ಜೊತೆಗೆ ಹಿಂಸೆ ಮತ್ತು ಕ್ರೌರ್ಯ ಆರಾಧಿಸುವ ಸಂಸ್ಕೃತಿ ಕಡೆಗೆ ಜಗತ್ತು ಹೋಗುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಶ್ರೇಷ್ಠತೆ ಮತ್ತು ಕನಿಷ್ಠತೆ, ಮೇಲರಿಮೆ ಮತ್ತು ಕೀಳರಿಮೆಯನ್ನು ಕಿತ್ತೊಗೆಯಬೇಕು. ಈ ಸುಳ್ಳುಗಳ ನಡುವೆ ಭ್ರಮಾ ಲೋಕದಲ್ಲಿ ಬದುಕುತ್ತಿದ್ದೇವೆ. ಇವುಗಳಿಂದ ದೂರವಾದರೆ ನಿಜವಾದ ಜಗತ್ತಿಗೆ ಪ್ರವೇಶ ಪಡೆಯುತ್ತೇವೆ. ಇದನ್ನು ಅರ್ಥ ಮಾಡಿಕೊಳ್ಳಬೇಕು. ಮುಂಚೆ ಒಂದು ಕೋಟಿ ರೂ. ಇದ್ದರೆ ಸಿನಿಮಾ ನಿರ್ಮಿಸಬಹುದಿತ್ತು. ಆದರೆ ಇಂದು ಚಿತ್ರರಂಗದಲ್ಲೂ ಕಾರ್ಪೋರೇಟ್ ವ್ಯವಸ್ಥೆ ಬಂದು ನೂರಾರು, ಸಾವಿರಾರು ಕೋಟಿ ಬಂಡವಾಳ ವಿನಿಯೋಗಿಸುವಂತಾಗಿದೆ. ಸಾಂಸ್ಕೃತಿಕ ಲೋಕದ ಎಲ್ಲಾ ಆಯಾಮಗಳೂ ನಮ್ಮಿಂದ ದೂರವಾಗಿ ಕಾರ್ಪೋರೇಟ್ ಸೆಕ್ಟರ್‌ನಲ್ಲಿ ಸಿಲುಕಿವೆ ಎಂದು ವಿಷಾದಿಸಿದರು.

ಪಠ್ಯದಲ್ಲಿ ಜನಪದ ಅಗತ್ಯ: ದೇಶ ಮತ್ತು ಸಮಾಜ ಕಟ್ಟುವ ಪ್ರಕ್ರಿಯೆಯಲ್ಲಿ ನಮ್ಮ ನೆಲದ ಸಾಹಿತ್ಯ ಮತ್ತು ಕಲೆ ಪ್ರಮುಖ ಪಾತ್ರ ವಹಿಸಲಿವೆ. ಆದರೆ ಅವು ನಮ್ಮಿಂದ ದೂರವಾಗುವ ಆತಂಕ ಎದುರಾಗಿದೆ. ನಮ್ಮ ನೆಲದಲ್ಲಿ ಸಾಂಸ್ಕೃತಿಕ ರಾಜಕಾರಣ ನಡೆಯುತ್ತಿದ್ದು, ಆ ಮೂಲಕ ನಮ್ಮ ಪರಂಪರೆಯನ್ನು ಮರೆಮಾಚಲಾಗುತ್ತಿದೆ. ಇದಕ್ಕೆ ಪ್ರತ್ಯುತ್ತರ ಜನಪದವೇ ಆಗಿದೆ. ಜನಪದ ವಿಚಾರಧಾರೆಯಿಂದ ನಮ್ಮ ಮನೋವಿಕಾಸ ಆಗಲಿದೆ. ಹಾಗಾಗಿ ವಿದ್ಯಾರ್ಥಿಗಳಿಗೆ ಜಾನಪದ ತಲುಪಿಸುವ ಬಗ್ಗೆ ನನ್ನದೇ ಆಲೋಚನೆ ಇದೆ. ನೈತಿಕ ಶಿಕ್ಷಣದ ಭಾಗವಾಗಿ ಜನಪದವನ್ನು ಪಠ್ಯದಲ್ಲಿ ಅಳವಡಿಸಬೇಕಿದ್ದು, ಜೊತೆಗೆ ಜನಪದದತ್ತ ವಿದ್ಯಾರ್ಥಿಗಳ ನಡೆ ಎಂಬ ಕಾರ್ಯಕ್ರಮ ರೂಪಿಸುವ ಆಲೋಚನೆಯೂ ಇದೆ. ಈ ಸಂಬಂಧ ಸರ್ಕಾರಕ್ಕೆ ಮನವಿ ಸಲ್ಲಿಸಲು ಉದ್ದೇಶಿಸಿದ್ದೇನೆ ಎಂದು ಗೊಲ್ಲಹಳ್ಳಿ ಶಿವಪ್ರಸಾದ್ ತಿಳಿಸಿದರು.

60 ಮಂದಿ ಭಾಗಿ: 14 ದಿನಗಳ ಕಾಲ ಕಲಾ ಮಂದಿರ ಆವರಣದಲ್ಲಿ ನಡೆದ ಶಿಬಿರದಲ್ಲಿ ವಿವಿಧ ಪದವಿ ಕಾಲೇಜುಗಳ 60 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಕಾರ್ಯಕ್ರಮದಲ್ಲಿ ಶಿಬಿರಾರ್ಥಿಗಳು ಜನಪದ ಕಲೆಗಳ ಪ್ರದರ್ಶನ ನೀಡಿದರು. ಹಿರಿಯ ರಂಗ ಕರ್ಮಿ ಹೆಚ್.ಜನಾರ್ಧನ್, ಎಪಿಎಂಸಿ ಮಾಜಿ ಉಪಾಧ್ಯಕ್ಷ ಅಹಿಂದ ಚಿಕ್ಕಜವರಪ್ಪ ಜಾನಪದ ಅಕಾಡೆಮಿ ಸದಸ್ಯರಾದ ಡಾ.ಮೈಸೂರು ಗುರುರಾಜ್, ಡಾ.ಉಮೇಶ್, ಟ್ರಸ್ಟ್ ಅಧ್ಯಕ್ಷ ಕೃಷ್ಣಮೂರ್ತಿ ತಲಕಾಡು ಮತ್ತಿತರರು ಹಾಜರಿದ್ದರು.



ಮೈಸೂರಿನ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಸೋಮವಾರ ಜನಪದ ಕಲಾ ಪ್ರಕಾರಗಳ ಉಚಿತ ತರಬೇತಿ ಶಿಬಿರದ ಸಮಾರೋಪ ಸಮಾರಂಭ ನಡೆಯಿತು.

ಮುನಿರತ್ನ ವಿರುದ್ಧ ಪ್ರಕರಣಗಳ ತನಿಖೆಗೆ ರಚಿತವಾಗಿರುವ ಎಸ್‌ಐಟಿಗೆ 25 ಸಿಬ್ಬಂದಿಗಳ ನಿಯೋಜನೆ

ಬೆಂಗಳೂರು, ಸೆ. 23– ಬೆಂಗಳೂರಿನ ರಾಜರಾಜೇಶ್ವರಿನಗರ ಬಿಜೆಪಿ ಶಾಸಕ ಮುನಿರತ್ನ ವಿರುದ್ಧ ದಾಖಲಾಗಿರುವ ಮೂರು ಕ್ರಿಮಿನಲ್ ಪ್ರಕರಣಗಳ ತನಿಖೆಗಾಗಿ ರಾಜ್ಯ ಸರ್ಕಾರ ಸೆ. 21ರಂದು ರಚಿಸಿದ್ದ ಸಿಐಡಿ ಎಡಿಜಿಪಿ ಬಿ.ಕೆ. ಸಿಂಗ್ ನೇತೃತ್ವದ ವಿಶೇಷ ತನಿಖಾ ತಂಡ (ಎಸ್‌ಐಟಿ)ಕ್ಕೆ 25 ಅಧಿಕಾರಿ ಹಾಗೂ ಸಿಬ್ಬಂದಿಗಳನ್ನು ನಿಯೋಜಿಸಿ ರಾಜ್ಯ ಪೊಲೀಸ್ ಮಹಾನಿರ್ದೇಶಕರು ಇಂದು ಆದೇಶ ಹೊರಡಿಸಿದ್ದಾರೆ.

ಈ ತಂಡದಲ್ಲಿ ಮೂವರು ಡಿವೈಎಸ್ಪಿ, ನಾಲ್ವರು ಪೊಲೀಸ್ ಇನ್ಸ್‌ಪೆಕ್ಟರ್, ಮೂವರು ಸಬ್‌ಇನ್ಸ್‌ಪೆಕ್ಟರ್, ಇಬ್ಬರು ಎಎಸ್‌ಐ ಒಳಗೊಂಡಿದ್ದು, ಬೆಂಗಳೂರು ನಗರ ಹಾಗೂ ಗ್ರಾಮಾಂತರದ ವಿವಿಧ ಪೊಲೀಸ್ ಠಾಣೆಗಳಿಂದ ಅಧಿಕಾರಿ ಹಾಗೂ ಸಿಬ್ಬಂದಿಯನ್ನು ಆಯ್ಕೆ ಮಾಡಲಾಗಿದೆ.

ಬೆಂಗಳೂರಿನ ವೈಯಾಲಿಕಾವಲ್ ಠಾಣೆಯಲ್ಲಿ ಮುನಿರತ್ನ ವಿರುದ್ಧ ದಾಖಲಾಗಿರುವ 2 ಪ್ರಕರಣಗಳು ಹಾಗೂ ರಾಮನಗರ ಜಿಲ್ಲೆ ಕಗ್ಗಲಿಪುರ ಠಾಣೆಯಲ್ಲಿ ದಾಖಲಾಗಿರುವ ಅತ್ಯಾಚಾರ ಪ್ರಕರಣದ ತನಿಖೆಯನ್ನು ಎಸ್‌ಐಟಿ ನಡೆಸಲಿದೆ.

ಈ ತಂಡದಲ್ಲಿ ಸಿಸಿಬಿ ಎಸಿಪಿ ಧರ್ಮೇಂದ್ರ ಚಿಕ್ಕಬಳ್ಳಾಪುರ ಸೆನ್ ಠಾಣೆಯ ಡಿವೈಎಸ್ಪಿ ರವಿಕುಮಾರ್, ಕೇಂದ್ರ ವಲಯ ಕಚೇರಿಯ ಡಿವೈಎಸ್ಪಿ ಶ್ರೀಮತಿ ಕವಿತಾ, ವಿಜಯಪುರ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಸುನಿಲ್, ಐಎಸ್‌ಡಿ ಇನ್ಸ್‌ಪೆಕ್ಟರ್ ಬಾಲರಾಜ್, ಡಿಎಸ್‌ಬಿ ಇನ್ಸ್‌ಪೆಕ್ಟರ್ ಅವಿನಾಶ್, ರಾಮನಗರ ಮಹಿಳಾ ಠಾಣೆ ಇನ್ಸ್‌ಪೆಕ್ಟರ್ ಶ್ರೀಮತಿ ಶೋಭಾ, ಬೆಂಗಳೂರಿನ ವಿವಿ ಪುರಂ ಠಾಣೆ ಸಬ್‌ಇನ್ಸ್‌ಪೆಕ್ಟರ್ ರಾಜೇಂದ್ರಪ್ರಸಾದ್, ರೈಲ್ವೇ ಪೊಲೀಸ್ ಕಚೇರಿ ಸಬ್‌ಇನ್ಸ್‌ಪೆಕ್ಟರ್ ಶ್ರೀಮತಿ ಭಾರತಿ, ದೊಡ್ಡಬೆಳವಂಗಲ ಠಾಣೆ ಎಸ್‌ಐ ತೀರ್ಥೇಶ್, ಸಿಐಡಿ ಎಫ್‌ಐಯು ಎಎಸ್‌ಐ ಶಮಂತ್, ಬೆಂಗಳೂರು ನಗರ ರೈಲ್ವೇ ಪೊಲೀಸ್ ಠಾಣೆಯ ಎಎಸ್‌ಐ ಮಂಜುನಾಥ್ ಅವರನ್ನು ನಿಯೋಜಿಸಲಾಗಿದೆ.

ಸಿಬ್ಬಂದಿಗಳಾದ ಕೊತ್ತನೂರು ಠಾಣೆಯ ಹೆಚ್.ಸಿ. ಬಾಲಕೃಷ್ಣ, ಆರ್‌ಎಂಸಿ ಯಾರ್ಡ್ ಠಾಣೆಯ ಮಹಿಳಾ ಹೆಚ್‌ಸಿ ಶ್ರೀಮತಿ ರೂಪಶ್ರೀ, ಕೆ.ಜಿ. ಹಳ್ಳಿ ಸಂಚಾರ ಠಾಣೆಯ ಪಿಸಿ ಜಾಫರ್ ಸಾದಿಕ್ ಖಾನ್, ಸದಾಶಿವನಗರ ಸಂಚಾರ ಠಾಣೆಯ ಪಿಸಿ ಹರೀಶ್ ಬಾಬು, ಬೈಯ್ಯಪ್ಪನಹಳ್ಳಿ ಠಾಣೆಯ ಹೆಚ್‌ಸಿ ಶಿವಣ್ಣ, ಬಂಗಾರಪೇಟೆ ರೈಲ್ವೇ ಪೊಲೀಸ್ ಠಾಣೆಯ ಆರ್‌ಹೆಚ್‌ಸಿ ವಿ.ವಿ. ಅಶೋಕ, ಬೈಯ್ಯಪ್ಪನಹಳ್ಳಿ ರೈಲ್ವೇ ಪೊಲೀಸ್ ಠಾಣೆಯ ಆರ್‌ಹೆಚ್‌ಸಿ ಡಿ.ಎಸ್. ಶಿವಣ್ಣ, ಎಸ್‌ಬಿಸಿ ರೈಲ್ವೇ ಪೊಲೀಸ್ ಠಾಣೆ ಆರ್‌ಹೆಚ್‌ಸಿ ಸಿ.ಎನ್. ಚೇತನ್, ಬೆಂಗಳೂರು ಗ್ರಾಮಾಂತರ ರೈಲ್ವೇ ಪೊಲೀಸ್ ಠಾಣೆಯ ಆರ್‌ಪಿಸಿ ಶಿವೇಗೌಡ, ಬೈಯ್ಯಪ್ಪನಹಳ್ಳಿ ರೈಲ್ವೇ ಪೊಲೀಸ್ ಠಾಣೆಯ ಆರ್‌ಪಿಸಿ ಎನ್.ಡಿ. ಶ್ರೀಕಾಂತ, ಬೆಂಗಳೂರು ಕಂಟೋನ್ಮೆಂಟ್ ರೈಲ್ವೇ ಪೊಲೀಸ್ ಠಾಣೆಯ ಆರ್‌ಪಿಸಿ ನಂಜುಂಡಶೆಟ್ಟಿ, ಬೆಂಗಳೂರು ನಗರ ರೈಲ್ವೇ ಪೊಲೀಸ್ ಠಾಣೆಯ ಡಬ್ಲ್ಯೂಆರ್ ಪಿಸಿಗಳಾದ ಶ್ರೀಮತಿ ರಾಣಿ, ಶ್ರೀಮತಿ ಪ್ರೀತಾ ಅವರನ್ನು ನಿಯೋಜಿಸಲಾಗಿದ್ದು, ಇವರೆಲ್ಲರನ್ನೂ ಆಯಾ ಠಾಣೆಯ ಅಧಿಕಾರಿಗಳು ತಕ್ಷಣದಿಂದ ಕರ್ತವ್ಯದಿಂದ ಬಿಡುಗಡೆಗೊಳಿಸಿ ಸಿಐಡಿ ವಿಶೇಷ ತನಿಖಾ ತಂಡದ ಮುಖ್ಯಸ್ಥರಾದ ಎಡಿಜಿಪಿ ಬಿ.ಕೆ ಸಿಂಗ್ ಅವರ ಮುಂದೆ ವರದಿ ಮಾಡಿಕೊಳ್ಳಬೇಕೆಂದು ತಿಳಿಸಲಾಗಿದೆ.

ಕಾವೇರಿ ಕೊಡವ ಅಸೋಸಿಯೇಷನ್ ವಾರ್ಷಿಕ ಮಹಾಸಭೆ

ಮೈಸೂರು, ಸೆ. 23– ಮೈಸೂರಿನ ಸಾತಗಳ್ಳಿ ವಿದ್ಯಾಶಂಕರ ಬಡಾವಣೆಯಲ್ಲಿರುವ ಕಾವೇರಿ ಕೊಡವ ಅಸೋಸಿಯೇಷನ್‌ನ 23ನೇ ವರ್ಷದ ವಾರ್ಷಿಕ ಮಹಾಸಭೆ ಸೆ. 29ರಂದು ಬೆಳಗ್ಗೆ 9.30ಕ್ಕೆ ಸಂಘದ ಕಚೇರಿಯಲ್ಲಿ ನಡೆಯಲಿದೆ.

ಮಹಾಸಭೆ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಪುಲಿಯಂಡ ಎಸ್. ದೇವಯ್ಯ ವಹಿಸಲಿದ್ದಾರೆ ಎಂದು ಸಂಘದ ಗೌರವ ಕಾರ್ಯದರ್ಶಿ ಕಡೇಮಾಡ ಎಂ. ಬೆಳ್ಳಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


2ನೇ ವರ್ಷದ ಸವಿನೆನಪು



ನೀವು ನಮ್ಮನ್ನಗಲಿ ಇಂದಿಗೆ 2 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ ಹಾಗೂ ನಿಮ್ಮ ಆತ್ಮಕ್ಕೆ ಶಾಂತಿಕೋರುವ ಸ್ನೇಹಿತ
ಬಿ.ಜಿ.ಪ್ರಕಾಶ್, ಯರಗನಹಳ್ಳಿ

ಶ್ರೀ ವಿಜಯ್‌ಕುಮಾರ್ ಎಂ.

4ನೇ ವರ್ಷದ ಸವಿನೆನಪು



ಜಿ.ಚನ್ನಪ್ಪ
(ಲೇಟ್ ತಾಯಮ್ಮನ ಗಿರಿಗೌಡರ ಮಗ)

ನೀವು ನಮ್ಮನ್ನಗಲಿ ಇಂದಿಗೆ 4 ವರ್ಷ ಕಳೆದರೂ ನೀವು ತೋರಿಸಿಕೊಟ್ಟ ದಾರಿಯಲ್ಲಿ ನಡೆಯುತ್ತಿರುವ ಹಾಗೂ ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು: ಧರ್ಮಪತ್ನಿ ಲಕ್ಷ್ಮಿ, ಮಗಳು-ತನ್ಮಯಿ, ಮಂಜುಳ, ಶ್ರೀನಿವಾಸ್, ಲಲಿತ, ನಾಗರಾಜು, ಕುಟುಂಬವರ್ಗ ಕೆ.ಜಿ.ಕೊಪ್ಪಲು – ಜಯನಗರ ಹಾಗೂ ಚಿಕ್ಕಹರದನಹಳ್ಳಿ ಗ್ರಾಮಸ್ಥರು, ಮೈಸೂರು

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಯಮಿತ
ಹದಿನಾರು, ನಂಜನಗೂಡು ತಾಲ್ಲೂಕು

ಸನ್ಮಾನ್ಯ ಸಹಕಾರಿ ಬಂಧುಗಳೇ,
ಮೇಲ್ಕಂಡ ಸಹಕಾರ ಸಂಘದ 2023–24ನೇ ಸಾಲಿನ

ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು

ಸಂಘದ ಅಧ್ಯಕ್ಷರಾದ ಶ್ರೀ ನಂಜುಂಡಸ್ವಾಮಿ ರವರ ಅಧ್ಯಕ್ಷತೆಯಲ್ಲಿ ದಿನಾಂಕ: 25–09–2024ನೇ ಬುಧವಾರ ಬೆಳಿಗ್ಗೆ 11–00 ಗಂಟೆಗೆ ಸರಿಯಾಗಿ ಸಂಘದ ಆವರಣದಲ್ಲಿ ಏರ್ಪಡಿಸಲಾಗಿದೆ.

ಸಂಘದ ಸದಸ್ಯರೆಲ್ಲರಿಗೂ ಆಹ್ವಾನ ಪತ್ರಿಕೆಯನ್ನು ಕಳುಹಿಸಿಕೊಡಲಾಗಿದ್ದು, ಆಹ್ವಾನ ಪತ್ರಿಕೆ ತಲುಪದೇ ಇರುವ ಸದಸ್ಯರು ಇದನ್ನೇ ಆಹ್ವಾನವೆಂದು ಪರಿಗಣಿಸಿ ಸಕಾಲಕ್ಕೆ ದಯಮಾಡಿಸಿ ಮಹಾಸಭೆಯ ಕಾರ್ಯಕಲಾಪಗಳನ್ನು ಯಶಸ್ವಿಯಾಗಿ ನಡೆಸಿಕೊಡಬೇಕಾಗಿ ವಿನಂತಿ.

ಕಾರ್ಯಕಾರಿ ಮಂಡಳಿಯ ಅಪ್ಪಣೆ ಮೇರೆಗೆ,
ಸಹಿ/– ಶ್ರೀ ಹೆಚ್.ಬಿ.ಶಂಕರ್
ಮುಖ್ಯ ಕಾರ್ಯನಿರ್ವಹಣಾಧಿಕಾರಿ.

9ನೇ ವರ್ಷದ ಸವಿನೆನಪು



ಬಿ. ಶ್ರೀರಾಮು
ಸದಾ ನಿಮ್ಮ ನೆನಪಿನಲ್ಲಿರುವ

ದುಃಖತಪ್ತರು:
ಅಡ್ಡಸಿದ್ದಯ್ಯನ ಬಸವಣ್ಣ ಮತ್ತು ಪುಟ್ಟಮ್ಮ ಹಾಗೂ ಕುಟುಂಬವರ್ಗದವರು
ಕೆ.ಜಿ.ಕೊಪ್ಪಲು, ಮೈಸೂರು



ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು




1ನೇ ವರ್ಷದ ಸವಿನೆನಪು



ಶ್ರೀಯುತ ಪಿ.ನರಸಿಂಹ
(ಅಂತಾರಾಷ್ಟ್ರಿಯ ಫುಟ್‌ಬಾಲ್ ಆಟಗಾರರು)
ದೊಡ್ಡ ಒಕ್ಕಲಗೇರಿ, ಮೈಸೂರು
ಸದಾ ನಿಮ್ಮ ನೆನಪಿನಲ್ಲಿರುವ
ಮೈಸೂರು ಜಿಲ್ಲಾ ಫುಟ್‌ಬಾಲ್ ಸಂಸ್ಥೆ

ದುಃಖತಪ್ತರು:
ಕುಟುಂಬವರ್ಗದವರು ಹಾಗೂ ಸ್ನೇಹಿತರು

3ನೇ ವರ್ಷದ ಪುಣ್ಯಸ್ಮರಣೆ



ಶ್ರೀಯುತ ಚನ್ನಯ್ಯನವರು
ನಿವೃತ್ತ ಕೆ.ಇ.ಬಿ, ಬೆಳವಾಡಿ ನಿಧನ: 24.09.2021

ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷವಾದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ

ದುಃಖತಪ್ತರು: ಶ್ರೀಯುತರ ಧರ್ಮಪತ್ನಿ ಶ್ರೀಮತಿ ಚಾಮಮ್ಮ, ಪುತ್ರರಾದ ಬಿ.ಕಾಳಯ್ಯ, ಬೆಳವಾಡಿ ಶಿವಕುಮಾರಸ್ವಾಮಿ, ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಕುಟುಂಬವರ್ಗದವರು ಹಾಗೂ ಗ್ರಾಮಸ್ಥರು.

